


ರೂಪಾರಾಧಕ

ಪರಿವಿಡಿ

ಬಿಡಿಮುತ್ತು—೨೦

ರೂಪಾರಾಧಕ

(ವಿ. ಸೀ. ಮತ್ತು ಅವರ ಕೃತಿ ಪರಿಚಯ)

★

ಉಷಾ ಸಾಹಿತ್ಯ ಮಾಲೆ
ಮೈಸೂರು

ಮೊದಲ ಮುದ್ರಣ—ಡಿಸೆಂಬರ್ ೧೯೫೩

ಬೆಲೆ: ಒಂದು ರೂಪಾಯಿ

ಮುದ್ರಕರು, ಪ್ರಕಾಶಕರು
ಆರ್. ಎನ್. ಹಬ್ಬು
ಉಷಾ ಪ್ರೆಸ್, ಓಲ್ಡ್ ಪೋಸ್ಟ್ ಆಫೀಸ್ ರೋಡ್, ಮೈಸೂರು

ಅರಿಕೆ

ಕಳೆದ ಮೂರು ದಶಕಗಳಿಂದ ಕನ್ನಡಸಾಹಿತ್ಯಪ್ರೇಮಿಗಳಿಗೆ ವಿ.ಸೀ. ಅವರು ಕವಿಗಳಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ ಚಿರಪರಿಚಿತರಾಗಿ ದಾರೆ. ಕನ್ನಡ ನವೋದಯದ ಆಚಾರ್ಯ ಬಿ.ಎಂ.ಶ್ರೀ.ಯವರ ಶಿಷ್ಯರಾದ ವಿ.ಸೀ. ಅವರು, ಗುರು ತೋರಿಸಿದ ದಾರಿಯಲ್ಲೆ ನಡೆದು, ಕನ್ನಡಸಾಹಿತ್ಯದ ಬೆಳವಣಿಗೆಗೆ, ಕನ್ನಡನಾಡಿನ ಹಿತಸಾಧನೆಗೆ, ಕನ್ನಡ ಜನದ ಬಾಳು ಹಸನಾಗುವುದಕ್ಕೆ ದುಡಿದಿದಾರೆ—ಸಾಹಿತಿಯಾಗಿ, ಅಧ್ಯಾಪಕರಾಗಿ.

ಕಾವ್ಯಕ್ಷೇತ್ರವನ್ನುಳಿದು ಮಿಕ್ಕ ಯಾವೊಂದು ಸಾಹಿತ್ಯವಿಭಾಗದಲ್ಲೂ ಅವರ ಕೆಲಸ ನಮಗೆ ಬಹು ದೊಡ್ಡದಾಗಿ ಕಾಣದಿರಬಹುದು; ಆದರೆ ಒಟ್ಟಿನಲ್ಲಿ ಆಧುನಿಕ ಕನ್ನಡಸಾಹಿತ್ಯಸೌಧ ಇಷ್ಟು ದೇದೀಪ್ಯಮಾನವಾಗಿ ಬೆಳಗುತ್ತಿರುವುದಕ್ಕೆ ವಿ.ಸೀ. ಅವರು ಸಲ್ಲಿಸಿರುವ ಸೇವೆ ಸಾಮಾನ್ಯವಾದುದಲ್ಲ.

ಸಹಸ್ರಾರು ಜನ ಅವರ ವಿದ್ಯಾರ್ಥಿಗಳಾಗಿದ್ದು, ಅವರು ಹಾಕಿಕೊಟ್ಟ ಹಾದಿಯಲ್ಲಿ ನಡೆದು, ಅವರು ಉರಿಸಿದ ಆದರ್ಶದ ದೀವಿಗೆಯ ಬೆಳಕಿನಲ್ಲಿ ತಮ್ಮ ಬದುಕನ್ನು ತಿದ್ದಿಕೊಂಡಿದಾರೆ; ಬೆಳೆಸಿಕೊಂಡಿದಾರೆ.

ಕನ್ನಡನಾಡಿನ ಪ್ರಕೃತಿಸೌಂದರ್ಯದ ನೆಲವೀಡಾದ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ಈಗ ಸುಮಾರು ಇಪ್ಪತ್ತು ವರುಷಗಳ ಹಿಂದೆ ಅವರು ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು. ಈಗ ಅದೇ ಜಿಲ್ಲೆಯ ಕುಮಟಾದಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದಾರೆ. ಕನ್ನಡ ಜನ ಅತ್ಯಂತ ಪ್ರೀತಿಯಿಂದ ವಿ.ಸೀ. ಅವರಿಗೆ ಸಲ್ಲಿಸುತ್ತಿರುವ ಗೌರವ, ಹೊರಿಸುತ್ತಿರುವ ಹೊಣೆ ಇದು. ಅದಕ್ಕೆ ಅವರು ತಕ್ಕವರೆಂದು ಕನ್ನಡ ಜನ ಅರಿತುಕೊಂಡು ತಮ್ಮನ್ನು ತಾವೇ ಗೌರವಿಸಿಕೊಂಡಿದಾರೆ.

ಸಂದರ್ಭೋಚಿತವಾಗಿ ಈ ಪುಸ್ತಕ ಪ್ರಕಟವಾಗುತ್ತಿರುವುದು ನಮಗೆ ಅತ್ಯಂತ ಸಂತೋಷವಾದ ಸಂಗತಿ. ವಿ.ಸೀ. ಅವರ ಸಾಹಿತ್ಯದ, ವ್ಯಕ್ತಿತ್ವದ ಹಲವು ಮುಖಗಳನ್ನು ವಿವಿಧ ಲೇಖಕರಿಂದ ಬರೆಸಿ ಇಲ್ಲಿ ಸಂಗ್ರಹಿಸಲಾಗಿದೆ. ವಿಮರ್ಶೆಯ ವಿಭಾಗದಲ್ಲಿ ಬಡವಾಗಿರುವ ಕನ್ನಡಕ್ಕೆ ಇಂತಹ ಪುಸ್ತಕಗಳು ಎಷ್ಟು ಬಂದರೆ ಅಷ್ಟು ಒಳ್ಳೆಯದು. ನಮ್ಮ ಜನ ತಮ್ಮ ಲೇಖಕರ, ಕಲಾವಿದರ ಬಗ್ಗೆ ಎಷ್ಟು ತಿಳಿದರೆ ಅಷ್ಟು ಉಪಯೋಗ.

ಇಲ್ಲಿ ಬರೆದಿರುವ ಲೇಖಕರೆಲ್ಲ ವಿ.ಸೀ. ಅವರಲ್ಲಿ ತಮಗಿರುವ ಅಭಿಮಾನದಿಂದಾಗಿ ಅಲ್ಪ ಅವಕಾಶದಲ್ಲಿ ಲೇಖನಗಳನ್ನು ಬರೆದುಕೊಟ್ಟಿದಾರೆ. ತಮ್ಮ ಕವಿತಾಸಂಕಲನ 'ಬಾಳದೇಗುಲದಲ್ಲಿ' ವಿ.ಸೀ.ಯವರನ್ನು ಕುರಿತು ಬರೆದ 'ರೂಪಾರಾಧಕ' ಕವಿತೆಯ ಕೆಲವು ಭಾಗಗಳನ್ನು ಇಲ್ಲಿ ಆಯ್ದುಕೊಳ್ಳಲು ಅನುಮತಿ ಕೊಟ್ಟ ಶ್ರೀ ವಿ. ಕೃ. ಗೋಕಾಕರಿಗೂ, ತಮ್ಮ 'ಕನ್ನಡ ಕುಲರಸಿಕರು' ಮಾಲೆಯಲ್ಲಿ ಪ್ರಕಟವಾದ ವಿ.ಸೀ.ಯವರನ್ನು ಕುರಿತ ಲೇಖನವನ್ನು ಇಲ್ಲಿ ಸೇರಿಸಲು ಒಪ್ಪಿಗೆಯಿತ್ತ ಶ್ರೀ ಅ. ನ. ಕೃಷ್ಣರಾಯರಿಗೂ ನಾನು ಕೃತಜ್ಞ.

ಶ್ರೀ ಗೋಕಾಕರು ತಮ್ಮ ಕವಿತೆಗಿರಿಸಿದ ಹೆಸರನ್ನೇ ನಾವು ಈ ಸಂಗ್ರಹಕ್ಕೂ ಇಟ್ಟಿದೇವೆ. ಆ ಐದಕ್ಷರಗಳಲ್ಲಿ ವಿ.ಸೀ.ಯವರ ಜೀವನದ ವಿಶಿಷ್ಟತೆ, ಕಾವ್ಯಮನೋಧರ್ಮ ಅಡಕವಾಗಿವೆ.

ಈ ಸಂಕಲನಕ್ಕೆ ಲೇಖನವನ್ನು ಬರೆದುಕೊಟ್ಟ ಲೇಖಕರಿಗೆ, ಮುಖಪುಟದ ವಿ.ಸೀ.ಯವರ ರೇಖಾಚಿತ್ರವನ್ನು ಬರೆದ ಕಲಾವಿದ ಎಸ್. ಎನ್. ಸ್ವಾಮಿಯವರಿಗೆ, ಅದರ ಪಡಿಯಚ್ಚನ್ನು ನಮ್ಮ ಉಪಯೋಗಕ್ಕಿತ್ತ 'ಲೇಖಕ' ಪತ್ರಿಕೆಯ ಸಂಪಾದಕರು ಶ್ರೀ ಶಾ. ಬಾಲೂರಾಯರಿಗೆ, ಒಳಗಡೆಯ ಚಿತ್ರವನ್ನು ದೊರಕಿಸಿಕೊಟ್ಟ ಶ್ರೀ ಟಿ. ಎಸ್. ಸತ್ಯನ್ ಅವರಿಗೆ ನನ್ನ ವಂದನೆಗಳು. ಇನ್ನೂ ಹಲವು ರೀತಿಗಳಲ್ಲಿ ನೆರವಾದ ನನ್ನ ಗುರುಗಳು ಶ್ರೀ ಎಸ್. ವಿ. ಪರಮೇಶ್ವರಭಟ್ಟರನ್ನೂ, ಗೆಳೆಯ ಕೆ. ವಿ. ಸುಬ್ಬಣ್ಣನವರನ್ನೂ ಇಲ್ಲಿ ಪ್ರತ್ಯೇಕವಾಗಿ ನೆನೆಯಬೇಕು.

ಈ ಪುಸ್ತಕವನ್ನು ಒಂದು ರೂಪಕ್ಕೆ ತರುವ ಜವಾಬ್ದಾರಿಯನ್ನು ನನ್ನ ಮೇಲೆ ಹೊರೆಸಿ, ಇದನ್ನು ಪ್ರಕಟಿಸುತ್ತಿರುವ ಗೆ. ಹಬ್ಬು ಮತ್ತು ನಾನು ವಿ.ಸೀ. ಅವರಲ್ಲಿ ತುಂಬ ಗೌರವವಿಟ್ಟುಕೊಂಡವರು; ಅವರ ಸಾಹಿತ್ಯದಲ್ಲಿ ವಿಶ್ವಾಸವಿರಿಸಿಕೊಂಡವರು. ಮೇಲಿನೆಲ್ಲರ ನೆರವಿನಿಂದ ನಮ್ಮ ಗೌರವ, ವಿಶ್ವಾಸಗಳ ಸಂಕೇತವಾಗಿ ಈ ಪುಸ್ತಕ ಪ್ರಕಟವಾಗುತ್ತಿದೆ ಎಂದರೆ ತಪ್ಪಾಗಲಾರದು.

ವಿ.ಸೀ. ಅವರ ಹಿತೈಷಿಗಳಿಗೆ, ಅವರ ಸಾಹಿತ್ಯಪ್ರೇಮಿಗಳಿಗೆ ಈ ಪುಸ್ತಕವನ್ನು ನಮ್ರತೆಯಿಂದ ಅರ್ಪಿಸುತ್ತಿದೇವೆ. ಇದು ಅವರ ಮೆಚ್ಚುಗೆಗೆ ಪಾತ್ರವಾಗುತ್ತದೆಂದು ನಂಬಿದೇವೆ.

ಮೈಸೂರು: ೨೪–೧೨–೫೩ **ಹಾ. ಮಾ. ನಾಯಕ**



ವಿ. ಸೀ.

ರೂಪಾರಾಧಕ

೧

ಪೆನ್ನಿನಲ್ಲಿ ಮಸಿ ತುಂಬುವ
ಗಾಜುಗೊಳವೆಯಿಂದ ನೀನು
ಕಾಫಿಯಲ್ಲಿ ಹಾಲನು ಹನಿಬಿಡುವಿಯೆಂದರು.
ಹನಿಯು ಹೆಚ್ಚು ಹನಿಯು ಕಡಿಮೆ-
ಯಿರಲು ಪೇಯ ಹೇಯವೆಂದು
ತುಟಿಗೆ ತಾರದದನು ಬಿಟ್ಟುಕೊಡುವಿಯೆಂದರು.

ನಿನ್ನ ಚೆಲುವ ಕವನಗಳನು
ಅಂದವಾಗಿ ಮುದ್ರಿಸಿಡಲು
ಹೊತ್ತ ಸಾಲಕೆಲ್ಲ ದುಡಿಮೆ ಸಾಲದೆಂದರು.
ಕಾವ್ಯರಂಗದಲ್ಲಿ ಕವಿಯು ;
ಅರೋಚಕಿಯು ಬಾಳಿನಲ್ಲಿ :
ಎಂದು ಕಂಡ ಹಾಗೆ ನಿನ್ನನಾಡಿಕೊಂಡರು.

ಕಾವ್ಯದಲ್ಲಿ ಬರಿಯ ರೂಪ
ನಿನ್ನ ಕಣ್ಣ ಸೆರೆಹಿಡಿಯಿತು ;
ತಿರುಳನಾಯ್ವ ರಸಿಕರನ್ನು ಜರಿವೆಯೆಂದರು.
ಡೊಂಕು ಗೆರೆಯು, ಸರಲ ರೇಖೆ,
ಕಣಿವೆದಾರಿಗಿರುವ ಮಣಿತ,—
ಶಬ್ದಸೃಷ್ಟಿಯಲ್ಲು ಇದರ ಪರಿವೆಯೆಂದರು.

ಕವನವೊಂದು ತಾಲ ರಾಗ;
ಅಂಟಿತು ಸಂಗೀತರೋಗ:
ಸ್ವರದಿಂಚರ ಕಸುವ ಮಾರಿಕೊಂಡೆಯೆಂದರು.
ಮಾತುಗಾರನಾಗಿ ನಿಂತು
ಮಾತಿನೊಂದು ಸೂರು ಹಿಡಿದು
ನುಡಿಯ ಮೇಲೆ ನುಡಿಯ ತೂರಿಕೊಂಡೆಯೆಂದರು.

ಒಂದು ಮರದ ನೆಳಲಿನಲ್ಲಿ
ಬೆಳೆದು ನೀನು ಮರವಾಗದೆ
ಕಿರುತರುವಾಗಿರುವೆಯೆಂದು ಹಲವರೆಂದರು.
ತಾರತಮ್ಯ ವಿನಯವಾಗಿ
ಕೇಸರಿಡುವ ಸೀಮೆಯಲ್ಲಿ
ಉಸಿರುಕಟ್ಟಿ ಗೆಲುವ ಕಳೆದುಕೊಂಡೆಯೆಂದರು.

೨

ಅಂದರಿದನು ಅಂದರದನು
ಏನಂದರದೇನು ನಿನಗೆ?
ನೀನು ನೀನೆಯಾಗಿ ನಿಂತು ಬೆಳಕ ಬೀರುವೆ.
ಶ್ರುತಿಸುಂದರ ಕಾವ್ಯದಲ್ಲಿ
ವಾಗರ್ಥವ ತೇಲಿಸುತ್ತ
ಜೀವ ಕಂಡ ಸವಿಯ ಲೋಕಕೆಲ್ಲ ಸಾರುವೆ.

ನಿನ್ನ ಚೆಲುವಿನಾರಾಧನೆ-
ಯೊಂದು ಯೋಗವೊಂದು ಭೋಗ
ಅದಕೆ ಪಟ್ಟ ಕಷ್ಟವೆಲ್ಲ ಸಫಲವೆನ್ನುವೆ.
ಸಣ್ಣ ಮಾತು ಸಣ್ಣ ರೀತಿ-
ಯಲ್ಲಿ ಮೂಡದಂಥ ಬಣ್ಣ
ಬಿಣ್ಪಿನಲ್ಲಿ ಬರುವದೆಂತು? ವಿಫಲವೆನ್ನುವೆ.

ಕಡಲ ತೀರದಲ್ಲಿ ಜೊತೆಯ
ರಸಿಕರಾಟವಾಡಿ ನೋಡು—
ತುರಿಬಿಸಿಲಲಿ ಮಳಲಿನಲ್ಲಿ ದಾಹಗೊಂಡಿರೆ,
ನೀರು ಕಾಳು ಸಿಗದೆ ಹೋಗಿ
ಹಸಿವೆ ಹೆಚ್ಚಿ ಹಿಂಗದಾಗಿ
ದಣಿವಾರಿಸೆ ನೆಳಲಿಲ್ಲದೆ ಮೋಹಗೊಂಡಿರೆ,

ಬಕ್ಕತಲೆಯಲಿಂತು ನೀನು
ಅರಳಿದೊಂದು ಕುಸುಮನೆದುರು
ನಿಂತು ಕ್ಷುಧೆ-ಪಿಪಾಸೆಗಳನು ಮರೆತು ನೀಡಿದೆ.
ನಿನ್ನ ಕಣ್ಣನದರ ಸಿರಿಗೆ
ನೆನೆಸುತದರ ಮಾದರಿಯನು ;
ಹೂವಿನಲ್ಲಿ ಹೂವಾಗುತ ಬೆರೆತು ಕೂಡಿದೆ.

ಚೆಲುವಿನ ಮಾಲಕುಮಿಯಿವಳು
ವರ ಮಾನಸಪುತ್ರಿಯೆನಲು,—
ಎಲ್ಲಕಿಂತ ಬಗೆಯೆ ಮೇಲದೆಂದು ಸಾರಿದೆ.
ಬಗೆಯನು ನಡೆ-ನುಡಿಗಳಲ್ಲಿ
ದಿನಂದಿನದ ಬಾಳಿನಲ್ಲಿ
ಸಿಂಗರಿಸುವ ಜಾಣು ನಿನ್ನೊಳೊಂದೆ ಸೇರಿದೆ.

ಲೋಕದಾಚೆಗಿರುವದೇನೊ
ತಿಳಿಯೆ. ಲೋಕದಲ್ಲಿ ಸೊಬಗ
ಕಾಣ್ಬ ಕಣ್ಣೆ ನಿನ್ನ ಜೀವವೆಂದು ನುಡಿದಿಹೆ.
ಲೋಕ ಸಟೆಯೊ ದಿಟವೊ ಕಾಣೆ.
ಜೀವಚಕ್ಷು ಸತ್ಯವೆಂಬ
ಶ್ರದ್ಧೆಯಿಂದ ಬಾಳಬಟ್ಟೆಯಲ್ಲಿ ನಡೆದಿಹೆ.

* * *

ರೂಪವೊಂದೆ ನಿನ್ನ ಕಣ್ಣು—
ಪ್ರೀತಿಯೆನಲು ನುಡಿವೆ ನೀನು,—
ರೂಪಣವೇ ಮುಖ್ಯ. ರೂಪವಿಲ್ಲದರ್ಥವು
ವ್ಯರ್ಥವಹುದು. ಕಲೆಯ ಸಾರ್ಥ-
ಕತೆಯು ರೂಪದೆಸಕದಲ್ಲಿ.
ರೂಪವೆ ಅಮರತೆಯ ದಾರಿ; ಪರಮಾರ್ಥವು.

ಬೇಕು ಚಿತ್ರ–ಸಂಗೀತ-
ವೆನಲದೇಕೆ ವಿಪರೀತ?
ಚಿತ್ರಗಾನವಿರದ ಕೃತಿಯು ವಿಕೃತಿಯಲ್ಲವೆ?
ಕಾವ್ಯಕಿರುವದೋಟ, ನೋಟ;
ಗಾನದ ಜೊತೆಗರ್ಥದಾಟ:
ಗುಣತ್ರಯಗಳ ಮಿಲನವಿದರ ಪ್ರಕೃತಿಯಲ್ಲವೆ?

ದೂರಿನಿಂದ ನುಣ್ದನಿಯದು
ಮೆಲುಗಾಳಿಯನೇರಿ ಬಂದು
ಮೆಲ್ಲನೆಮ್ಮ ಹೃದಯವನ್ನೆ ಸೆಳೆಯುವಂತೆಯೆ,
ಸಂಗೀತವನೇರಿ ಬಹುದು
ಕವಿಯು ಪಡೆವ ಸುಭಗ ಶ್ರುತಿಯು,—
ಅರುಣರಥವನೇರಿ ಸೂರ್ಯ ಹೊಳೆಯುವಂತೆಯೆ.

* * *

ಅರೋಚಕಿಯೆ ಬಾಳಿನಲ್ಲಿ?
ರೋಚಕಿಯಿರಲಾವ ಪುಣ್ಯ?
ಇದ್ದ ರುಚಿಯ ಶುಚಿಯನು ಕವಿ ಕಾಯಲೆಳಸಲು
ದೋಷವೆಲ್ಲಿ? ಸಿದ್ಧನಿರಲು
ಸೌಂದರಾಭಿರುಚಿಯು ಕೇಳ್ದ
ಕ್ರಯವನಿತ್ತು, ಮನದಾಸೆಯ ಪೂರ್ತಿಗೊಳಿಸಲು?

ತಿನ್ನಲು ಕೂಳಿರದ ದೇಶ ;
ಎಲ್ಲ ದುಃಖದವುರ ಕೋಶ-
ವೆಮ್ಮ ನಾಡದಿಲ್ಲೇತಕೆ ಚೆಲ್ವುಪಾಸನೆ ?
ನಾಡಿನ ಬರ ಹಿಂಗುವನಕ
ನಿರ್ಗತಿಕರು ತಂಗುವನಕ
ಸುಳಿಯದಿರಲಿ ನಮ್ಮ ಮನದೊಳಿಂಥ ವಾಸನೆ :

ಎಂದೊರೆಯುತ ಜನತೆಗಿತ್ತೆ
ನಾಡ ಸಂಪದಭ್ಯುದಯುವ
ಕುರಿತು ನಿನ್ನ ಹಂಚಿಕೆಗಳ ಮಾಲೆಯೊಂದನು.
ಅರ್ಥಶಾಸ್ತ್ರವಿಶಾರದನು,—
ನಾಡನೊಡ್ಡಿ ಹಾಡನಡ್ಡ-
ಗಟ್ಟುವರಿಗೆ ತೆರೆಯಬಲ್ಲೆ ಶಾಲೆಯೊಂದನು !

ಬಾಳ ಹುದುಲ ಬಲ್ಲೆ ನೀನು.
ಅಲ್ಲೆ ಬೆಳೆದೆ ಕೆಸರಿನಲ್ಲಿ
ಸೌಂದರ್ಯದ ಮಹಾಲಕ್ಷ್ಮಿ ನಿನ್ನ ಹೃದಯದಿ
ಪವಡಿಸಿರಲು ; ಹಾಡಿಗೊಂದು
ಕಂಣನಿತ್ತೆ ನಾಡಿಗೊಂದು ;
ಜನತೆಯಿದನು ತಿಳಿಯಬಹುದು ನಾಡಿನುದಯದಿ.

ಒಂದು ಮರದ ನೆಳಲಿನಲ್ಲಿ
ಬೆಳೆದೆಯೆಂಬ ನುಡಿಗೆ ನಕ್ಕು
ಪರರನುಪಮೆಯಿಂದ ಕೊಲುವ ಬಗೆಯಿದೆನುತಿಹೆ.
ಮರವಲ್ಲವು ನರನು ; ತಾನೆ
ತನ್ನ ನೆಳಲು–ಬೆಳಕ ಕಾಂಬ.
ಹಿರಿಯರನಾದರಿಸಲೆಲ್ಲಿ ದೋಷವೆನುತಿಹೆ.

ತಾರತಮ್ಯದಾಗರವೆನ್ನೆ,—
ನೋಡು ನಾಡು ರಮ್ಯವಲ್ಲೆ ?
ಎಲ್ಲ ತರಗಳೆಲ್ಲ ನಯದ ಕಲೆಯದಿಲ್ಲಿದೆ :
ನುಡಿವೆ ನೀನು ; ನೈಲದೈಸಿರಿ,
ಯಂತ್ರವಿದ್ಯೆ, ಕೈಗಾರಿಕೆ,—
ನಾಡ ನಿಧಿಯ ಸೆಲೆಯೆ ನಮ್ಮ ಸೀಮೆಯಲ್ಲಿದೆ.

ಕಹಿನುಡಿಗಳನಿಂತು ನೀನು
ಪಡಿನುಡಿಯುತ ವಿನಯದಿಂದ
ದಾರಿತಪ್ಪಿ ಮೇರೆದಪ್ಪುತೊಂದು ಹೆಜ್ಜೆಯ
ತಪ್ಪಿತಸ್ಥನಂತೆ ತುಳಿದು
ಬಾಳಲಿಲ್ಲ ಬದುಕಲಿಲ್ಲ :
ಸಾರ್ಥಕತೆಯಿದಿಂತು ನೀನು ಪಡೆದ ಬಿಜ್ಜೆಯ.

೩

ಒಮ್ಮೆ ಮನೆಯ ತೋಟದಲ್ಲಿ
ತುಂಬು ಗುಲಾಬಿಗಳರಳುತ
ಗಮಗಮಿಸಲದೇಕೊ ನಿನ್ನ ಬಗೆಯು ಮುದುಡಿತು.
ಹೂವ ತುಂಬಿದಂಥ ತುಂಬು
ನಿನ್ನ ಬಾಳನೆಂದು ತುಂಬಿ
ಬರುವದೆಂಬ ಚಿಂತೆ ನಿನ್ನ ಬಗೆಯ ಕದಡಿತು.

ಊರಿಗೆದ್ದ ನನ್ನ ತಡೆದು
ತೋಟಕೊಯ್ದು ತಿಂಗಳಲ್ಲಿ
ಕಂಗಳರಳಲಂಗೈಗಳ ನಡುವೆ ತೀಡುತ
ಒಂದನು ಮತ್ತೊಂದನೆತ್ತಿ
ತೋರಿಸಿದ್ದೆ ಹೂವಿಗಿದ್ದ
ಪೂರಣ ನಿನಗಿಲ್ಲವೆಂಬ ಭಾವ ಮೂಡುತ.

ಗೆಳೆಯ! ಕೇಳು ನಿನ್ನ ಕೊರತೆ
ದಿವ್ಯಕಾವ್ಯರಚನೆಯೊರತೆ
ಮಣ್ಣು ಮಾತ್ರ ಹೂವಿನಲ್ಲಿ ಕಣ್ಣುವಡೆಯಿತು.
ಮುಂದದೊಂದು ದಿನಕೆ ಪೂರ್ಣ-
ವಾಗಲಿರುವ ನಿನ್ನ ಜೀವ
ಕಂಡುತಿಹ ಕಾವ್ಯದಲ್ಲಿ ಬಣ್ಣವಡೆಯಿತು.

ನೀನು ಮೂಡಿಸಿದ್ದ ಮುಗುಳು
ನೀನು ಹಾಡಿಸಿದ್ದ ಬೆಳಗು
ನೆಲದ ಮೂಡು ಮುಳುಗಿನಂತೆ ಕೊನೆಗು ಬಾಳ್ವವು.
ನೀನು ಪಾದ ಪೂಜೆಗೆಯ್ದು
ನೇಹ, ನಲುಮೆ, ಭಕ್ತಿ, ಶ್ರದ್ಧೆ,
ನಿರ್ವಂಚಿತ ಬುದ್ಧಿ ನಾಡಿನೆದೆಯನಾಳ್ವವು.

ನಿನ್ನ ಧೀರ ಲಲಿತ ವಾಣಿ
ಬೀರ ಕಡಗವನ್ನು ನಾಡ
ಕೈಗೆ ತೊಡಿಸುತಭಯವೊರೆದು ನಿತ್ಯ ನಲಿವಳು;
ದಿನಕದೊಂದು ಹೊಸ ಪ್ರಪಂಚ;
ಇಂದಿನ ಸಿರಿ ನಾಳೆ ಸಂಚ-
ವೆಂದು ಚೆಲುವಿಗಿಹ ಚಿರಂತನತೆಯನುಲಿವಳು.

ಒಂದು ತರಂಗಿಣಿಯ ತಡಿಗೆ
ಮತ್ತದೊಂದು ಗುಡಿಯ ಬಳಿಗೆ
ನಿಂತ ಮಾಮರಗಳ ತೋಪಿನಲ್ಲಿ ಗಾಳಿಯು
ತಂಬೆಲರಿನ ಮೃದು ನಾದವ
ಪ್ರಲಯಾನಿಲದಾಮೋದವ
ಗೆಯ್ವ ತೆರದಿ ಗೀತಿಸುವುದು ಪದಗಳೋಳಿಯು.

ಬಾಳಿನ ಕಿಲ್ಬಿಷವೆಲ್ಲವ,
ಕುರೂಪವನು ತೊಡೆದುಹಾಕು—
ತಂಗಾಂಗದ ಸೌಂದರವದು ಹೊರಸೂಸುವದೆಂದೋ!
ಒಳಹೊರಗನು ಮೈಮನವನು
ಮನೆಮಠವನು ಚೇತನವನು
ಬೆಳಗಿಸಿ ಬೆಳಕಿನ ಹಾಸಿಗೆಯನು ಹಾಸುವದೆಂದೋ!

ಅಂದಿಗೆ ತುಂಬುತ ತುಳುಕುತ
ನಿನ್ನೀ ಜೀವದ ತುಂಬಿಯು
ಗೆಯ್ಯುವ ಗಾನವದಿಂದೇ ತುಂಬಿಹುದೀ ಕಿವಿಯು.
ಇಂದಿಗು ಕಣ್ಣೆವೆಯಿಕ್ಕದೆ
ಅನಿಮಿಷನಂತೆಯೆ ನಿಂತೆನು
ಆ ದಿನ ಕಾಣುವದೆನ್ನುತ ನಿನ್ನೊಳು ಬಹ ಕವಿಯು.

ಹೃತ್ತಲ್ಪದಿ ನಿದ್ರೆಯಲಿಹ
ಸೌಂದರಲಕ್ಷ್ಮಿಯು ನಿನ್ನೊಳ-
ಗಿಂದಿಳಿಯುತ ಕಣ್ಣೆದುರಿಗೆ ನಿಲ್ಲಲು ರಾಜಿಸಲು
ನೀ ನೋಡುವೆ ಮೊದಮೊದಲಿಗೆ
ಮದರಂಗಿಸಿದೆಳೆಯುಗುರನು,
ಕೆಂಬೆರಳನು, ಪದಪದ್ಮವ; ದೇಹವ ಮಾಜಿಸಲು

ಚಿಕ್ಕೆಗಸೂತಿಯ ಸೀರೆಯು,
ಕಂಣೆತ್ತುವೆ ಮುಖಚಂದ್ರಮ-
ನನು ನೋಡುತ, ತಣಿದಿಹ ಜೀವವನರ್ಪಿಸಲೆಂದು ;
ಎತ್ತಲು ಮಾದೇವಿಯು ತ-
ನ್ನಭಯಕರಂಗಳನೆತ್ತಲು
ಮೈದಡವಲು, ಮೈಮನವನು ಸಂತರ್ಪಿಸಲೆಂದು.

ಅಂದಿನ ದಿನ ನೀನೊರೆವುದು
ಸಿಡಿಲು ಮಂತ್ರಿಸಿರುವ ವಾಣಿ;
ಮಿಂಚಿನ ದೀಪದ, ಮೊಳಗಿನ ಗಂಟೆಯ ಮೇಳದಲಿ;
ಅಂದಿನ ದಿನ ನೀ ಮಿಡಿವುದು
ಚೆಲುವೆ ಮೋಹಿಸಿರುವ ವೀಣೆ
ದೇವಕನ್ನೆಯರ ಮೃದಂಗ ಮಂಗಲ ತಾಳದಲಿ.

ವಿ. ಕೃ. ಗೋಕಾಕ

ಕುಲರಸಿಕ

ಧರ್ಮಸ್ಥಳದಲ್ಲಿ ಪ್ರತಿವರ್ಷ ಕಾರ್ತೀಕಮಾಸದ ದೀಪೋತ್ಸವ ಸಂದರ್ಭ ದಲ್ಲಿ ಶ್ರೀ ಮಂಜಯ್ಯ ಹೆಗ್ಗಡೆಯವರು ಸರ್ವಧರ್ಮ ಸಮ್ಮೇಳನ, ಸಾಹಿತ್ಯೋ ತ್ಸವಗಳನ್ನು ವಿಜೃಂಭಣೆಯಿಂದ ನಡೆಸುತ್ತಾರೆ. ೧೯೪೯ನೆಯ ಇಸವಿಯ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷರು ಮೈಸೂರು ಕಾಲೇಜಿನ ಒಬ್ಬ ಪಂಡಿತರು; ಸಾಹಿತ್ಯೋತ್ಸವದ ಅಧ್ಯಕ್ಷರು ವಿ. ಸೀತಾರಾಮಯ್ಯನವರು. ಮೊದಲನೆಯ ದಿನದ ಅಧ್ಯಕ್ಷರು ಎರಡನೆಯ ದಿನವೂ ತಮ್ಮ ಅಧ್ಯಕ್ಷತೆಯನ್ನು ಚಲಾಯಿಸ ತೊಡಗಿದರು. ಆರಂಭಭಾಷಣವನ್ನೂ ತಾವೇ ಮಾಡಿದರು. ಬರಲಿರುವ ಭಾಷಣಕಾರರ ಪರಿಚಯವನ್ನೂ ಆರಂಭಿಸಿದರು. ಈ ಪರಿಸ್ಥಿತಿಯಲ್ಲಿ ಅಂದಿನ ನಿಯೋಜಿತ ಅಧ್ಯಕ್ಷರ ಪಾಡು ಎಂಥದೆಂದು ವರ್ಣಿಸಲಗತ್ಯವಿಲ್ಲ. ಎಲ್ಲವನ್ನೂ ಶಾಂತಚಿತ್ತರಾಗಿ ಸಹಿಸಿಕೊಂಡು ಅಂದಿನ ಉತ್ಸವವು ಆಭಾಸವಾಗದಂತೆ ಸೀತಾ ರಾಮಯ್ಯನವರು ನಿರ್ವಹಿಸಿಕೊಂಡು ಹೋದರು. ಸೀತಾರಾಮಯ್ಯನವರ ಮನೋದಾರ್ಢ್ಯ, ಸಂಸ್ಕೃತಿಯ ಪ್ರತೀಕವಾಯಿತು ಅಂದಿನ ಸಾಹಿತ್ಯೋತ್ಸವ.

ಸೀತಾರಾಮಯ್ಯನವರ ಜೀವನದ ಎಲ್ಲ ಪ್ರಕಾರಗಳಲ್ಲಿಯೂ ಈ ಗುಣ ಎತ್ತಿಕಾಣುತ್ತದೆ. ಇವರ ಸಹನೆ, ಸೌಶೀಲ್ಯ, ಸೌಜನ್ಯ ಅನ್ಯಾದೃಶವಾದುದು.

ತಮ್ಮ ಜೀವನದ ಬಹುಭಾಗವನ್ನು ಸೀತಾರಾಮಯ್ಯನವರು ಮೈಸೂರಿನ ಶಾರದಾ ವಿಲಾಸ ಪ್ರೌಢವಿದ್ಯಾಶಾಲೆಗೆ ತೇಯ್ದು ಕಾಲೇಜಿಗೆ ಕನ್ನಡ ಅಧ್ಯಾಪಕರಾಗಿ ಬಂದರು. ಆ ಶಾಲೆಯ ಲೋಕವಿದಿತ ಕೀರ್ತಿಗೆ ಸೀತಾ ರಾಮಯ್ಯನವರ ಸೇವೆ ಬಹುಮಟ್ಟಿಗೆ ಕಾರಣವಾಗಿದೆ.

ಸೀತಾರಾಮಯ್ಯನವರನ್ನು ಅವರ ಭಾಷಣಗಳು, ಗ್ರಂಥಗಳಿಂದ ಅರಿಯು ವುದು ಸಾಧ್ಯವಿಲ್ಲ. ಅವರನ್ನು ಸರಿಯಾಗಿ ತಿಳಿಯಲಿಚ್ಛಿಸುವವರು ಅವರ ವ್ಯಾಸಂಗ ಕೋಣೆಯಲ್ಲಿ ಕುಳಿತು, ಅವರೊಂದಿಗೆ ಒಂದು ಕಪ್ಪು ಚಹಾ ಕುಡಿಯಬೇಕು. ಗೋಡೆಯ ಬದಿಗೆ ಓರಣವಾಗಿ ಪೇರಿಸಿದ ಗ್ರಂಥರಾಶಿ; ನೆಲದ ಮೇಲೊಂದು ಸೇಲಮ್ಮಿನ ಸಿಲ್ಕ್ ಜಮಖಾನೆ; ಅಚ್ಚುಕಟ್ಟಾದ ಚಹಾ ಪಾತ್ರೆಗಳು—ಉಪಯೋಗಿಸುವುದಾದರೂ ಶ್ರೇಷ್ಠತರಗತಿಯ ಆರೆಂಜ್ ಪೀಕೋ

ಚಹಾ ಎಲೆ. ತುಂಬಿದ ಪ್ರೀತಿ ವಿಶ್ವಾಸಗಳಿಂದ ವಿ.ಸೀ. ಚಹಾ ಕುಡಿಯದವರಿಗೂ ಒಂದೆರಡು ಕಪ್ ಚಹಾ ಕುಡಿಸಬಲ್ಲರು. ಈ ಮಧ್ಯೆ ಗಂಗಾಪ್ರವಾಹದಂತೆ ವಿದ್ವತ್‌ವಿರಾಜಿತವಾದ ಸರಸ ಮಾತುಗಾರಿಕೆ. ಕುಡಿದ ಚಹಾ ನೆನಪಿನಿಂದ ಮರೆಯಾಗಬಹುದು; ಆದರೆ ವಿ.ಸೀ. ಅವರ ಆತಿಥ್ಯ, ಅಂತಃಕರಣ ಮರೆಯಲು ಶಕ್ಯವಿಲ್ಲ.

ನಿತ್ಯ ಧರಿಸುವ ಉಡುಪಿನಿಂದ ಸಾಹಿತ್ಯಕೃತಿಗಳವರಿಗೆ ವಿ.ಸೀ. ಅವರಲ್ಲಿ ಅಚ್ಚುಕಟ್ಟುತನ, ಶಿಸ್ತು, ಹಾರ್ದಿಕತೆಯನ್ನು ಕಾಣಬಹುದು. ಸೊಗಸಾಗಿ ಕಟ್ಟಿದ ರೇಷ್ಮೆಯ ಮೈಸೂರು ರುಮಾಲು, ಕುತ್ತಿಗೆ ಮುಚ್ಚುವ ಸಿಲ್ಕ್‌ಕೋಟು, ಗಂಜಿಯುಳಿಯದ ಧೋತ್ರ ಸೀತಾರಾಮಯ್ಯನವರ 'ಅಚ್ಚ ಮೈಸೂರುತನ'ದ ದ್ಯೋತಕಗಳಾಗಿವೆ. ಕರ್ನಾಟಕ, ಭಾರತದ ಬಗ್ಗೆ ಸೀತಾರಾಮಯ್ಯನವರಿಗೆ ಇರುವ ಅಭಿಮಾನಕ್ಕೆ ಅವರ ಮೈಸೂರು ಅಭಿಮಾನ ಕಡಿಮೆಯಾದುದಲ್ಲ.

ವಿ.ಸೀ.ಯವರ ಕೃತಿಗಳನ್ನು ನೋಡಿ ಅವರ ಗಂಭೀರ ಸ್ವಭಾವ, ಆಳವಾದ ವಿಚಾರ, ತುಂಬು ಪಾಂಡಿತ್ಯಗಳ ಪರಿಚಯ ಮಾಡಿಕೊಂಡವರಿಗೆ ಅವರ ಕೋಮಲ ಸುಕುಮಾರ ಜೀವನದ ಪರಿಚಯವಾಗುವುದು ಸ್ವಲ್ಪ ಕಷ್ಟ. 'ಗೀತೆಗಳು', 'ನೆಳಲು-ಬೆಳಕು', 'ದೀಪಗಳು', 'ದ್ರಾಕ್ಷಿದಾಳಿಂಬೆ' ಗೀತಾಸಂಗ್ರಹಗಳ ಮೂಲಕ ಕನ್ನಡ ಭಾವಗೀತೆಗಳ ವ್ಯಾಪ್ತಿಯನ್ನು ವಿಸ್ತರಿಸಿ, ವಿಚಾರದ ಹಿರಿಮೆಯನ್ನು ಕವಿ ಸ್ಥಾಪಿಸಿದ್ದಾರೆ. ಅವರ ಗೀತೆಗಳಿಂದ ವಿಲಾಸ ದೊರೆಯುವುದಿಲ್ಲ. ವಿಹಾರವೂ ಅಷ್ಟಕ್ಕಷ್ಟೆ! ಕಾವ್ಯದ ಉದ್ದೇಶ ಓದುಗನಿಗೆ ಕಚಗುಳಿಯಿಡುವುದೋ ಅವನ ಭಾವಸಾಮ್ರಾಜ್ಯವನ್ನು ವಿಸ್ತರಿಸುವುದೊ ಎಂಬ ಮಹತ್ವದ ಪ್ರಶ್ನೆಯನ್ನು ವಿ.ಸೀ.ಯವರ ಕಾವ್ಯ ಕೇಳುತ್ತಿದೆ. ನಮ್ಮ ಧರ್ಮ, ದೇವರು, ಸಮಾಜ, ದೈನಂದಿನ ನಡವಳಿಕೆ, ಸ್ವಾತಂತ್ರ್ಯಾಭಿಲಾಷೆ, ದ್ವೇಷ, ಕೋಪ, ಆಲಸ್ಯ, ನಿರ್ವಿಣ್ಣತೆಗಳನ್ನು ಕವಿ ಒಳಹೊಕ್ಕು ನೋಡಿದ್ದಾರೆ. ನಮ್ಮ ನಿರ್ಹೇತುಕ ಬಾಳಿನ ಗತಿಯನ್ನು ಕಂಡು ಕವಿ ಮರುಗುತ್ತಾರೆ, ಎಚ್ಚರಿಸುತ್ತಾರೆ. ನಾಳೆ ಯಾವುದೋ ಸುಭಿಕ್ಷಸ್ಥಿತಿ ಬರುತ್ತದೆ. ಲೋಕ ರಾಮರಾಜ್ಯವಾಗುತ್ತದೆ. ಅಲ್ಲಿ ಎಲ್ಲರೂ ಉಂಡುಟ್ಟು ಸುಖವಾಗಿರಬಹುದು ಎಂಬ ಕನಸಿನ ಚಿತ್ರವನ್ನು ಕವಿ ನಮ್ಮ ಮುಂದಿಡುವುದಿಲ್ಲ. ರಾಮರಾಜ್ಯವಾಗಬೇಕಾದರೆ ವ್ಯಕ್ತಿ, ಸಮಾಜ, ದೇಶ ಅದಕ್ಕಾಗಿ ದುಡಿಯಬೇಕು. ನಡೆ, ನುಡಿಯನ್ನು

ತಿದ್ದಿಕೊಂಡು ಪರರಿಗೆ ಅಹಿತವಾಗದ ತೆರದಲ್ಲಿ ವಿಮಲ ಬಾಳ್ವೆಯನ್ನು ಸಾಗಿಸಬೇಕು. ಕನಸು ಕಂಡರೆ ಸಾಲದು—ಕನಸು ಕಣಸಾಗಬೇಕು.

ವಿಚಾರವಾದಕ್ಕನುಗುಣವಾದ ಶೈಲಿ ವಿ.ಸೀ.ಯವರ ಕಾವ್ಯದ ಹೆಗ್ಗುರುತು. ಶಬ್ದಗಳನ್ನು ಯಥಾರ್ಥವಾಗಿ ಬಳಸುವುದರಲ್ಲಿ, ಅರ್ಥವನ್ನು ನಿರ್ದಿಷ್ಟವಾಗಿ ಸೂಚಿಸುವುದರಲ್ಲಿ ಹೂಮಾಲೆ ಕಟ್ಟುವಂತೆ ವಾದಸರಣಿಯನ್ನು ಪೋಣಿಸಿ, ಅದಕ್ಕೆ ಸಮಗ್ರತೆ, ಸಮನ್ವಯತೆಗಳನ್ನು ತಂದುಕೊಡುವುದರಲ್ಲಿ ಸೀತಾರಾಮಯ್ಯನವರು ಅಪೂರ್ವಸಿದ್ಧಿಯನ್ನು ದೊರಕಿಸಿಕೊಂಡಿದ್ದಾರೆ. ಭಾವೋನ್ಮಾದ, ವಿಚಾರವೈಭವ, ನಾದತರಂಗಗಳ ತ್ರಿವೇಣಿಸಂಗಮ ವಿ.ಸೀ.ಯವರ ಕಾವ್ಯ.

ಪದ್ಯದಲ್ಲಿರುವ ಪ್ರಭಾವವೇ ವಿ.ಸೀ.ಯವರ ಗದ್ಯದಲ್ಲಿಯೂ ಕಂಡುಬರುತ್ತದೆ. ‘ಹಣಪ್ರಪಂಚ’ದಂಥ ಶಾಸ್ತ್ರೀಯ ಗ್ರಂಥವಾಗಲಿ, ‘ಶಾಕುಂತಲ ನಾಟಕ ವಿಮರ್ಶೆ’ಯಂಥ ವಿಮರ್ಶನ ಗ್ರಂಥವಾಗಲಿ, ‘ಪಂಪಾಯಾತ್ರೆ’ಯಂಥ ಹರಟೆಯಾಗಲಿ ಓದುಗನ ಚಿತ್ತವನ್ನು ಸೆರೆಹಿಡಿಯುತ್ತದೆ. ಭಾವ, ವಿಚಾರಗಳ ವೇಗಕ್ಕನುಗುಣವಾಗಿ ಶೈಲಿ ರೂಪುಗೊಳ್ಳುತ್ತದೆ. ಒಮ್ಮೆಯದು ಸಾಗರದಂತೆ ಭೋರ್ಗರೆದರೆ, ಮತ್ತೊಮ್ಮೆ ಮಲ್ಲಿಗೆಯಂತೆ ಮುಗುಳ್ನಗೆ ನಗುತ್ತದೆ. ಪಾಂಡಿತ್ಯ, ಕಲಾವಿಮರ್ಶೆ, ಹರಟೆ, ಸೂಕ್ಷ್ಮದರ್ಶನ, ತಿಳಿಯಾದ ಹಾಸ್ಯಗಳ ಭಟ್ಟಿ ‘ಪಂಪಾಯಾತ್ರೆ’.

ವಿ.ಸೀ.ಯವರು ‘ಸೋಹ್ರಾಬ್ ರುಸ್ತುಂ’, ‘ಆಗ್ರಹ’ ಎಂಬೆರಡು ನಾಟಕಗಳನ್ನೂ ಬರೆದಿದ್ದಾರೆ. ನುರಿತ ನಟರು ಅವುಗಳನ್ನು ರಂಗಭೂಮಿಯ ಮೇಲೂ ತಂದರು.

ಸಾಹಿತ್ಯವನ್ನು ಒಂದು ಯೋಗವೆಂದು ಭಾವಿಸಿ ಉಪಾಸನೆ ಮಾಡಿರುವವರಲ್ಲಿ ವಿ.ಸೀ.ಯವರೊಬ್ಬರು. ಇಂಗ್ಲಿಷ್, ಕನ್ನಡ, ಸಂಸ್ಕೃತ, ಗ್ರೀಕ್ ಸಾಹಿತ್ಯಗಳ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡಬಲ್ಲರು. ತಮ್ಮ ಮೆಚ್ಚಿನ ಕವಿಯನ್ನು ಹಲವರು ಮೆಚ್ಚುವಂತೆ ಮಾಡಬಲ್ಲರು. ರಸಾಭಿಜ್ಞತೆಗೇ ಲಕ್ಷ್ಯ ಕೊಟ್ಟು ನಿಷ್ಪಕ್ಷಪಾತ ದೃಷ್ಟಿಯಿಂದ ಕವಿಯ ಕೃತಿಯನ್ನು ವಿಮರ್ಶೆ ಮಾಡಬಲ್ಲರು. ಆಧುನಿಕ ಕನ್ನಡ ಕವಿಗಳ ಕಾವ್ಯಪ್ರಸಾರಕ್ಕೆ ವಿ.ಸೀ.ಯವರು ಮಾಡಿರುವ ಸೇವೆ ಅಪಾರ.

ಸಾಹಿತ್ಯ, ಅರ್ಥಶಾಸ್ತ್ರ ಎರಡೂ ವಿ.ಸೀ.ಯವರ ಜೀವನದುಸಿರು. ಅರ್ಥಶಾಸ್ತ್ರದಂಥ ಕ್ಲಿಷ್ಟವಿಷಯವನ್ನು ಸರ್ವಜನಪ್ರಿಯವಾಗುವಂತೆ ಬರೆಯುವ ಪ್ರತಿಭೆ ಸಾಧಾರಣವಾದುದಲ್ಲ. ಶಾಸ್ತ್ರೀಯ ವಿಷಯಗಳನ್ನು ಕನ್ನಡದಲ್ಲಿ ವಿವರಿಸುವುದು ಸಾಧ್ಯವಿಲ್ಲವೆಂಬ ವಾದವೂ ಒಂದಿತ್ತು. ವಿ.ಸೀ.ಯವರ 'ಹಣಪ್ರಪಂಚ' ಆ ವಾದಕ್ಕೆ ಸದುತ್ತರ.

ವಿ.ಸೀ.ಯವರ ಅಭಿರುಚಿ ಸಾಹಿತ್ಯ, ಅರ್ಥಶಾಸ್ತ್ರಗಳಿಗೇ ಅಡಕವಾಗಿಲ್ಲ. ಕರ್ನಾಟಕ ಸಂಗೀತದಲ್ಲಿ ವಿ.ಸೀ.ಯವರಿಗೆ ತುಂಬ ಪರಿಶ್ರಮವಿದೆ. ಭಾವ ಗೀತೆಗಳಿಗೆ ಅವರು ನಿಯೋಜಿಸಿರುವ ರಾಗಗಳು ಅವರ ಸಂಗೀತ ಜ್ಞಾನದ ಕುರುಹಾಗಿದೆ. ಉತ್ತರಾದಿ, ಪಾಶ್ಚಾತ್ಯ ಪದ್ಧತಿಯ ಗಾಯನವನ್ನೂ ವಿ.ಸೀ. ಯವರು ಅಭ್ಯಾಸ ಮಾಡಿದ್ದಾರೆ. ತ್ಯಾಗರಾಜರ ಕೀರ್ತನೆಗಳನ್ನು ಕೇಳಿ ಸುಖಿಸುವಷ್ಟೇ ಹಿಂದೂಸ್ಥಾನಿ ಚೀಸುಗಳನ್ನೂ ಪಾಶ್ಚಾತ್ಯರ ಸಿಂಫೋನಿಗಳನ್ನೂ ಕೇಳಿ ಸುಖಿಸಬಲ್ಲರು.

ಚಿತ್ರಕಲೆಯ ಬಗ್ಗೆ ವಿ.ಸೀ.ಯವರಿಗಿರುವ ವಿಶ್ವಾಸಕ್ಕೆ ಅವರ ಗ್ರಂಥಗಳೇ ಸಾಕ್ಷಿ. ನಂದಲಾಲ ಬಸು, ವೆಂಕಟಪ್ಪನವರ ಕೃತಿಗಳೆಂದರೆ ವಿ.ಸೀ.ಯವರಿಗೆ ಪರಮ ಪ್ರೇಮ. ಅಜಂತೆಯ ಚಿತ್ರಗಳು, ಪಹರಿ ಸಂಪ್ರದಾಯದ ಚಿತ್ರಗಳು ಮತ್ತು ರಾಫೇಲ್, ಮೈಕೆಲ್ ಆಂಜಿಲೋ ಅವರ ಕೃತಿಗಳೆಂದರೆ ವಿ.ಸೀ. ಅವರ ಹೃದಯ ಹಿಗ್ಗಿನಿಂದ ಅರಳುತ್ತದೆ.

ಸಾಹಿತ್ಯ, ಸಂಗೀತ, ಚಿತ್ರಕಲೆ, ಅರ್ಥಶಾಸ್ತ್ರಗಳಲ್ಲಿ ಏಕಮುಖವಾದ ಅಭಿರುಚಿಯಿಟ್ಟುಕೊಂಡು ಅವುಗಳನ್ನು ಸತತವಾಗಿ ಜೀವನದಲ್ಲಿ ರೂಢಿಸಿ ಕೊಳ್ಳುವ ಶಕ್ತಿ, ಶ್ರದ್ಧೆ ದೈವಿಕವಾದುದು.

ವಿ.ಸೀ.ಯವರಿಗೆ ಕನ್ನಡದಲ್ಲಿ ಎಷ್ಟು ಪಾಂಡಿತ್ಯವಿದೆಯೋ ಇಂಗ್ಲಿಷಿ ನಲ್ಲಿಯೂ ಅಷ್ಟೇ ಪಾಂಡಿತ್ಯವಿದೆ. ಸೊಗಸಾದ ಇಂಗ್ಲಿಷ್ ಮಾತನಾಡಬಲ್ಲರು, ಬರೆಯಬಲ್ಲರು.

ಕನ್ನಡನಾಡಿನಲ್ಲಿ ಮಾತ್ರವೇ ಅಲ್ಲ, ಕನ್ನಡನಾಡಿನ ಹೊರಗೂ ಕನ್ನಡ ಸಾಹಿತ್ಯ, ಸಂಸ್ಕೃತಿಗಳಿಗೆ ಕೀರ್ತಿ ತಂದಿರುವ ರಸಿಕರಲ್ಲಿ ವಿ.ಸೀ.ಯವರೊಬ್ಬರು. ಕನ್ನಡದ ಸಾಂಸ್ಕೃತಿಕ ರಾಯಭಾರಿಗಳಾಗಿ ಹೊರನಾಡುಗಳಲ್ಲಿ ಪ್ರಸಾರ ಮಾಡಿ ಬಂದಿದ್ದಾರೆ.

ಸರಳ ಜೀವನ, ಮಾನವನ ಲೋಪದೋಷಗಳನ್ನರಿತು ಅವುಗಳನ್ನು ಔದಾರ್ಯದಿಂದ ನೋಡುವ ಮನೋಭಾವ, ಶ್ರದ್ಧಾಭಕ್ತಿಯುತವಾದ ಸಾಹಿತ್ಯ ಸೇವೆಗಳಿಂದ ವಿ. ಸೀತಾರಾಮಯ್ಯನವರು ಕನ್ನಡಿಗರ ಹಿರಿಮೆಯನ್ನು ಹಿಡಿದೆತ್ತಿ, ಕನ್ನಡಿಗರ ಚಿರಪ್ರೇಮ, ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಅ. ನ. ಕೃಷ್ಣರಾಯ

ವಿ. ಸೀ.*

ಈಗ ನಾನು ನಿಮಗೆ ಪರಿಚಯ ಮಾಡಿಕೊಡಬೇಕಾಗಿರುವ ವಿ.ಸೀ. ಅವರನ್ನು, ಅವರ ಕಾವ್ಯವನ್ನು ನಿಮ್ಮಲ್ಲಿ ಹಲವರು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ತಿಳಿದಿದ್ದೀರಿ; ಕೇಳಿದ್ದೀರಿ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿ, ಅದಕ್ಕೆ ಹೊಸ ಹುರುಪನ್ನು, ಹೊಸ ಹುಮ್ಮಸ್ಸನ್ನು ತುಂಬಿ ಹೊಸ ನೀರು ಹಾಯಿಸಿದವರಲ್ಲಿ ಮೊದಲಿಗರಾದ ಆಚಾರ್ಯ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ನೇತೃತ್ವದಲ್ಲಿ ನಾಡುನುಡಿಗಳ ಸೇವೆಗೆ ಸಿದ್ಧರಾದ ಕನ್ನಡ ಕುಲರಸಿಕರಲ್ಲಿ ವಿ.ಸೀ. ಅವರು ಮುಖ್ಯರು; ಪ್ರಸಿದ್ಧರು.

ವಿ.ಸೀ.—

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ, ಅದರಲ್ಲೂ ಕಾವ್ಯಕ್ಷೇತ್ರದಲ್ಲಿ ಚಿರಪರಿಚಿತವಾದ ಈ ಹೆಸರು ಶ್ರೀ. ವಿ. ಸೀತಾರಾಮಯ್ಯನವರ ಸೂಚ್ಯನಾಮ. ಒಂದು ವಿಧದಲ್ಲಿ ಅದೇ ಅವರ ಕಾವ್ಯನಾಮವೆಂದರೂ ಸಂದೀತು. ಅರ್ಥಶಾಸ್ತ್ರದ ಪದವೀಧರರಾದ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಅಸಿಸ್ಟೆಂಟ್ ಪ್ರೊಫೆಸರರಾಗಿರುವುದು ಸೋಜಿಗದ ಮಾತಲ್ಲ—ಅವರ ಬಹುಮುಖವಾದ ಪ್ರತಿಭೆಗೆ, ಪಾಂಡಿತ್ಯಕ್ಕೆ ಸಾಕ್ಷಿ!

ನಮ್ಮ ನಾಡಿನ ಸುಪ್ರಸಿದ್ಧರಾದ ಕವಿಗಳಲ್ಲಿ ವಿ.ಸೀ.ಯವರೊಬ್ಬರು. ಆದರೆ ಅವರ ಕವಿತೆಗಳಲ್ಲಿ, ಪುಟ್ಟಪ್ಪನವರ ಕವಿತೆಗಳಲ್ಲಿ ಕಂಡುಬರುವ ನಿಸರ್ಗ ವಿಲಾಸ, ಬೇಂದ್ರೆಯವರ ಕವಿತೆಗಳಲ್ಲಿ ಕಂಡುಬರುವ ಜನಜೀವನದ ಗತ್ತು, ಪು. ತಿ. ನರಸಿಂಹಾಚಾರ್ಯರ ಕವಿತೆಗಳಲ್ಲಿ ಮೈವೆತ್ತುನಿಂತ ವೇದಾಂತಿಯ ರಸದೃಷ್ಟಿ ಕಂಡುಬರುವುದಿಲ್ಲ. ಅವರು ಸೂಕ್ಷ್ಮಸಂವೇದಿಯಾದ ಕವಿ. ಪದ ಪದಗಳನ್ನು ಅರ್ಥಮಯವಾಗಿ, ನಾದಮಯವಾಗಿ ಜೋಡಿಸುವ ಕುಶಲಶಿಲ್ಪಿ. ಮೃದುಮಧುರವಾದ ಭಾವಬಂಧಗಳು ; ನಾಜೂಕಿನಿಂದ ಜೋಡಿಸಿದ,

---

* ಆಲ್ ಇಂಡಿಯಾ ರೇಡಿಯೊ, ಮೈಸೂರು ಕೇಂದ್ರ, ಅವರ ಕೃಪೆಯಿಂದ.

ಕೋಮಲವಾದ ಪದಸಂಪತ್ತು; ಹೃದಯದಿಂದ ಹೃದಯವನ್ನು ಕೂಡುವ ಸೂಕ್ಷ್ಮ ಸನ್ನಿವೇಶಗಳು ವಿ.ಸೀ.ಯವರ ಕವಿತೆಗಳಲ್ಲಿನ ಜೀವಂತ ಗುಣ.

'ಯುವಕರ ರಕ್ತವನ್ನು ಕುದಿಸುವ ದೇಶಾಭಿಮಾನ ಮತ್ತು ಪ್ರೇಮ; ಪ್ರಕೃತಿಮಾತೆಯ ಭಯಂಕರವಾದ ಮತ್ತು ಸೌಮ್ಯವಾದ ದರ್ಶನಗಳು; ಋತುಗಳ ಕುಣಿತ; ದೇವತಾವಿಷಯದಲ್ಲಿ ಮನಸ್ಸನ್ನು ತೂಗಾಡಿಸುವ ಸಂದೇಹ, ಭಕ್ತಿ; ಪಾಪದ ಭಯ; ಧರ್ಮ ಪ್ರೀತಿ; ಮುಖ್ಯವಾಗಿ ಎಲ್ಲಾ ಕಡೆಯಲ್ಲಿಯೂ ಕಾಣುವ ಸೂಕ್ಷ್ಮವಾದ, ಉದಾರವಾದ, ನಿರ್ಮಲವಾದ ಮನಸ್ಸು—ಇವು ಸಹಾನುಭೂತಿಯಿಂದ ನೋಡತಕ್ಕವರಿಗೆ ಈ ಗೀತೆಗಳಲ್ಲಿ ಚೆನ್ನಾಗಿ ಪ್ರತಿಬಿಂಬಿತವಾಗಿವೆ' ಎಂಬುದಾಗಿ ವಿ.ಸೀ.ಯವರ ಕವಿತೆಗಳ ವೈವಿಧ್ಯತೆಯನ್ನು, ಅವುಗಳಲ್ಲಿ ವ್ಯಕ್ತವಾಗಿರುವ ಕವಿಮನೋಧರ್ಮವನ್ನು ಕುರಿತು ಆಚಾರ್ಯ ಬಿ. ಎಂ. ಶ್ರೀ. ಅವರು ಹೇಳಿದಾರೆ. ಹತ್ತಿರದಿಂದ ಆದರದಿಂದ ಈ ಕವಿಯ ಕಾವ್ಯವನ್ನು ಅವಲೋಕಿಸುವವರಿಗೆ ಈ ಗುಣಗಳೆಲ್ಲ ಎದ್ದು ತೋರುತ್ತವೆ. ಅವರು ರಾಗವನ್ನು ನಿಯೋಜಿಸಿದ ಕೆಲವು ಗೀತಗಳನ್ನು ನೋಡಿದರೆ ಸಪ್ಪೆಯಾಗಿ ತೋರುತ್ತವೆ. ಇದಕ್ಕೆ ಕಾರಣ, ಕವಿಯ ಗಮನ ಕವಿತೆಯನ್ನು ರಾಗಸಹಿತವಾಗಿ ಹಾಡುವತ್ತ ಕಡೆ ಹರಿದಿರುವುದೆಂದು ಹೇಳಿದರೆ ತಪ್ಪಾಗಲಾರದು. ಆದರೆ 'ಶಬರಿ', 'ಮನೆತುಂಬಿಸುವುದು' ಮೊದಲಾದ ಗೀತೆಗಳ ಶಕ್ತಿ, ಓಜಸ್ಸು ನಮ್ಮ ಕಿವಿಯನ್ನು ಮೋಹಿಸುವುದು ಮಾತ್ರವಲ್ಲ ಹೃದಯವನ್ನೂ ಸೆರೆಹಿಡಿಯುತ್ತವೆ. ಸಂಗೀತ, ಶಿಲ್ಪಕಲೆಗಳನ್ನು ಕುರಿತು ಬರೆದ ಕವಿತೆಗಳು ವಿ.ಸೀ. ಅವರ ಕಾವ್ಯಪ್ರಕಾರಗಳಲ್ಲಿ ಅತ್ಯಂತ ಯಶಸ್ವಿಯಾದುವು. ಬೇಲೂರು ಚನ್ನಕೇಶವನನ್ನು ಕುರಿತು ಬರೆದಿರುವಂಥ ಮತ್ತು ದೇಶಭಕ್ತಿಯ ಕವಿತೆಗಳು ಯಾವ ಸಾಹಿತ್ಯಕ್ಕಾದರೂ ಮಾನ ತರುವಂಥವು.

ಅವರ ಕವಿತೆಗಳಲ್ಲಿ 'ನುಡಿ ಸೋತ ಮೂಕಪ್ರೇಮ', 'ನೀಲನೈದಿಲೆಯಂತೆ ಅರಳಿ ಕರೆಯುವ ಕಣ್ಣು', 'ಕಣ್ಗೆ ರೂಪವು ಇಳಿವ ಮುನ್ನವೆ ಎದೆಗೆ ಪ್ರೇಮವು ಹರಿಯಿತು' ಎಂಬಂಥ ಸುಂದರ ಮಾತುಗಳು ಎಂಥ ಓದುಗನನ್ನಾದರೂ ತಡೆದುನಿಲ್ಲಿಸುತ್ತವೆ. ಒಂದು ಮಾತಿನಲ್ಲಿ, ಒಂದು ಪದ್ಯದಲ್ಲಿ ಸುಂದರವಾದ, ಸಜೀವವಾದ ಚಿತ್ರವನ್ನು ಕಣ್ಣೆದುರು ತಂದು ನಿಲ್ಲಿಸುವ ಚಿತ್ರಕಶಕ್ತಿ ಅದ್ಭುತವಾದುದು.

'ಮರದ ಇಂಬಿಗೆ ಬಾಗಿ ಬಳುಕುತಿರುವೆಳಲತೆಯು
ತಳಿರ ತೂಗುಯ್ಯಾಲೆ ಹೂತೊಂಗಲು....'

ಎಂದು ಅವರು ಲಾಲ್‌ಬಾಗಿನ ಒಂದೆಡೆಯ ವೈಭವವನ್ನು ವರ್ಣಿಸುವಂಥ ಸಾಲುಗಳೂ,

'ಒಂದು ಅಂಗುಲದಂಚ ಬಣ್ಣದೊಡಲಿನ ಸೀರೆ,
ಬಿಳಿಯ ಕುಪ್ಪಸ, ತುರುಬು ಗುಂಡು_ಸೆಕ್ಕು;
ಚಪ್ಪರದ ಮಲ್ಲಿಗೆಗೆ ತೋಳೆತ್ತಿ ಆಡುತಿರೆ
ಕೈಬಳೆಯು ಘಲ್ಲೆಂದು ಘಲುಕೆಂದು ಉಲುಕುತಿರೆ
—ಅದುವೆ ಸಿಂಗರವೆನ್ನ ಕಿವಿಗಿಂಪು'

ಎಂಬಲ್ಲಿ ಕಣ್ಣಿಗೆ 'ಸಿರಿ'ಯಾದ ಚೆಲುವೆಯೊಬ್ಬಳ ವೈಯಾರದ ಒಂದು ಭಂಗಿಯನ್ನು ಚಿತ್ರಿಸುವ ಸಾಲುಗಳೂ ವಿ.ಸೀ. ಅವರ ಚಿತ್ರಕಶಕ್ತಿಯನ್ನು ಸೂಚಿಸುತ್ತವೆ. ಇಂಥ ಮೋಹಕವಾದ, ಓದುಗರ ಚಿತ್ತವನ್ನು, ಹೃದಯವನ್ನು ಅರಳಿಸುವ, ಆಕರ್ಷಿಸುವ ಸಂದರ್ಭಗಳು ಅವರ ಗೀತಗಳಲ್ಲಿ ಅಡಿಗಡಿಗೆ ಸಿಗುತ್ತವೆ.

'ವರುಷ ಹೋಯಿತು; ವರುಷ ಬಂದಿತು
ಹರುಷ ಬಾರದು, ಬಾರದು'

ಎಂದು ಒಂದೆಡೆ ನಿರಾಶೆಯ ನಿಟ್ಟುಸಿರು ಬಿಟ್ಟರೆ—

'ಮಾನವನೆತ್ತರ ಆಗಸದೇರಿಗೆ
ಏರುವವರೆಗೂ ಬೆಳೆದೇವು'

ಎಂದು ಇನ್ನೊಂಬೆಡೆ ಅಪಾರವಾದ ವಿಶ್ವಾಸವನ್ನು ತೋರುತ್ತಾರೆ. ಹೀಗೆ ಮಾನವನ ಬದುಕಿನ ಆಸೆ–ನಿರಾಶೆಗಳು; ಆಟ–ಹೊರಾಟಗಳು ವಿ.ಸೀ. ಅವರ ಗೀತಗಳಲ್ಲಿ ಅಭಿವ್ಯಕ್ತವಾಗಿವೆ. ಸುಭಗವಾದ ಶೈಲಿ, ಕೋಮಲವಾದ ಕಲ್ಪನೆಗಳು ಅವರ ಕವಿತೆಗಳುದ್ದಕ್ಕೂ ಹರಿದಿವೆ. 'ಹೊರಗಡೆ ವಸಂತದ ವೈಭವ ಬರಲು ವಿವಿಧ ವರ್ಣದ ಸಣ್ಣದೊಡ್ಡ ಹೂಗಳು ಎಲ್ಲೆಲ್ಲಿಯೂ ಅರಳುತ್ತವೆ; ಬಾಳು ಚಿಗುರಿಡುತ್ತದೆ. ಆಗ ಎಲ್ಲ ಹೂಗಳೂ ತಮ್ಮ ಬಣ್ಣವನ್ನೂ, ಅರಳನ್ನೂ ತೆಗೆಯುವುದು ಸ್ವಾಭಾವಿಕ. ತನಗೆ ಜನದ ಪುರಸ್ಕಾರ ಬರಲಿ ಬಾರದಿರಲಿ, ತನ್ನ ಬದುಕನ್ನು ಬದುಕಿ ಕಾಲಕ್ಕೆ ತನ್ನನ್ನು ನಿವೇದನೆ ಮಾಡಿಕೊಳ್ಳುವುದು

ಪ್ರತಿಯೊಂದು ಹೂವಿನ ಕರ್ತವ್ಯ' ಎಂದು ತಮ್ಮ ಕವಿತೆಗಳ ಬಗೆಗೆ ಹೇಳಿಕೊಳ್ಳುವ ವಿ.ಸೀ. ಆತ್ಮತೃಪ್ತಿಯ, ಸಹಜ ಕವಿ.

ಮುಖ್ಯರಾದ ಕವಿಗಳಾಗಿರುವುದಲ್ಲದೆ, ಹೊಸಗನ್ನಡದ ಕೆಲವೇ ಕೆಲವು ಅತ್ಯಂತ ಸುಂದರ ಗದ್ಯಕಾರರಲ್ಲಿ ಒಬ್ಬರಾಗಿರುವುದು ವಿ.ಸೀ. ಅವರ ವೈಶಿಷ್ಟ್ಯ. ಅವರ ಕೃತಿರತ್ನ 'ಪಂಪಾಯಾತ್ರೆ' ಅವರ ಶೈಲಿಗೆ ಮಾತ್ರವಲ್ಲ, ಕನ್ನಡಗದ್ಯದ ಸುಂದರತೆಗೂ ಸಾಕ್ಷಿ. ನಮ್ಮ ಗತವೈಭವದ ನೆನಪು, ಶಿಲ್ಪ, ಸಂಸ್ಕೃತಿಯ ವೈಭವ, ನವಿರಾದ ಹಾಸ್ಯ, ತಿಳಿಯಾದ ರಸಿಕತೆ ಉದ್ದಕ್ಕೂ ವೈವಿಧ್ಯ ಸೃಷ್ಟಿಸಿವೆ. ಈ ಪಯಣದ ಕತೆ 'ಪಂಪಾಯಾತ್ರೆ' ಕನ್ನಡ ಗದ್ಯಸಾಹಿತ್ಯದ ಒಂದು ಮೈಲಿಗಲ್ಲು.

ದೇಶಭಾಷೆಗಳು ವಿಜ್ಞಾನಶಾಸ್ತ್ರವನ್ನು ಬೋಧಿಸಲು, ಬರೆಯಲು ಅಸಮರ್ಥವಾದುವು ಎಂಬ ಹಾಸ್ಯಾಸ್ಪದವಾದ ಸಂಗತಿ ಇಂದಿಗೂ ಹಲವರನ್ನು ಬಾಧಿಸುತ್ತಿದೆ. ಆದರೆ ಇಂದಿಗೆ ಸುಮಾರು ಹದಿನೈದು–ಹದಿನಾರು ವರ್ಷಗಳ ಹಿಂದೆಯೇ ವಿ.ಸೀ.ಯವರು ಅರ್ಥಶಾಸ್ತ್ರದಂತಹ ತೊಡಕಿನ ವಿಷಯವನ್ನು ತೆಗೆದುಕೊಂಡು ಅದರಲ್ಲೂ ಹಣಕಾಸಿನಂತಹ ಕ್ಲಿಷ್ಟ ವಿಷಯವನ್ನು ಆರಿಸಿಕೊಂಡು 'ಹಣಪ್ರಪಂಚ'ವೆಂಬ ಕೃತಿಯನ್ನು ರಚಿಸಿದರು. ಅಲ್ಲಿ ಅವರು ತಮಗೆ ಆ ವಿಷಯದಲ್ಲಿದ್ದ ಪಾಂಡಿತ್ಯವನ್ನು ಮಾತ್ರ ಪ್ರದರ್ಶಿಸಲಿಲ್ಲ; ದೇಶಭಾಷೆಯೊಂದರ ಶಕ್ತಿಯನ್ನು, ಸಾಮರ್ಥ್ಯವನ್ನು, ಕಸುವನ್ನು ತೋರಿಸಿದ್ದಾರೆ. ಕವಿಯಾದವನು ಶಾಸ್ತ್ರವನ್ನು ಬರೆದರೆ ಎಷ್ಟು ಸೊಗಸಾಗುತ್ತದೆಂಬುದನ್ನು ನಾವು 'ಹಣಪ್ರಪಂಚ'ದಲ್ಲಿ ನೋಡಬಹುದು.

'ಸೋಹ್ರಾಬ್ ರುಸ್ತುಂ' ಮತ್ತು 'ಆಗ್ರಹ' ಎಂಬ ಎರಡು ನಾಟಕಗಳನ್ನು ವಿ.ಸೀ. ಬರೆದಿದ್ದಾರೆ. ಎರಡೂ ದುರಂತ ನಾಟಕಗಳೆ. ಒಂದರ ಕೊನೆ ಸಾವಾದರೆ, ಇನ್ನೊಂದರ ಕೊನೆ ಎದೆಯನ್ನೇ ಒಡೆಸುವಂಥ ಭೀಕರ ಅದೃಷ್ಟ. 'ಸೋಹ್ರಾಬ್ ರುಸ್ತುಂ' ನಾಟಕದ ಅಂತ್ಯದಲ್ಲಿ, ರಣರಂಗದಲ್ಲಿ ಸೊಹ್ರಾಬ್ ಪ್ರಾಣ ಬಿಡುವ ಮುನ್ನ ಅವನ ತಾಯನ್ನು ಅಲ್ಲಿಗೆ ಕರೆತರುವ, ಇನ್ನೆಲ್ಲೂ ಕಂಡುಬರದ ಒಂದು ವಿನೂತನ ಕಲ್ಪನೆಯನ್ನು ಮಾಡಿ ಅದರ ಘನತೆಯನ್ನು ಹೆಚ್ಚಿಸಿದ್ದಾರೆ.

ಅವರ ಇನ್ನಿತರ ಕೃತಿಗಳಾದ 'ಅಶ್ವತ್ಥಾಮನ್', 'ಕರ್ನಾಟಕ

ಕಾದಂಬರಿ', 'ಅಭಿಜ್ಞಾನ ಶಾಕುಂತಲ', 'ಭಾರತದ ರಾಜ್ಯಾಂಗ ರಚನೆ' ಗಳು ಪರಿಚಯಾತ್ಮಕ ಹಾಗೂ ವಿಮರ್ಶಾತ್ಮಕವಾದುವು. 'ಅಶ್ವತ್ಥಾಮನ್' ಬಿ. ಎಂ. ಶ್ರೀ. ಅವರ ಅಮರನಾಟಕದ ರಸಪರಿಚಯ ಮಾತ್ರವಲ್ಲ; ವಿಸ್ತೃತ ವಿಮರ್ಶೆ ಕೂಡ. ಉಳಿದವು ಗಾತ್ರದಲ್ಲಿ ಚಿಕ್ಕವು.

ಅಲ್ಲಲ್ಲಿ ಪತ್ರಿಕೆಗಳಲ್ಲಿ, ಸಂಕಲನ ಗ್ರಂಥಗಳಲ್ಲಿ ಉಳಿದು ಹೋಗಿರುವ ಅವರ ಲಲಿತ ನಿಬಂಧಗಳು, ವಿಮರ್ಶೆ ಪರಿಚಯಗಳು ಇನ್ನೂ ಗ್ರಂಥರೂಪದಲ್ಲಿ ಬರಬೇಕಾಗಿವೆ. ವಿ.ಸೀ. ಅವರು ಕುಶಲ ಮಾತುಗಾರರು. ಕನ್ನಡದಲ್ಲಿ ಇರುವಷ್ಟೇ ಹಿಡಿತ, ಪಾಂಡಿತ್ಯ ಇಂಗ್ಲಿಷಿನಲ್ಲೂ ಇದೆ. ತಾವು ತೆಗೆದುಕೊಂಡ ವಿಷಯವನ್ನು ಶ್ರಾವಕರಿಗೆ ಕೊಂಚವೂ ಬೇಸರವಾಗದ ರೀತಿಯಲ್ಲಿ ಪ್ರತಿ ಪಾದಿಸಬಲ್ಲ ಚತುರ ವಾಗ್ಮಿ; ಬರಹದಲ್ಲಿ ಕಂಡುಬರುವ ಹಾಸ್ಯ, ರಸಿಕತೆ, ಮೃದುತನಗಳೇ ಮಾತಿನಲ್ಲೂ ಮೂಡಿನಿಲ್ಲುತ್ತವೆ.

'ಕಾವ್ಯನಿರ್ಮಾಣದಂತೆ ಕಾವ್ಯಪ್ರಕಟನವೂ ಒಂದು ಕಲೆ' ಎಂದು ನಂಬಿ ನಡೆಯುತ್ತಿರುವವರು ಅವರು. ಅವರ ಪ್ರತಿಯೊಂದು ಪುಸ್ತಕವೂ ಸುಂದರವಾಗಿಯೇ ಪ್ರಕಟವಾಗಬೇಕು. ಎರಡು ಬಣ್ಣದ ಅಚ್ಚು; ದಪ್ಪನೆಯ ಕಾಗದ; ಹೊರದೇಶದಿಂದಲೇ ಬರಬೇಕಾದ ಹೊದಿಕೆಯ ಪುಟ, ಸುಂದರವಾದ ಒಂದೆರಡು ಚಿತ್ರಗಳು ಅವರ ಗ್ರಂಥಗಳಲ್ಲಿದ್ದೇ ಇರಬೇಕು. 'ಕನ್ನಡದ ಪುಸ್ತಕಗಳನ್ನು ಚೆಲುವಾಗಿ ಪ್ರಕಟಿಸುವ ಸಂಪ್ರದಾಯವು ಈ ಕಾಲದಲ್ಲಿ ಮೊದಲಾಯಿತೆಂಬ ಅಂಶವು ನಮ್ಮ ಸಾಹಿತ್ಯಚರಿತ್ರೆಗೆ ಸೇರುವಂತಾಗಲಿ' ಎಂದು ಆಶಿಸಿದ ವಿ.ಸೀ. ಆ ಸಂಪ್ರದಾಯದ ಮೊದಲಿಗರೇ ಆದರೆಂಬ ವಿಚಾರ ವನ್ನು ನಾವು ಮರೆಯುವಂತಿಲ್ಲ.

ಪುಸ್ತಕಪ್ರಕಟನದ ವಿಚಾರದಲ್ಲಿ ಅವರು ವಹಿಸುವ ಗಮನ, ಶ್ರದ್ಧೆ ಅವರ ಜೀವನದಿಂದಲೇ ಬಂದುವು. ಅಚ್ಚುಕಟ್ಟೇ ಕಲೆ ಎಂದು ನಂಬಿದವರು ಅವರು. ಶುಭ್ರವಾದ ಅವರ ಮೈಸೂರು ರುಮಾಲು; ಟೀಡಿ ಹಾಕುವ ಕಚ್ಚೆ; ಮುಚ್ಚುಕೊರಳಿನ ಕೋಟು; ಮೆಟ್ಟು, ಕನ್ನಡಕ, ಹೀಗೆ ಅವರ ವೇಷ ಭೂಷಣಗಳು, ಅವುಗಳ ಸರಳತೆ, ಶುಭ್ರತೆಗಳು ಅವರ ಕಲಾದೃಷ್ಟಿಯ ಸಂಕೇತ. ವಿ.ಸೀ. ಚೆಲುವಿನ ಆರಾಧಕರು; ನಿರ್ಮಲಾಂತಃಕರಣದ ಸೌಮ್ಯ ಮೂರ್ತಿ; ಒಳ್ಳೆಯದನ್ನೆಲ್ಲ ವಿಶ್ವಾಸದಿಂದ ನೋಡಬಲ್ಲವರು.

ಕಾವ್ಯ, ನೃತ್ಯ, ಶಿಲ್ಪ, ಸಂಗೀತ, ಚಿತ್ರ ಹೀಗೆ ಎಲ್ಲದರಲ್ಲೂ ಅವರು ಆಸಕ್ತಿವಹಿಸುತ್ತಾರೆ. ತಮಗೆ ಬೇಕೆನಿಸಿದುದನ್ನು ಎರಡೆರಡು ಸಲ ನೋಡುತ್ತಾರೆ. ನೋಡಿ ಸುಖಿಸುತ್ತಾರೆ. ವಿ.ಸೀ. ಬರೆಯುವುದು ಮಾತ್ರ ಕಲೆಯಲ್ಲ; ಅವರು ಬಾಳುವುದೂ ಕಲೆಯೇ!

ಹಾ. ಮಾ. ನಾಯಕ

ವ್ಯಕ್ತಿ

'East is best, West is best,
The very best is East-West.'

ಕಾಲು ಶತಮಾನಕ್ಕೆ ಹಿಂದೆ ಇದು ವಿದ್ಯಾವಂತರಾದ ಬಹುಜನರ ಮತವಾಗಿತ್ತು; ಮತವೇನು, ಹಲವರ ಸಾರ್ವಜನಿಕ ಜೀವನದ ತತ್ವವಾಗಿತ್ತು; ೧೯೦೦ಕ್ಕೆ ಸ್ವಲ್ಪ ಹಿಂದೆ ಅಥವಾ ಮುಂದೆ ಹುಟ್ಟಿ ವಿದ್ಯಾರ್ಜನೆಮಾಡಿದ ಬಹು ಜನರ ರಾಜಕೀಯ ತತ್ವವಾಗಿತ್ತು. ಆ ಗುಂಪಿಗೆ ಸೇರಿದವರು ವಿ.ಸೀ.ಯವರು. ವೇಷಭೂಷಣಗಳಲ್ಲಿ ಪಾಶ್ಚಿಮಾತ್ಯರನ್ನು ಅವರು ಅನುಕರಣಮಾಡಲಿಲ್ಲ. ಆದರೆ ಇಂಗ್ಲಿಷ್ ಜನರ ಜೀವನದಲ್ಲಿ, ಅವರ ಚರಿತ್ರೆಯಲ್ಲಿ ಮತ್ತು ಅವರ ದಿವ್ಯ ಕಾವ್ಯರಾಶಿಯಲ್ಲಿ ಪ್ರಜ್ವಲಿಸುವ ಸ್ವಾತಂತ್ರ್ಯಪ್ರೇಮ, ಅದಕ್ಕಾಗಿ ಹೋರಾಡುವ ಆವೇಶ ವಿ.ಸೀ.ಯವರಲ್ಲಿ ಸಂಪೂರ್ಣವಾಗಿದೆ. ಅವರ ಸ್ವಾತಂತ್ರ್ಯಾಭಿಮಾನ ಬರೀ ರಾಜಕೀಯವಾದುದಲ್ಲ; ಬಹುಮುಖವಾದುದು; ವಿಶ್ವಮುಖವಾದುದು. ಹೀಗೆ ಹೇಳಿದ ಮಾತ್ರಕ್ಕೆ ಆರ್ಷೇಯವಾಗಿ ಬಂದ ಹಿಂದೂ ಸಂಸ್ಕೃತಿಯನ್ನು ಅವರು ಮೂಲೆಗೊತ್ತಿದರೆಂದು ಯಾರೂ ಭಾವಿಸಬಾರದು. ಹಿಂದೂ ಧರ್ಮದ ಮೂಲತತ್ವಗಳನ್ನು ಅವರು ಯಾವ ದಿನವೂ ಬಿಡಲಿಲ್ಲ. ಅವರ ಜುಟ್ಟು, ಪಂಚೆಗಚ್ಚೆ, ಉಡುಪು ಮೊದಲಾಗಿ ಹೃದಯದವರೆಗೂ ಬೆದಕಿನೋಡುವವರಿಗೆ ಅವರ ಈ ಗುಣ ಚೆನ್ನಾಗಿ ವ್ಯಕ್ತವಾಗುವುದು. ವಿ.ಸೀ. ಎನ್ನುವ ಎರಡಕ್ಷರ ಗಳಲ್ಲಿಯೇ ಅಡಕವಾಗಿದೆ, ಅವರಲ್ಲಿಯ ಪೂರ್ವ-ಪಶ್ಚಿಮ ಜೀವನಧರ್ಮಗಳ ಸಂಯೋಜನೆ. ರುಡ್ಯರ್ಡ್ ಕಿಪ್ಲಿಂಗ್ ಹೇಳಿದ ಮಾತು,

'East is East, West is West
Never the twain shall meet'

ಇವರಿಗಾಗಲಿ ಇವರ ತಲೆಮಾರಿನವರಿಗಾಗಲಿ ತಿಳಿಯದೇ ಇಲ್ಲ. ಆದರೂ ಪ್ರಪಂಚದ ಮುನ್ನಡೆಗೆ ಪೂರ್ವ-ಪಶ್ಚಿಮಗಳ ಸಂಯೋಜನೆ ಅತ್ಯಾವಶ್ಯಕ ಎಂದು ನಂಬಿದವರು ಇವರು.

ಈಗ ಸುಮಾರು ಇಪ್ಪೆತ್ತು ವರ್ಷಕ್ಕೂ ಹಿಂದಿನ ಮಾತು. ಕಾಲೇಜು ಕೆಲಸ ಆ ದಿನಕ್ಕೆ ಮುಗಿದಿತ್ತು. ನಾನೂ, ಶ್ರೀ ವಿ.ಸೀ.ಯವರೂ ಬೆಂಗಳೂರು ... ಪೇಟೆಯಲ್ಲಿ ಅವರ ಮನೆಗೆ ಹೋಗುತ್ತಿದ್ದೆವು. ಇಬ್ಬರು ಕೂಲಿಯವರು ಇದ್ದಕ್ಕಿದ್ದಂತೆ ಹೊಡೆದಾಟಕ್ಕೆ ಆರಂಭಮಾಡಿದರು. ಅದರಲ್ಲಿ ಒಬ್ಬ ಬಹು ಶಕ್ತ, ಇನ್ನೊಬ್ಬನಿಗಿಂತ. ಪೇಟೆಬೀದಿಯಲ್ಲಿ ಜನ ತುಂಬಿದ್ದರು. ಆದರೂ ಆ ಜಗಳವನ್ನು ಬಿಡಿಸಲು, ಅಶಕ್ತನನ್ನು ಕಾಪಾಡಲು ಮುನ್ನುಗ್ಗಿ ಬಲಿಷ್ಠನ ರಟ್ಟೆಯನ್ನು ಹಿಡಿದವರು ಶ್ರೀ ವಿ.ಸೀ.ಯವರು. ಅವರ ಮೈಕಟ್ಟಾಗಲಿ, ದೇಹ ಶಕ್ತಿಯಾಗಲಿ ಈ ಧರ್ಮಕಾರ್ಯಕ್ಕೆ ಅವರನ್ನು ದೂಡಲಿಲ್ಲ; ಅವರ ಮೈತೂಕ ಸುಮಾರು ೧೦೦ ಪೌಂಡುಗಳ ಆಚೀಚಿನಲ್ಲಿಯೇ ಇದ್ದಿತು. ಆದರೆ ಅವರ ಹೃದಯ ಮನಸ್ಸುಗಳು ಯಾವ ಬಗೆಯ ಅನ್ಯಾಯ ಅಧರ್ಮಗಳನ್ನೂ ನೋಡಿ ಸುಮ್ಮನಿರುವುವಲ್ಲ. ಈ ಬಗೆಯ ಸಂದರ್ಭಗಳು ಅವರ ಜೀವನದಲ್ಲಿ ಬಹುವಾಗಿವೆ. ಇನ್ನೊಂದು ಸಾಯಂಕಾಲ—ನಾವಿಬ್ಬರೂ ಅವರ ಮನೆಯ ಕೋಣೆಯಲ್ಲಿ ಕುಳಿತಿದೇವೆ. ಮಧ್ಯವಯಸ್ಸಿನವರೊಬ್ಬರು ಬಂದು ಅವರ ಮನೆಯ ಆಸ್ತಿಪಾಸ್ತಿಗಳ ಹಂಚಿಕೆಯ ವ್ಯವಸ್ಥೆಯನ್ನು ವಿ.ಸೀ.ಯವರಿಗೆ ವಿವರಿಸಿ ಹೇಳಿದರು. ಈ ಕೆಲಸಕ್ಕಾಗಿ ಬಂದವರು ವಿ.ಸೀ.ಯವರ ಬಂಧುಗಳಲ್ಲ; ಅವರ ಮತಕ್ಕೆ ಸೇರಿದವರು ಸಹ ಅಲ್ಲ; ಮಿತ್ರವೃಂದಕ್ಕೆ ಸೇರಿದವರು. ಅವರ ಮನೆಯವರೆಲ್ಲರಿಗೂ ಬಹುಗಣ್ಯಸ್ಥಾನದಲ್ಲಿ ವಿ.ಸೀ.ಯವರು ಇದ್ದುದರಿಂದ ಅವರಿಗೆ ವರದಿ ಹೇಳಿ ಅವರ ಒಪ್ಪಿಗೆಯನ್ನು ಪಡೆಯಲು ಆತ ಬಂದಿದ್ದರು. ಅವರು ಮಾಡಿದ್ದ ವ್ಯವಸ್ಥೆಯಲ್ಲಿ ಒಬ್ಬರಿಗೆ ಬಹು ಅನ್ಯಾಯವಾಗಿರುವುದಾಗಿ ವಿ.ಸೀ.ಯವರಿಗೆ ಕಂಡುಬಂದಿತು. ಕೂಡಲೆ ಅವರ ಆಗ್ರಹ ಹೊರಬಿತ್ತು. ವ್ಯವಸ್ಥೆಯನ್ನು ಹೇಳಬಂದವರಿಗೆ ಅವರ ತಪ್ಪನ್ನು ತೋರಿಸಿ, ತಕ್ಕ ಬದಲಾವಣೆಗಳನ್ನು ಮಾಡುವುದಾಗಿ ಅವರು ಹೇಳುವವರೆಗೂ ವಿ.ಸೀ.ಯವರ ಕೋಪ ಇಳಿಯಲಿಲ್ಲ. ಇಂತಹ ಸಮಯಗಳನ್ನುಳಿದು ಬೇರೆ ವೇಳೆಯಲ್ಲಿ ವಿ.ಸೀ.ಯವರಷ್ಟು ಮೃದುತೆ ಮಾಧುರ್ಯಗಳಿಂದ ಮಾತನಾಡುವವರನ್ನು ನಾನು ಕಂಡಿರುವುದು ವಿರಳ.

ಅವರ ಜೀವನದ ಮುಖ್ಯತತ್ವ—ರಾಜಿಯಾಗುವುದು—(compromise)—ಪರಸ್ಪರ ಅಂಗೀಕಾರದಿಂದ ಒಂದು ವ್ಯವಹಾರವನ್ನು ಬಗೆಹರಿಸು

ವುದು. ಇಂಥ ಸನ್ನಿವೇಶಗಳಲ್ಲಿ ಒಂದು ಪಕ್ಷದವರು ಸೋಲಬೇಕಷ್ಟೆ. ಅಂತಹ ಸೋಲನ್ನು ಮೊದಲು ಒಪ್ಪಿಕೊಂಡು ಕೆಲಸವನ್ನು ಮುಂದುವರಿಸಲು ತಾವು ಮಾರ್ಗವನ್ನು ಹಿಡಿಯುತ್ತಿದ್ದವರು ವಿ.ಸೀ. ಹಲವು ಸನ್ನಿವೇಶಗಳಲ್ಲಿ ಇಂಥ ಸೋಲು, ತ್ಯಾಗಗಳ ಬೆಲೆಯನ್ನು ಬೇರೆ ಪಕ್ಷದವರು ತಿಳಿಯಲಾರದೆ ಕೊರಗು ತ್ತಿದ್ದರು. ಹಾಗಾದರೂ ವಿ.ಸೀ.ಯವರ ಮನಸ್ಸು ಕಹಿಯಾಗುತ್ತಿರಲಿಲ್ಲ. ಒಳ್ಳೆಯ ಕೆಲಸಕ್ಕಾಗಿ ಮಾಡಿದ ಪ್ರಯತ್ನ, ವೆಚ್ಚಕ್ಕಾಗಿ ಅವರು ವ್ಯಥೆಪಡುತ್ತಿ ಲಿಲ್ಲ. ಎಷ್ಟು ಸಲ ಸೋತು ಸೊರಗಿದ್ದರೂ, ಈ ತತ್ವವನ್ನು ಮಾತ್ರ ಅವರು ತ್ಯಾಗಮಾಡಿಲ್ಲ.

ಜೀವನದ ಕಷ್ಟಗಳು ಬಹುಬಗೆಯವು. ಯಾವುದನ್ನು ನೋಡಿಯೂ ಸುಮ್ಮನಿರಲು ಅವರಿಗೆ ಸಾಧ್ಯವಿಲ್ಲ. ಅವರ ಕೈಲಾದಷ್ಟು ಮಾತ್ರವೇ ಅಲ್ಲ; ಅವರ ಕೈಮೀರಿಯೂ ಕಷ್ಟನಿವಾರಣೆ ಮಾಡಲು ಪ್ರಯತ್ನಮಾಡಿದಾರೆ. ವಿದ್ಯಾರ್ಥಿಗಳು ಬಂದು ಅವರ ಕಷ್ಟಗಳನ್ನು ಹೇಳಿಕೊಂಡರೆ ಆ ಕ್ಷಣದಲ್ಲಿ ಹಣವಿಲ್ಲವಾದರೆ, ಮಾರನೆ ದಿನ ಅವರನ್ನು ಬರಹೇಳಿ, ಎಲ್ಲಿಯಾದರೂ ಸಾಲವನ್ನಾದರೂ ಮಾಡಿ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದರು. ವಿದ್ಯಾರ್ಥಿಗಳು ಪ್ರಾಮಾಣಿಕರೆ, ಅವರು ಹೇಳುವ ಕತೆಗಳು ಸುಳ್ಳೇ, ನಿಜವೇ ಪರೀಕ್ಷೆ ಮಾಡುತ್ತಿರಲಿಲ್ಲ. ಒಂದು ವರ್ಷ ಕಳೆದಮೇಲೆ, ಇವರಿಂದ ಸಹಾಯ ಪಡೆದ ವಿದ್ಯಾರ್ಥಿಗಳು ಕೆಟ್ಟವರು ಎಂದು ತಿಳಿಯಬರುತ್ತಿದ್ದಿತು. ಆಗಲೂ ಸಹ ವಿದ್ಯಾರ್ಥಿಗಳ ಮೇಲೆ ಕೋಪಿಸಿಕೊಳ್ಳುತ್ತಿರಲಿಲ್ಲ. ವಿ.ಸೀ.ಯವರು ಇಷ್ಟು ಸುಲಭರಾದರೂ ದೂರದಿಂದ ನೋಡಿದ ವಿದ್ಯಾರ್ಥಿಗಳು ಇವರನ್ನು—High brow ಎಂದು ತಿಳಿಯುತ್ತಿದ್ದರು. ಆದರೆ ಒಂದು ಬಾರಿ ಅವರನ್ನು ಸಮೀಪ ದಲ್ಲಿ ಕಂಡಮೇಲೆ ಅವರ ಸರಳತೆಯನ್ನು ಕೊಂಡಾಡುತ್ತಿದ್ದರು. ವಿ.ಸೀ.ಯವರ ಪಾಂಡಿತ್ಯ, ಮಾತಿನ ಧೋರಣೆ, ಮೇಧಾವಿಗಳಾದ ಶ್ರೀಮಂತರ ಸಹವಾಸವನ್ನು ಕಂಡವರು ಅವರನ್ನು High brow ಜಾತಿಗೆ ಸೇರಿಸುತ್ತಿದ್ದರು. ಆದರೆ High brow ಮನೋವೃತ್ತಿ ಅವರ ಸ್ವಭಾವಕ್ಕೆ ವಿರುದ್ಧವಾದುದು.

ವಿ.ಸೀ.ಯವರ ಮಿತ್ರವೃಂದ ಬಹು ದೊಡ್ಡದು; ವಿಶಾಲ ಕರ್ನಾಟಕ ದಷ್ಟೂ ದೊಡ್ಡದು. ಅವರ ಆದರ, ಔದಾರ್ಯಗಳ ಸವಿಯನ್ನು ಕಾಣದವರು ವಿರಳ. ಇಷ್ಟು ಮಾತನ್ನು ಬಹುಜನರ ವಿಚಾರವಾಗಿ ಹೇಳಲು ಸಾಧ್ಯವಿಲ್ಲ.

ವಿ.ಸೀ.ಯವರು ಈ ರೀತಿಯಲ್ಲಿ ಮಾಡಿರುವ ವೆಚ್ಚದ ಲೆಕ್ಕಾಚಾರ ಮಾಡುವ ಹಂಬಲ ನನಗಿಲ್ಲ. ಆದರೆ ಒಂದು ಸಂಗತಿಯನ್ನು ಹೇಳದೆ ಇರಲಾರೆ. ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ನಾವಿಬ್ಬರೂ ಅಧ್ಯಾಪಕ ರಾಗಿದ್ದ ಕಾಲಕ್ಕೆ ಸೇರಿದ್ದು. ಮಧ್ಯಾಹ್ನ ಒಂದೂವರೆ ಗಂಟೆಗೆ ನಾವು ಕಾಲೇಜು ಹೋಟಲಿಗೆ ಹೋಗುವ ವೇಳೆಗೆ ಸರಿಯಾಗಿ, ಹೋಟಲಿನ ಬಾಗಿಲ ಬಳಿ ಒಬ್ಬ ಭಿಕ್ಷುಕ ಇರುತ್ತಿದ್ದ. ಅವನ ಹೊಟ್ಟೆ ಬೆನ್ನಿಗೆ ಬಹು ಸಮೀಪ ದಲ್ಲಿರುತ್ತಿದ್ದುದು ಎಲ್ಲರಿಗೂ ಸ್ಪಷ್ಟವಾಗಿ ಕಾಣುತ್ತಿತ್ತು. ಅವನು ಹೊಟ್ಟೆಯನ್ನು ಬಡಿದುಕೊಂಡು, ತಿಂಡಿ ಕೊಡಿಸಿ ಎಂದು ಕೇಳುತ್ತಿದ್ದ—ಅಳುತ್ತಿದ್ದ ಅಂದರೆ ಮೇಲು. ಅವನಿಗೆ ಮೊದಲು ತಿಂಡಿಯನ್ನು ಕೊಡಿಸಿ ಆಮೇಲೆ ತಿಂಡಿ ತಿನ್ನು ತ್ತಿದ್ದವರು ವಿ.ಸೀ.ಯವರೊಬ್ಬರೇ—ಇತರರು ಮೂರು ಕಾಸು, ಆರು ಕಾಸನ್ನು ಅವನಿಗೆ ಕೊಡುತ್ತಿದ್ದರು. ವಿ.ಸೀ.ಯವರ ಹೃದಯಧರ್ಮವನ್ನರಿತ ಆ ಭಿಕ್ಷುಕ ಇವರ ಮುಖವನ್ನು ಕಂಡ ಕೂಡಲೆ ಹೆಚ್ಚು ಸಂಕಟವನ್ನು ತೋರುತ್ತಿದ್ದ— ಇದನ್ನು ಕಾಣುತ್ತಿದ್ದವರು ನಾವು—ವಿ.ಸೀ.ಯವರಲ್ಲ. ಅವರು ಕಾಣುತ್ತಿದ್ದುದು ಹಸಿವಿನಲ್ಲಿದ್ದ ಜೀವವೊಂದನ್ನು ಮಾತ್ರ; ಅದನ್ನು ತೃಪ್ತಿಪಡಿಸದೆ ಅವರಿಗೆ ಶಾಂತಿ ಇರುತ್ತಿರಲಿಲ್ಲ. ವಾರಕ್ಕೆ ಎರಡು, ಮೂರು ದಿನಗಳಾದರೂ ಈ ಕೆಲಸ ನಡೆಯುತ್ತಿತ್ತು. ವಿ.ಸೀ.ಯವರು ಈ ಭಿಕ್ಷುಕನನ್ನು ಕಂಡು ಬೇಸರಪಟ್ಟದ್ದನ್ನು ನಾನು ಕಾಣೆ.

ವಿ.ಸೀ.ಯವರ ಜೀವನದ ಸೂತ್ರಗಳನ್ನು ಕೈಯಲ್ಲಿ ಹಿಡಿದಿರುವ ದೈವ, ಸುದೈವವಲ್ಲ ಎನಿಸುತ್ತದೆ, ನನಗೆ. ಅವರು ಎಂ.ಎ. ತರಗತಿಯಲ್ಲಿ ಓದಿದ್ದು ಅರ್ಥಶಾಸ್ತ್ರವನ್ನು. ಇಂಗ್ಲಿಷ್ ಸಾಹಿತ್ಯಕ್ಕೆ ಅವರ ಮನಸೋತಿತ್ತು. ಇಂಗ್ಲಿಷ್ ಸಾಹಿತ್ಯವನ್ನು ಓದಿ ಎಂ.ಎ. ಪರೀಕ್ಷೆ ಮಾಡಿದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಆಧುನಿಕ ಆಂಗ್ಲಸಾಹಿತ್ಯವನ್ನು ಓದಿದವರು ವಿ.ಸೀ. ಕವಿಯ ಹೃದಯದಲ್ಲಿ ಮೂಡಿಬರುವ ಆವೇಶದಿಂದ ಆಂಗ್ಲ ಸಾಹಿತ್ಯವನ್ನು ಓದಿದವರಾದ್ದರಿಂದ ಕನ್ನಡ ಪುನರುಜ್ಜೀವನಕಾರ್ಯದಲ್ಲಿ ಉದ್ಯುಕ್ತರಾಗಿ ಯಶಸ್ವಿಯಾಗಿ ಕೆಲಸಮಾಡಿ, ವಿಶ್ವವಿದ್ಯಾನಿಲಯದಲ್ಲಿ, ಹಿರಿಯರ ಮಾತಿಗೆ ಮನ್ನಣೆ ಕೊಟ್ಟು, ಕನ್ನಡ ಅಧ್ಯಾಪಕರಾದರು. ಪಠ್ಯಪುಸ್ತಕ ಕನ್ನಡವಾದರೂ, ಪಾಠಹೇಳುವ ಭಾಷೆ ಕನ್ನಡವಾದರೂ, ವಿ.ಸೀ.ಯವರ ಜ್ಞಾನರಾಶಿಯಿಂದ ಹೊರಟುಬರುತ್ತಿದ್ದ

ಭಾವನೆಗಳ ತಂಡಕ್ಕೆ ಕನ್ನಡದಲ್ಲಿ ಯೋಗ್ಯವಾದ ವಾಕ್ಸರಣಿ ಇಲ್ಲವಾಗಿ, ಅವರು ಇಂಗ್ಲಿಷ್ ಭಾಷೆಯಲ್ಲಿ ಭಾವನೆಗಳನ್ನು ಸ್ಪಷ್ಟಪಡಿಸುವುದು ಒಂದು ವಾಡಿಕೆ ಯಾಯಿತು. 'ಕನ್ನಡ ಪಾಠವನ್ನು ಇಂಗ್ಲಿಷ್‌ನಲ್ಲಿ ಮಾಡುತ್ತಾರೆ' ಎಂದು ವಿದ್ಯಾರ್ಥಿಗಳು ಒಂದೊಂದು ಸಲ ಹೇಳುತ್ತಿದ್ದರು. ನಮ್ಮ ವಿದ್ಯಾರ್ಥಿಗಳ ಮನಸ್ಸು ಬೆಳೆಯಬೇಕು, ಹೃದಯ ವಿಶಾಲವಾಗಬೇಕು, ಅವರ ಜ್ಞಾನರಾಶಿ ಹೆಚ್ಚಬೇಕು ಎನ್ನುವುದೇ ವಿ.ಸೀ.ಯವರ ಹಂಬಲ. ಅದಕ್ಕೆ ಯಾವ ಭಾಷೆ ಯಾದರೇನು? ಅವರನ್ನು ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರನ್ನಾಗಿ ಮಾಡಿದ್ದರೆ ವಿದ್ಯಾರ್ಥಿಗಳಿಗೆ ಯಾವ ಬಗೆಯಲ್ಲೂ ನಷ್ಟವಾಗುತ್ತಿರಲಿಲ್ಲ. ಅದರಿಂದ ವಿ.ಸೀ.ಯವರಿಗಂತೂ ಯಾವ ಬಗೆಯ ವ್ಯತ್ಯಾಸವೂ ಆಗುತ್ತಿರಲಿಲ್ಲ.

ಸಾಹಿತ್ಯಪ್ರಪಂಚಕ್ಕೆ ಸೇರಿದಮಾತ್ರಕ್ಕೆ ಅವರು ಅರ್ಥಶಾಸ್ತ್ರದ ಸಂಬಂಧ ವನ್ನು ತ್ಯಜಿಸಲಿಲ್ಲ........ಅರ್ಥಶಾಸ್ತ್ರಕ್ಕೂ ಇವರಿಗೂ ಬಹು ನಿಕಟವಾದ ಸಂಬಂಧವೇ ಇತ್ತು. ಒಂದು ಮತ್ತು ಎರಡನೇ ಮಹಾಯುದ್ಧಗಳ ಫಲವಾಗಿ ಅರ್ಥಶಾಸ್ತ್ರದಲ್ಲಿ ಉಂಟಾದ ಮಾರ್ಪಾಡುಗಳನ್ನು ವಾರವಾರವೂ, ತಿಂಗಳು ತಿಂಗಳೂ ಲಂಡನ್ನಿನಿಂದ ಬರುವ ವಾರಪತ್ರಿಕೆಗಳಾದ 'West Minister Gazette, Nation, New Statesman', ಆಮೇಲೆ 'The New Statesman and Nation' ಮುಖಾಂತರವೂ; ಮಾಸ ಅಥವಾ ತ್ರೈಮಾಸಿಕ ಪತ್ರಿಕೆಗಳಾದ 'Economic, The Economist, The Economic Journal' ಇತ್ಯಾದಿಗಳನ್ನು ಸ್ವಂತಕ್ಕೆ ತರಿಸಿಕೊಂಡು ವ್ಯಾಸಂಗಮಾಡುತ್ತಿದ್ದರು. ಒಂದು ಸನ್ನಿವೇಶದಲ್ಲಿ Sir J. M. Keyenes ರವರ ಸಂಗಡ ಪತ್ರವ್ಯವಹಾರವನ್ನೂ ನಡೆಸಿದರು. J. M. Keyenes ರವರ 'Theory of Money'ಯನ್ನು ಇವರು ತರಿಸಿಕೊಂಡು ಓದಿ ಆರು ತಿಂಗಳಾದಮೇಲೆಯೂ ಹಲವು ಅರ್ಥಶಾಸ್ತ್ರ ಅಧ್ಯಾಪಕರು ಆ ಪುಸ್ತಕಗಳ ಹೆಸರನ್ನೇ ಕೇಳಿರಲಿಲ್ಲ. ಯಾವ ಶಾಸ್ತ್ರವಾದರೂ ಸರಿ, ಸಾಹಿತ್ಯವಾದರೂ ಸರಿ—ಬಹುಮಂದಿ ಅಧ್ಯಾಪಕರಿಗೆ ಅದರ ಜೀವಾಳವೇ, ತಿರುಳೇ ತಿಳಿದಿರುವು ದಿಲ್ಲ. ಪುಸ್ತಕಗಳಲ್ಲಿ ಹೇಳಿರುವುದನ್ನು ವಿದ್ಯಾರ್ಥಿಗಳಿಗೆ ಹೇಳುವ ಶಕ್ತಿ ಮಾತ್ರ ಇರುತ್ತದೆ. ವಿ.ಸೀ.ಯವರು ಅರ್ಥಶಾಸ್ತ್ರದ ಜೀವಾಳವನ್ನು ಹೃದಯವನ್ನು ಚೆನ್ನಾಗಿ ಬಲ್ಲವರು. ಆ ಶಾಸ್ತ್ರಸಂಬಂಧವಾದ ಯಾವ ಭಾವನೆಯೊಂದು

ಹೊಸತಾಗಿ ಬಂದರೂ ಅದು ವಿ.ಸೀ.ಯವರ ಹೃದಯವನ್ನು ಕಲಕುತ್ತಿದ್ದಿತು. ಮೊದಲನೆಯ ಮಹಾಯುದ್ಧದ ಫಲವಾಗಿ ೧೯೩೯-೩೦ನೇ ವರ್ಷಗಳಲ್ಲಿ ಯುರೋಪಿನ ದೇಶಗಳು ಒಂದೊಂದಾಗಿ ಸುವರ್ಣಾಧಾರದ ನಾಣ್ಯಪದ್ಧತಿಯನ್ನು (The Gold Standard) ತ್ಯಜಿಸಿದಾಗ ಅವರ ಹೃದಯ ಮನಸ್ಸುಗಳು ಹೇಗೆ ಅಲ್ಲೋಲಕಲ್ಲೋಲವಾಯಿತು ಎಂದು ಕಾಣುತ್ತಿದ್ದೆ. ವೃತ್ತಪತ್ರಿಕೆಯ ಮೂಲೆಯೊಂದರಲ್ಲಿ—'ಹೊಸ ಚಿನ್ನದಗಣಿಯೊಂದು ದಕ್ಷಿಣ ಆಫ್ರಿಕದಲ್ಲಿ ಇಂಗ್ಲಿಷರಿಂದ ಕಂಡುಹಿಡಿಯಲ್ಪಟ್ಟಿದೆ' ಎಂದು ಸಮಾಚಾರ ಬಂದರೆ, ಅದು ವಿ.ಸೀ.ಯವರ ಮನಸ್ಸನ್ನು ಕಲಕುತ್ತಿದ್ದಿತು. ಅದರಿಂದ ಹಣ ಪ್ರಪಂಚದಲ್ಲಿ ಉಂಟಾಗುವ ಪರಿಣಾಮಗಳನ್ನು ಕುರಿತು ಆ ದಿನವೆಲ್ಲಾ ಚರ್ಚೆ ಮಾಡುತ್ತಿದ್ದರು.

ಎರಡನೇ ಮಹಾಯುದ್ಧ ಆರಂಭವಾದಮೇಲೆ ಚಿನ್ನದ ಬೆಲೆ ಬಹಳವಾಗಿ ಏರಿತು. ಕಾಗದದ ಹಣವನ್ನು ಅಚ್ಚುಹಾಕಿಸುವ ಪ್ರತಿಯೊಂದು ಸರ್ಕಾರವೂ ಅದಕ್ಕೆ ಆಧಾರವಾಗಿ ಸೇಕಡಾ ಇಷ್ಟು ಎನ್ನುವ ಲೆಕ್ಕದ ಪ್ರಕಾರ ಚಿನ್ನವನ್ನು ಇಡುವುದು ವಾಡಿಕೆಯಾಗಿತ್ತು. ಇಷ್ಟು ಬೆಲೆಬಾಳುವ ಚಿನ್ನ ಎಂದು ನಿಯಮವಿತ್ತೇ ವಿನಾ, ಇಷ್ಟು ತೂಕ ಚಿನ್ನವಿರಬೇಕು ಎನ್ನುವ ನಿಯಮವಿರಲಿಲ್ಲ. ಯುದ್ಧಕಾರಣದಿಂದ ವೆಚ್ಚ ಹೆಚ್ಚಿದ ಯುರೋಪ್ ಪ್ರದೇಶಗಳೆಲ್ಲ ಚಿನ್ನಕ್ಕೆ ಹೊಸ ದರದ ಪ್ರಕಾರ ಬೆಲೆ ಕಟ್ಟಿ, ನಿಯಮಿತ ಬೆಲೆಬಾಳುವಷ್ಟು ಚಿನ್ನವನ್ನು ಮಾತ್ರ ದೇಶದಲ್ಲಿಟ್ಟು, ಉಳಿಕೆ ಚಿನ್ನವನ್ನು ಮಾರಿ ವೆಚ್ಚಕ್ಕೆ ಹಣವನ್ನು ಒದಗಿಸಿಕೊಂಡುವು. ಹಲವು ದೇಶಗಳು ಅನುಸರಿಸಿದ ನೀತಿಯನ್ನು ಇಂಡಿಯ ದೇಶವೂ—ನಮ್ಮ ದೇಶವೂ—ಅನುಸರಿಸಿದರೆ ತಲೆಗೆ ಒಂದು ರೂಪಾಯಿನಂತೆ ನಮ್ಮ ದೇಶದ ಜನರಿಗೆ ಹಂಚಬಹುದು; ಇಷ್ಟು ಹೆಚ್ಚು ಮೊತ್ತದಲ್ಲಿ ಬರುವ ಹಣವನ್ನು ದೇಶದ ಅಭ್ಯುದಯಕ್ಕಾಗಿ ಉಪಯೋಗಿಸಬಹುದು ಎಂದು ಒಂದು ಲೇಖನವನ್ನು ಬರೆದರು. ಅದನ್ನು ಶ್ರೇಷ್ಠ ವೃತ್ತಪತ್ರಿಕೆಗಳಿಗೂ, ಅರ್ಥಶಾಸ್ತ್ರಜ್ಞರಿಗೂ, ಕೇಂದ್ರಸರ್ಕಾರದ ನ್ಯಾಯವಿಧಾಯಕ ಸಭೆಯ ಸದಸ್ಯರಿಗೂ ಕಳಿಸಿದರು. ಆಗ ಏಳು ಪ್ರಾಂತಗಳಲ್ಲಿ ನಮ್ಮವರೇ ಸರ್ಕಾರದ ಸೂತ್ರಗಳನ್ನು ಹಿಡಿದಿದ್ದರು. ಆದರೂ ಯಾರೊಬ್ಬರೂ ಇವರ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಲೇಖನವೂ ಪ್ರಕಟವಾಯಿತು. ಆದರೆ ದೇಶಕ್ಕೆ ಪ್ರಯೋಜನವಾಗಲಿಲ್ಲ. ವಿ.ಸೀ.ಯವರ ಹೃದಯದಲ್ಲಿ ಅರ್ಥಶಾಸ್ತ್ರದ ಕಿಡಿ ಇನ್ನೂ ಜ್ವಲಿಸುತ್ತಲೇ ಇದೆ.

ಅದು ಯಾವತ್ತಿಗೂ ನಂದುವುದಿಲ್ಲ.

ವಿ.ಸೀ.ಯವರ ಜ್ಞಾನರಾಶಿ ಬಹು ದೊಡ್ಡದು; ಅವರ ಜ್ಞಾನದಾಹ ಇನ್ನೂ ದೊಡ್ಡದು. ಎಷ್ಟು ಪುಸ್ತಕಭಂಡಾರಗಳಿಂದ ಪುಸ್ತಕಗಳನ್ನು, ಎಷ್ಟು ಸಂಸ್ಥೆಗಳಿಂದ ವಾರಪತ್ರಿಕೆ ಮಾಸಪತ್ರಿಕೆಗಳನ್ನು ಹೊರೆಹೊರೆಯಾಗಿ ತಂದು ಓದಿದರೂ ಅಡಗದಂತಹ ದಾಹ. ನಮ್ಮ ಕಾಲೇಜುಗಳಲ್ಲಿ ಒಂದು ವಿಚಿತ್ರ ಪದ್ಧತಿ ಬಹುದಿನಗಳಿಂದ ನಡೆದುಬರುತ್ತಿದೆ. ಪರೀಕ್ಷೆಗಳೆಲ್ಲ ಮುಗಿದು ಅಧ್ಯಾಪಕರಿಗೆ ವಿರಾಮ ಬಂದ ಕೂಡಲೆ ಕಾಲೇಜು ಪುಸ್ತಕಭಂಡಾರಕ್ಕೆ ಪುಸ್ತಕಗಳನ್ನೆಲ್ಲ ವಾಪಸ್ಸು ಕೊಡಲೇಬೇಕು ಎಂದು ಆಜ್ಞೆ ಹೊರಡುತ್ತದೆ. ಒಂದು ಬೇಸಗೆಯಲ್ಲಿ ಕಾಲೇಜಿನ ಮುಖ್ಯಾಧಿಕಾರಿಗಳು ಯಾರಿಂದ ಎಷ್ಟು ಪುಸ್ತಕ ವಾಪಸ್ಸು ಬರ ಬೇಕು ಎಂದು ತಪಶೀಲನ್ನು ತರಿಸಿಕೊಂಡರು. ವಿ.ಸೀ.ಯವರ ಹೆಸರಲ್ಲಿ ಸುಮಾರು ನಲವತ್ತು ಪುಸ್ತಕಗಳಿದ್ದುವು. ಕಾಲೇಜಿನ ಮುಖ್ಯಾಧಿಕಾರಿಗಳಿಗೆ ಬಹುವಾಗಿ ಕೋಪ ಉಂಟಾಯಿತು. ಪುಸ್ತಕಭಂಡಾರದ ಅಧಿಕಾರಿಯನ್ನು ಕರೆಯಿಸಿ, ‘ ವಿ.ಸೀ.ಯವರಿಗೆ ಇಷ್ಟು ಹೆಚ್ಚು ಸಂಖ್ಯೆಯಲ್ಲಿ ಪುಸ್ತಕಗಳನ್ನು ಏಕೆ ಕೊಟ್ಟೆ ? ಈ ಕೂಡಲೆ ಆಳನ್ನು ಅವರ ಮನೆಗೆ ಕಳಿಸಿ ಪುಸ್ತಕಗಳನ್ನು ತರಿಸು ’ ಎಂದು ಆರ್ಭಟಿಸಿದರು. ಆತ ಬಹು ಮೃದು ಧ್ವನಿಯಿಂದ, ‘ ಸ್ವಾಮಿ, ನಮ್ಮ ಪುಸ್ತಕಭಂಡಾರದ ಬಹು ಪುಸ್ತಕಗಳನ್ನು ಓದುವ ಇಬ್ಬರಲ್ಲಿ ವಿ.ಸೀ.ಯವರೂ ಒಬ್ಬರು. ಅವರಿಗೇ ಪುಸ್ತಕಗಳನ್ನು ಕೊಡಬಾರದೆಂದರೆ ಇನ್ನು ಯಾರಿಗೆ ಕೊಡ ಬೇಕು ? ನಾನು ಪುಸ್ತಕಗಳನ್ನು ತರಿಸುತ್ತೇನೆ; ಇದಕ್ಕಾಗಿ ಆಳನ್ನು ಅಟ್ಟು ವುದು ಬೇಡ ’ ಎಂದು ನಮ್ರತೆಯಿಂದ ಹೇಳಿದ.

೧೯೩೮ರಲ್ಲಿ ನಾನು ಕೆಲಸಕ್ಕೆ ಸೇರಿದಾಗ ಇಬ್ಬರ ಪರಿಚಯು ನನಗುಂಟಾ ಯಿತು; ಈ ಪರಿಚಯು ಬಹು ಬೇಗನೆ ಬಲಿತು ಸ್ನೇಹವಾಯಿತು. ಈ ಸ್ನೇಹ ದಿಂದ ನನ್ನ ಜೀವನ ಬಹುಮಟ್ಟಿಗೆ ಮಾರ್ಪಟ್ಟಿತು. ನಾವು ಮೂವರಲ್ಲಿ ಹಿರಿಯರಾದ ಶ್ರೀ ಎಚ್. ವಿ. ಭಾಷ್ಯಂ ಅವರು ೧೯೩೭ರಲ್ಲಿ ಈ ಲೋಕವನ್ನು ಬಿಟ್ಟರು. ಆದರೆ ಅವರ ಸ್ನೇಹ ನನ್ನನ್ನು ಬಿಟ್ಟಿಲ್ಲ. ಈಗ ಅವರು ಬದುಕಿದ್ದಿದ್ದರೆ ಅವರ ಸಂತೋಷಕ್ಕೆ ಪಾರವೇ ಇರುತ್ತಿರಲಿಲ್ಲ. ಆ ಜೀವದ ಸಂತೋಷವನ್ನು ನೋಡುವ ಭಾಗ್ಯ ನಮ್ಮದಲ್ಲವಾದರೂ, ಆ ಜೀವ ಈಗ ಸಂತೋಷಪಡುತ್ತಿದೆ ಎಂದು ನನ್ನ ದೃಢವಾದ ನಂಬಿಕೆ.

ಎಸ್. ಮಂಜುನಾಥ್

ಅಧ್ಯಾಪಕ

ವಿಶ್ವವಿದ್ಯಾನಿಲಯದ ಸೋಪಾನಗಳನ್ನೇರುವ ಮೊದಲೆ ಪೂಜ್ಯ ಶ್ರೀ ವಿ.ಸೀ.ಯವರ 'ಪಂಪಾಯಾತ್ರೆ', 'ದೀಪಗಳು' ಎಂಬ ಎರಡು ಪುಸ್ತಕಗಳನ್ನು ಓದಿದ್ದೆ. ಜ್ಯೂನಿಯರ್ ಇಂಟರ್ ತರಗತಿಯಲ್ಲಿ ಓದುತ್ತಿದ್ದಾಗ ವಿ.ಸೀ.ಯವರ 'ನೆಳಲು-ಬೆಳಕು' ಎಂಬ ಪುಸ್ತಕವನ್ನು ನನ್ನ ಹಿರಿಯ ಗೆಳೆಯ ಶ್ರೀ ಸು........ಅವರ ಮನೆಯಲ್ಲಿ ಕಂಡೆ. ಪುಸ್ತಕದ ಪ್ರಕಟನೆಯಲ್ಲಿ ವಿ.ಸೀ.ಯವರು ತೋರಿದ ಅಸಾಧಾರಣ ಪ್ರೇಮ, ಕಲಾದೃಷ್ಟಿಗಳನ್ನು ಕಂಡು ವಿಸ್ಮಯವಾಯಿತು. ರಕ್ಷಾಕವಚದ ಮೊದಲ ಪುಟದಲ್ಲಿ ಮರಗಳ ಅಸ್ಪಷ್ಟ ವರ್ಣಗಳ ಹಿಂದೆ ಹಿಮಾಚ್ಛಾದಿತ ಪರ್ವತಶ್ರೇಣಿ; ಮರಗಳ ಕೆಳಗಡೆ ನೆರಳಿನಲ್ಲಿ ಹರಿದು ಬರುವ ಜಲಪ್ರವಾಹ; ರಕ್ಷಾಕವಚದ ಕೆಳಗಡೆ ಚಿಕ್ಕ ಅಕ್ಷರಗಳಲ್ಲಿ 'ನೆಳಲು-ಬೆಳಕು' ಎಂಬ ಪುಸ್ತಕದ ಹೆಸರು; ಅದರ ಕೆಳಗಡೆ ಇನ್ನೂ ಚಿಕ್ಕ ಅಕ್ಷರಗಳಲ್ಲಿ ಕಂಡೂ ಕಾಣದಂತೆ ವಿ.ಸೀ. ಎಂಬ ಹೆಸರು! ಹಿಂಭಾಗದ ರಕ್ಷಾಕವಚದ ಮೇಲೆ ಎರಡು ಜಿಂಕೆಗಳ ಚಿತ್ರ! ಒಂದು ಜಿಂಕೆ ಮರಗಳ ಮೇಲಿನಿಂದ ಜಾರುವ ಲತೆಗಳನ್ನೋ ಏನೊ ತಿನ್ನಲೆಂದು ತಲೆಯೆತ್ತಿದೆ; ಮತ್ತೊಂದು ಜಿಂಕೆ, ಅದರ ಮರಿ ಇರಬೇಕು, ಬೆದರಿ ಹಿಂದೆ ನೋಡುತ್ತಿದೆ. ರಕ್ಷಾಕವಚದ ಈ ಎರಡು ಚಿತ್ರಗಳಲ್ಲಿಯೂ ನೆಳಲು-ಬೆಳಕಿನ ಸಂಗಮವಾಗಿದೆ; ಕಣ್ಣನ್ನು ಕೋರೈಸುವ ಅತಿಸ್ಪಷ್ಟತೆ ಇಲ್ಲ. ಯಾರಾದರೂ ಪುಸ್ತಕದ ಹೊರನೋಟದಿಂದಲೇ ಅಂತರ್ಮುಖರಾಗಬೇಕು, ಅಂತಹ ಒಂದು ಮನೋಹರ ರೀತಿ!

ನನ್ನ ಹಿರಿಯ ಗೆಳೆಯ ಸು........, ವಿ.ಸೀ.ಯವರ ಆರಾಧಕರು. ಅವರು ಬೆಂಗಳೂರಿನಲ್ಲಿ ಓದುತ್ತಿದ್ದಾಗ ವಿ.ಸೀ.ಯವರು ಅಧ್ಯಾಪಕರಾಗಿದ್ದರು. ಕನ್ನಡವನ್ನು ಇಂಗ್ಲೀಷಿನಲ್ಲಿ ಪಾಠ ಹೇಳಿದ್ದುದು, ಉಳಿದ ತರಗತಿಯ ವಿದ್ಯಾರ್ಥಿಗಳೂ ವಿ.ಸೀ.ಯವರ ತರಗತಿಯಲ್ಲಿ ತುಂಬಿರುತ್ತಿದ್ದುದು—ಹೀಗೆ ವಿ.ಸೀ.ಯವರ ವಿಷಯವನ್ನು ಕೇಳುತ್ತಿದ್ದೆ. ಇಂತಹ ವಿ.ಸೀ.ಯವರನ್ನು ಕಾಣಬೇಕೆಂಬ ಆಸೆ ಅಂಕುರಿಸಿತು.

ಒಂದು ದಿನ ಸಂಜೆ ವಿ.ಸೀ.ಯವರನ್ನು ಕಾಣಬೇಕೆಂದು ಹೊರಟೆ.

ಕೃಷ್ಣಮೂರ್ತಿಪುರದಲ್ಲಿದ್ದ ಅವರ ಮನೆಯನ್ನು ಹುಡುಕಿಕೊಂಡು ಸೇರುವಾಗ ಸಂಜೆ ೬ ಗಂಟೆಯಾಗಿತ್ತು. ಅವರ ಮನೆಯ ಮುಂದಿನ ತೋಟದಲ್ಲಿ ಹಸುರಿತ್ತು. ಬಾಗಿಲ ಬಳಿ ಹೋಗಿ "ಸರ್" ಎಂದೆ. ಒಳಗಡೆಯಿಂದ ಅತಿ ಎತ್ತರವಲ್ಲದ, ತೆಳ್ಳಗಿದ್ದ ವ್ಯಕ್ತಿಯೊಬ್ಬರು ಬಂದು, "ಏನು? ಯಾರು ಬೇಕಾಗಿತ್ತು" ಎಂದು ಕೇಳಿದರು. "ವಿ.ಸೀ.ಯವರನ್ನು ಕಾಣಬೇಕಾಗಿದೆ" ಎಂದೆ. "ಬನ್ನಿ" ಎಂದು ಹೇಳಿ ಒಳಗಡೆ ಕರೆದುಕೊಂಡುಹೋಗಿ ಕುಳ್ಳಿರ ಹೇಳಿದರು.

"ನೀವು ಓದುತ್ತಿದ್ದೀರಾ? ಯಾವ ತರಗತಿ—" ಎಂದೆಲ್ಲ ಕೇಳಿದರು. ನಾನು ಉತ್ತರ ಕೊಟ್ಟೆ.

"ನಿಮ್ಮನ್ನು ಒಂದು ವಿಷಯ ಕೇಳಬೇಕೆಂದು ಬಂದಿದ್ದೇನೆ" ಎಂದೆ.

"ಕೇಳಿ; ತಿಳಿದುದನ್ನು ಹೇಳುತ್ತೇನೆ."

"ಜೀವನದ ಧ್ಯೇಯವೇನು?"

"ಕುಳಿತುಕೊಳ್ಳಿ, ಬಂದೆ" ಎಂದು ಹೇಳಿ ವಿ.ಸೀ.ಯವರು ಒಳಗಡೆ ಹೋದರು. ಸ್ವಲ್ಪ ಹೊತ್ತಿನಲ್ಲಿಯೆ ಒಂದು ತಟ್ಟೆಯಲ್ಲಿ ಉಪ್ಪಿಟ್ಟನ್ನೂ ಒಂದು ಲೋಟದಲ್ಲಿ ಕಾಫಿಯನ್ನೂ ತಂದು ಮೇಜಿನ ಮೇಲಿಟ್ಟು "ತೆಗೆದುಕೊಳ್ಳಿ" ಎಂದರು. ನನಗೆ ಸ್ವಲ್ಪ ಸಂಕೋಚವಾಯಿತು. ಅಪರಿಚಿತನಾದ ನನ್ನನ್ನು ಸುಪರಿಚಿತನಂತೆ ಕಂಡ ಅವರ ಔದಾರ್ಯವನ್ನು ಕಂಡು ವಿಸ್ಮಯದಿಂದ ಮೂಕನಾದೆ. "ಸಂಕೋಚ ಬೇಡ, ತೆಗೆದುಕೊಳ್ಳಿ" ಎಂದರು ವಿ.ಸೀ. ಮತ್ತೆ! ತಟ್ಟೆಯನ್ನು ಕೈಗೆ ತೆಗೆದುಕೊಂಡೆ. ಅಷ್ಟರಲ್ಲಿ ಶ್ರೀ ಶಿವರಾಮ ಕಾರಂತರು ಅಲ್ಲಿಗೆ ಬಂದರು.

"ಇವರಾರು ಗೊತ್ತೆ?" ಎಂದು ಕೇಳಿದರು ವಿ.ಸೀ.

"ಇಲ್ಲ, ಸಾರ್!"

"ಇವರೇ ಶಿವರಾಮ ಕಾರಂತರು."

"ಹೌದು, ನಾನೇ ಶಿವರಾಮ ಕಾರಂತ" ಎಂದು ನಕ್ಕರು ಕಾರಂತರು.

ಶಿವರಾಮ ಕಾರಂತರ ಕಡೆ ತಿರುಗಿ, "You see, this young man wants to know the aim of life" ಎಂದು ಹೇಳಿದರು ವಿ.ಸೀ.

ಕಾರಂತರು ನನ್ನ ಕೈಲಿದ್ದ ತಟ್ಟೆಯನ್ನು ಕಂಡು, "ಮೊದಲು ಕೈಲಿದ್ದುದನ್ನು ತೆಗೆದುಕೊಳ್ಳಿ, ಎಲ್ಲ ಚೆನ್ನಾಗಿ ಅರ್ಥವಾಗುತ್ತದೆ" ಎಂದರು. ವಿ.ಸೀ.

ಯವರು ನಕ್ಕರು. ನಾನು ಬೇಗ ಬೇಗ ತಟ್ಟೆಯಲ್ಲಿದ್ದುದನ್ನು ಪೂರೈಸಿ ಕಾಫಿ ಕುಡಿದು ಮುಗಿಸಿದೆ.

ವಿ.ಸೀ. ನನ್ನ ಕಡೆ ನೋಡಿ, "ಒಳ್ಳೆಯ ಜೀವನ ನಡೆಸಿ, ನಾಲ್ಕು ಜನರಿಗೆ ಉಪಕಾರಿಯಾಗಿ, ಜಗತ್ತಿನ ಸಂದೇಶಕ್ಕೆ ಸದಾ ಎಚ್ಚತ್ತಿರಬೇಕು. We must always be receptive to the world" ಎಂದರು. ಕಾರಂತರೂ ವಿ.ಸೀ.ಯವರೂ ಯಾವುದೋ ಸಂಭಾಷಣೆಯಲ್ಲಿ ನಿರತರಾದುದನ್ನು ಕಂಡು, "ಇನ್ನೊಮ್ಮೆ ಬರುತ್ತೇನೆ" ಎಂದು ಕೈ ಮುಗಿದು ಹೊರಟೆ. "ಮತ್ತೊಮ್ಮೆ ಬನ್ನಿ" ಎಂದರು ವಿ.ಸೀ.

ಜೀವನದ ಹೋರಾಟದಲ್ಲಿ ಧುಮುಕಿದ ನನಗೆ ವಿ.ಸೀ.ಯವರ ದರ್ಶನ ಲಾಭ ಕೆಲವು ಕಾಲ ಸಿಗಲಿಲ್ಲ. ಇಂಟರ್ ಮುಗಿಯಿತು. ಕನ್ನಡ ಆನರ್ಸ್‌ಗೆ ಸೇರಿದೆ. ಮೊದಲನೆಯ ದಿನ ವಿ.ಸೀ.ಯವರು ತರಗತಿಗೆ ಬಂದಾಗ ನಾನು ನನ್ನ ಸಹಪಾಠಿ ಇಬ್ಬರೇ ಇದ್ದೆವು. ವಿ.ಸೀ.ಯವರು ಬಂದರು. ಆನರ್ಸ್ ತರಗತಿಯಲ್ಲಿ ಓದಬೇಕಾದ ಪುಸ್ತಕಗಳನ್ನು ಬರೆಸಿದರು.

ಮುಂದಿನ ತರಗತಿ ಸಾಮೂಹಿಕ ತರಗತಿ (general class). ಜೂನಿಯರ್ ಬಿ.ಎ. ಮಂದಿರ. ಗಂಟೆಯಾದೊಡನೆ ನಾವೆಲ್ಲರೂ ಒಳಗಡೆ ಕುಳಿತಿದ್ದೆವು. ವಿ.ಸೀ.ಯವರು ಕಚ್ಚೆಪಂಚೆಯನ್ನುಟ್ಟು, ಮೈಸೂರು ರುಮಾಲನ್ನು ಧರಿಸಿ, ಮೈತುಂಬಿದ ಸರ್ಜ್‌ಕೋಟನ್ನು ಧರಿಸಿ, ಧಾರವಾಡದ ಗಂಡು ಚಪ್ಪಲಿಯನ್ನು ಮೆಟ್ಟಿ, ಬಲಗೈಯಲ್ಲಿ ಹಾಜರಿಪುಸ್ತಕದೊಂದಿಗೆ ಎರಡು ಸೀಮೆಸುಣ್ಣಗಳನ್ನು ಹಿಡಿದುಕೊಂಡು ಗಂಭೀರ ಗತಿಯಿಂದ ಪ್ರವೇಶಿಸಿದರು. ಬಹುಮಂದಿ ವಿದ್ಯಾರ್ಥಿಗಳು ನಿಂತು ಗೌರವ ತೋರಿದೆವು. ಅವರು ಕುಳಿತೊಡನೆ ನಾವೂ ಕುಳಿತೆವು. ಮಂದಿರವೆಲ್ಲಾ ನಿಶ್ಶಬ್ದವಾಯಿತು. ಗಿಡಮರಗಳ ಮಧ್ಯೆ ಹಾದುಬಂದ ಗಾಳಿ ಆಗೊಮ್ಮೆ ಈಗೊಮ್ಮೆ ಸುಯ್ಯೆಂದು ಜಪಿಸಿ ಮೌನವಾಗುತ್ತಿತ್ತು. ವಿ.ಸೀ.ಯವರು ಹಾಜರಿಪುಸ್ತಕವನ್ನು ತೆರೆದು ಬಹು ಮೆಲ್ಲಗೆ ಕೇಳಿಯೂ ಕೇಳಿಸದಂತೆ ಹೆಸರನ್ನು ಕರೆಯಲಾರಂಭಿಸಿದರು. ತರಗತಿ ಮತ್ತಷ್ಟು ಶಾಂತವಾಯಿತು. ಒಬ್ಬರೊ ಇಬ್ಬರೊ ಪಿಸುಗುಟ್ಟಿದುದು ವಿ.ಸೀ.ಯವರ ದೃಷ್ಟಿಗೆ ಬಿತ್ತು. ಆಗ ವಿ.ಸೀ.ಯವರು ತಾವು ಧರಿಸಿದ ಕನ್ನಡಕವನ್ನು ಸ್ವಲ್ಪ ಮೇಲೆತ್ತಿ ವಿದ್ಯಾರ್ಥಿಗಳತ್ತ ತಮ್ಮ ದೃಷ್ಟಿಯನ್ನು ಹರಿಸಿ ಮೇಜಿನ ಮೇಲಿದ್ದ ಒಂದು

ಸೀಮೆಸುಣ್ಣವನ್ನು ಕೈಗೆ ತೆಗೆದುಕೊಂಡು ಮೃದುವಾಗಿ ಮೇಜಿಗೆ ಬಡಿದು, "Settle down" ಎಂದರು. ಮತ್ತೆ ಎಲ್ಲೆಡೆಯೂ ನಿಶ್ಶಬ್ದ, ಶಾಂತಿ. ಹಾಜರಿ ಮುಗಿಯಿತು. ಕುರ್ಚಿಯ ಮೇಲೆ ಕುಳಿತುಕೊಂಡೇ ವಿದ್ಯಾರ್ಥಿಗಳ ಕಡೆ ತಮ್ಮ ದೃಷ್ಟಿಯನ್ನು ಚೆಲ್ಲಿದರು. ಆ ಮುಖಮುದ್ರೆಯಲ್ಲಿ ಹಲವು ವರ್ಷಗಳ ಅಧ್ಯಾಪಕವೃತ್ತಿಯ ಅನುಭವದ ಪ್ರಭೆಯೊಂದು ಕಾಣುತ್ತಿತ್ತು. ಅವರು ಏನು ಮಾತನಾಡುತ್ತಾರೊ ಎಂದು ಕಾದಿದ್ದೆವು ನಾವು!

"ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ಮೇಧಾವಿಗಳು ಅಧ್ಯಾಪಕರಾಗಿದ್ದರೆಂಬುದು ಹೆಮ್ಮೆಯ ವಿಷಯ"—ಎಂದು ಹೇಳಿ ಕುರ್ಚಿಯಿಂದ ಎದ್ದರು.

"I am proud to stand on this platform, where great men like Prof. Radhakrishnan, Prof. Radhakumud Mukherji and others have taught."

"ನಿಮಗೆ ಈ ಗಂಟೆ ರಕ್ತಾಕ್ಷಿಯನ್ನು ತೆಗೆದುಕೊಳ್ಳುತ್ತೇನೆ. ರಕ್ತಾಕ್ಷಿ ಒಂದು ನಾಟಕ........" ಎಂದು ನಸುನಕ್ಕರು. ಈ ನಗು, ನಮ್ಮ ಕೆಲವರಿಗೆ 'ರಕ್ತಾಕ್ಷಿ'ಯೆಂಬುದೊಂದು ನಾಟಕವೆಂಬುದು ತಿಳಿದಿಲ್ಲ ಎನ್ನುವುದನ್ನು ತೋರುವುದಕ್ಕಾಗಿ!

ಮುಂದೆ ಒಂದು ಗಂಟೆಕಾಲ ನಾಟಕದ ಉಗಮ, ಬೆಳವಣಿಗೆ, ಷೇಕ್ಸ್‌ಪಿಯರ್, ಹ್ಯಾಮ್ಲೆಟ್, ಸಂಸ್ಕೃತ ನಾಟಕ, ಗ್ರೀಕ್ ನಾಟಕ ಹೀಗೆ ನಾಟಕ ಪ್ರಪಂಚದ ಒಂದು ಸಾರಸ್ವತ ಪ್ರಪಂಚವನ್ನೆ ನಮ್ಮ ಕಣ್ಣೆದುರು ತಂದಿಟ್ಟರು. ಈ ಮಧ್ಯೆ ಅವರ ಬರವಣಿಗೆಯಿಂದ ಕಪ್ಪುಹಲಗೆ ತುಂಬಿಹೋಗಿತ್ತು. ಈ ಒಂದು ಗಂಟೆಯಲ್ಲಿ, ಇಂಗ್ಲಿಷ್ ಕನ್ನಡ; ಕನ್ನಡ ಇಂಗ್ಲಿಷ್—ಎರಡರ ಪಾಠವೂ ನಮಗಾಗಿ ಹೋಗಿತ್ತು. ಕನ್ನಡವನ್ನು ಇಂಗ್ಲಿಷಿನಲ್ಲಿ, ಇಂಗ್ಲಿಷನ್ನು ಕನ್ನಡದಲ್ಲಿ ಪಾಠ ಹೇಳುವ ಅವರ ಬೋಧನಕ್ರಮ ಒಂದು ಕಲೆಯೇ ಎಂದು ತೋರಿತು ನಮಗೆ. ಸಾಮೂಹಿಕ ತರಗತಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ನೂರ ನಲವತ್ತಕ್ಕೆ ಕಡಮೆ ಇರಲಿಲ್ಲ. ಹೆಚ್ಚು ವಿದ್ಯಾರ್ಥಿಗಳಿದ್ದ ಸಾಮೂಹಿಕ ತರಗತಿಗಳಲ್ಲಿ ವಿ.ಸೀ.ಯವರಿಗೆ ಒಂದು ಹುಚ್ಚು ಆವೇಶ ಬರುತ್ತಿತ್ತು. ಆ ಆವೇಶದಲ್ಲಿ ವಿದ್ಯಾರ್ಥಿಗಳೂ ಪರವಶರಾಗಿ ಒಂದು ಗಂಟೆ ಕಾಲ ಮರ್ತ್ಯಬಂಧನದಿಂದ ಪಾರಾಗಿ ಬೇರೊಂದು ರಸಲೋಕವಿಹಾರಿಗಳಾಗುತ್ತಿದ್ದೆವು.

ವಿ.ಸೀ.ಯವರು ಆದರ್ಶ ವ್ಯಕ್ತಿಗಳು. ಆದ್ದರಿಂದಲೆ ಸ್ವಲ್ಪ ಅಸೀತಿ ವರ್ತನೆಯನ್ನು ಕಂಡರೂ ಅವರು ಸಹಿಸುತ್ತಿರಲಿಲ್ಲ. ಒಮ್ಮೆ ಅವರು ಎಂದಿನಂತೆ ಮೆಲ್ಲಗೆ ಹಾಜರಿ ಕರೆಯುತ್ತಿದ್ದಾಗ ಇಂಗ್ಲಿಷ್ ಆನರ್ಸ್ ವಿದ್ಯಾರ್ಥಿ ಶ್ರೀ ವೆಂ........ರವರು ನಿಂತು, "ನಿಮ್ಮ ಧ್ವನಿ ಕೇಳಿಸುವುದಿಲ್ಲ" ಎಂದರು. "If you can concentrate, you can hear" ಎಂದರು ವಿ.ಸೀ. ಮಾತಿಗೆ ಮಾತು ಸೇರಿ ಬಿಸಿ ಬಿಸಿಯಾಯ್ತು. ವಿ.ಸೀ.ಯವರು "It is better you get out" ಎಂದರು. ವೆಂ............ಜಗ್ಗಲಿಲ್ಲ. "If you don't clear out I will go" ಎಂದರು ಮತ್ತೆ. ತರಗತಿಯಲ್ಲಿ ಶಾಂತಿ ಕಲಕಿತು. ವಿ.ಸೀ.ಯವರು ತರಗತಿ ಬಿಟ್ಟು ಹೊರಟರು. ವೆಂ........ ಅಷ್ಟಕ್ಕೆ ಸುಮ್ಮನಿರಲಿಲ್ಲ. ಉಪಾಧ್ಯಾಯರ ಕೊಠಡಿಯತ್ತ ನಡೆದುಕೊಂಡು ಹೋಗುತ್ತಿದ್ದ ಗುರುವರ್ಯ ವಿ.ಸೀ.ಯವರ ಕೈಯನ್ನು ಹಿಡಿದರು. ವಿ.ಸೀ.ಯವರು ತಾಳ್ಮೆಯನ್ನು ಕಳೆದುಕೊಳ್ಳದೆ, "What! You want to man-handle me!" ಎಂದರು. ಉಳಿದ ಕೆಲವು ವಿದ್ಯಾರ್ಥಿಗಳು ವೆಂ........ರವರನ್ನು ಇತ್ತ ಎಳೆದರು.

ಮುಂದಿನ ತರಗತಿ ಬಂತು. ಹಾಜರಿ ಕರೆಯುತ್ತ ವೆಂ........ರವರ ಹೆಸರು ಬಂದೊಡನೆ "You, please go out" ಎಂದರು.

"Why, Sir?" ಎಂದು ವೆಂ........ರವರ ಮರು ಪ್ರಶ್ನೆ!

"This is my class, you please go out."

ಅಷ್ಟು ಹೊತ್ತಿಗೆ ವಿದ್ಯಾರ್ಥಿಗಳು "ಹೊರಗಡೆ ಹೋಗ್ರಿ" ಎಂದು ಪಿಸುಗುಟ್ಟಿದರು. ವೆಂ........ಹೊರಟು ಹೋದರು. ಮತ್ತೊಮ್ಮೆ ಅವರು ತರಗತಿಗೆ ಬರುವ ವೇಳೆಗೆ ಗುರುಗಳ ಕ್ಷಮೆ ಬೇಡಿದ್ದರು.

ಸತ್ಯಕ್ಕಾಗಿ, ನಿಯಮಕ್ಕಾಗಿ, ಶಿಸ್ತಿಗಾಗಿ ಹೋರಾಡಲು ವಿ.ಸೀ.ಯವರು ಹಿಂಜರಿಯುತ್ತಿರಲಿಲ್ಲ. ಅವರು ತರಗತಿಯಲ್ಲಿಡುತ್ತಿದ್ದ ಶಿಸ್ತು ಅವರ ವ್ಯಕ್ತಿತ್ವದಿಂದಲೇ ಹೊರತು ಪ್ರತಿದಿನವೂ ಅವರು ಶಿಸ್ತಿನ ವಿಷಯವಾಗಿ ಬೋಧಿಸುತ್ತಿರಲಿಲ್ಲ. ಅವರು ತರಗತಿಗೆ ಬಂದೊಡನೆ ಹೇಳುತ್ತಿದ್ದ 'settle down' ಎಂಬ ಪದ, ಅವರ ದೃಷ್ಟಿಯ ವಿತಾನ ಇಷ್ಟೇ ಸಾಕಾಗಿತ್ತು. ಅವರು ತರಗತಿಯಲ್ಲಿ ಹೇಳದ ವಿಷಯವಿಲ್ಲ; ಸಾಹಿತ್ಯ, ತತ್ವ, ಅರ್ಥಶಾಸ್ತ್ರ,

ರಾಜ್ಯಶಾಸ್ತ್ರ, ಎಲ್ಲವೂ ಬಂದು ಹೋಗುತ್ತಿತ್ತು. ವಿ.ಸೀ.ಯವರ ಚೇತನ ಪಾದರಸದಂತೆ ತುಂಬ ಚುರುಕು. ಚಿತ್ರ, ಸಂಗೀತ ಮೊದಲಾದ ಕುಶಲಕಲೆಗಳಲ್ಲಿಯೂ ಅವರಿಗೆ ಅಭಿರುಚಿ. ಒಮ್ಮೆ ಅವರು ತರಗತಿಯಲ್ಲಿ, "ನೀವು ಕಾಲೇಜಿನಲ್ಲಿ ಓದುವ ಎರಡು ವರ್ಷಗಳಲ್ಲಿ* ಟಾಗೋರ್, ಹಾರ್ಡಿ, ಟಾಲ್‌ಸ್ಟಾಯ್, ಷೆಲ್ಲಿ, ವರ್ಡ್ಸ್‌ವರ್ತ್ ಇವರ ಕೃತಿಗಳನ್ನೂ ರಾಮಾಯಣ, ಭಾರತ, ಭಗವದ್ಗೀತೆ ಮೊದಲಾದ ನಮ್ಮ ದೇಶದ ಅಮೂಲ್ಯ ಗ್ರಂಥಗಳನ್ನೂ—ಹಳಗನ್ನಡವಂತೂ ನಿಮಗೆ ಸಾಧ್ಯವಿಲ್ಲ, ಹೋಗಲಿ—ಆಧುನಿಕ ಕನ್ನಡ ಕವಿಗಳ ಸಾಹಿತಿಗಳ ಕೆಲವು ಮುಖ್ಯ ಕೃತಿಗಳನ್ನಾದರೂ ಓದಿ ಮೈತುಂಬಿ ಬೆಳೆಯಿರಿ; ಮುಂದೆ ನಿಮಗೆ ಕೆಲಸ ಸಿಗುತ್ತದೆಯೋ ಇಲ್ಲವೋ ಆ ಪ್ರಶ್ನೆ ಬೇರೆ. I don't feel sorry even if you fail in your examination but I feel very much if you do not expand your vision!" ಎಂದು ಹೇಳಿದರು.

ಇನ್ನೊಮ್ಮೆ ಗುರುಗಳ ಮನೆಗೆ ಹೋಗಿದ್ದೆ. ಈಗ ಅವರಿದ್ದುದು ಬೇರೆ ಮನೆಯಲ್ಲಿ. ಮನೆಯ ಬಲಗಡೆ ಕೊಠಡಿಯೇ ವಿ.ಸೀ.ಯವರ ಕೊಠಡಿ. ಒಂದು ಚಾಪೆ ಹಾಸಿತ್ತು. ಬಲಗಡೆ ಪುಸ್ತಕಗಳ ನಿಲವು. ಅದರ ಮೇಲುಗಡೆ ಒಂದು ರೇಡಿಯೋ. ಎಷ್ಟು ಸರಳ ಇವರ ಬದುಕು ಎನಿಸಿತು ನನಗೆ! ವಿ.ಸೀ.ಯವರ ಹತ್ತಿರ ಆ ಮಾತು ಈ ಮಾತು ಆಡುತ್ತ ಕಾಲ ಕಳೆಯಿತು. ಅವರು ಆ ಮಧ್ಯೆ "Anatole France has written a psychological novel, Thais, have you read it?" ಎಂದು ಕೇಳಿದರು. "ಇಲ್ಲ, ಸರ್" ಎಂದೆ. "Do read it. ನಮ್ಮ ಸುತ್ತಲೂ ಬೇಲಿ ಹಾಕಿ ನಾನು ನಿರ್ಭೀತನಾದೆ ಎಂದು ತಿಳಿಯುವುದೂ ಬೆಪ್ಪುತನ. ಆ ಪುಸ್ತಕ ಓದು. ನೀರು ಸದಾ ಹರಿಯುತ್ತಿರಬೇಕು, ಹಾಗೆಯೇ ಮನಸ್ಸು ದಿನದಿನವೂ ವಿಶಾಲವಾಗುತ್ತಿರಬೇಕು" ಎಂದರು.

ಮೂರನೆಯ ತರಗತಿಯಲ್ಲಿದ್ದಾಗ ಛಂದಸ್ಸಿನ ಪಾಠವನ್ನು ವರ್ಷದ ಕೊನೆಯಲ್ಲಿ ಕೆಲವು ವಿಶೇಷ ತರಗತಿಗಳಲ್ಲಿ ಮುಗಿಸಿದರು. ಈ ವಿಶೇಷ

* ಬಿ.ಎ., ಬಿ.ಎಸ್‌ಸಿ. ವಿದ್ಯಾರ್ಥಿಗಳನ್ನು ಕುರಿತು ಹೇಳಿದುದು.

ತರಗತಿಗಳಲ್ಲಿ ನಮಗೆ ದಿನವೂ ಕಾಫಿ ಕೊಡಿಸುತ್ತಿದ್ದರು. ಅನಂತರ, ಕಾಲದ ಮೇಲೆ ಗಮನವಿರುತ್ತಿರಲಿಲ್ಲ. 'ಶ್ರೀ'ಯವರು ಬರೆದ ಕೈಪಿಡಿಯ ಕನ್ನಡ ಛಂದಸ್ಸಿನ ಚರಿತ್ರೆಯನ್ನು ಅವರು ಬೋಧಿಸುತ್ತಿದ್ದಾಗ ಅವರ ಗುರುಭಕ್ತಿ ಉಕ್ಕಿ ಹರಿಯುತ್ತಿತ್ತು. "ಶ್ರೀಕಂಠಯ್ಯನವರಿಗೆ ಕನ್ನಡದ ಮೇಲೆ ಹುಲಿ ಮುದ್ದು" ಎಂದು ಹೇಳುತ್ತಿದ್ದರು.

ವಿ.ಸೀ.ಯವರು ಯಾವ ಕೆಲಸವನ್ನು ಕೈಗೊಂಡರೂ ತಮಗೆ ಎಷ್ಟು ದಣಿವಾದರೂ ಸಮರ್ಪಕವಾಗಿ ಮಾಡುತ್ತಿದ್ದರು. ಪ್ರಬುದ್ಧ ಕರ್ಣಾಟಕದ ಸಂಪಾದಕರಾಗಿದ್ದಾಗ ಅವರು ಹೊರಡಿಸಿದ 'ಬೆಳ್ಳಿಯ ಸಂಚಿಕೆ' ಈಗಲೂ ಬೆಳ್ಳಿಯಂತೆ ಕಂಗೊಳಿಸುತ್ತದೆ. ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘವನ್ನು ನಡೆಸಿಕೊಂಡು ಹೋಗುತ್ತಿದ್ದಾಗ ಅವರ ದಿಗ್ದರ್ಶನದಲ್ಲಿ ನಡೆದ ಕೆಲವು ಸಮಾರಂಭಗಳನ್ನಂತೂ ಮರೆಯುವಂತಿಲ್ಲ. ಅವರ ಕಲಾದೃಷ್ಟಿ, ಸಕಲವನ್ನೂ ಅಣಿಗೊಳಿಸುವ ರೀತಿ, ಶ್ರದ್ಧೆ, ದೂರದೃಷ್ಟಿ, ವಿದ್ಯಾರ್ಥಿಗಳೊಡನೆ ಅಲ್ಲಿಂದಿಲ್ಲಿಗೆ ಓಡಾಡಿ ಕೆಲಸದಲ್ಲಿ ತೋರುವ ತಾದಾತ್ಮ್ಯ ಇವೆಲ್ಲವೂ ಅವರ ಹಿರಿಮೆಯನ್ನು ತೋರುವ ನಿದರ್ಶನಗಳು.

ತರಗತಿಯಲ್ಲಿ ವಿ.ಸೀ.ಯವರು ತೋರುತ್ತಿದ್ದ ಬಿಗಿ, ಅವರ ಮನೆಗೆ ಹೋದಾಗ ಕರಗಿ ಹೋಗುತ್ತಿತ್ತು. ಮನೆಯಲ್ಲಿ ಎಷ್ಟು ಸಲಿಗೆ, ಎಷ್ಟು ಮೈತ್ರಿ! ತಮ್ಮ ಮನಸ್ಸಿಗೆ ಯಾವ ತಡೆಯನ್ನೂ ಹಾಕದೆ ವಿಶಾಲವಾಗಿ ಇನ್ನೂ ವಿಶಾಲವಾಗಿ ಅನಂತತೆಯನ್ನೆ ಹಾರೈಸುತ್ತ ನಡೆವ ಯಾತ್ರಿಕರು ವಿ.ಸೀ. ಅವರೇಕೋ ಈಚೆಗೆ ಮೌನವಾಗಿದ್ದಾರೆ! ಕನ್ನಡ ಇಂಗ್ಲಿಷ್ ಎರಡರಲ್ಲಿಯೂ ಸವ್ಯಸಾಚಿಗಳಾದ ವಿ.ಸೀ.ಯವರು ಯಾವ ಸಾಧನೆಗಾಗಿ ತಪಸ್ವಿಗಳಾದರೋ ತಿಳಿಯದು. ಅವರ ಮಾತು ಕಡಮೆ; ಎಲ್ಲವೂ ಒಂದು ಮಾತು, ಒಂದು ನೋಟ, ಒಂದು ಭಂಗಿ—ಇಷ್ಟರಿಂದಲೇ ಧ್ವನಿ ಪೂರ್ಣವಾಗಿ ಹೃದ್ಗೋಚರವಾಗುವಂತೆ ಉಪದೇಶಿಸುತ್ತಿದ್ದ ಅವರ ಶಕ್ತಿ ಅದ್ಭುತವಾದುದು.

ಜೀವಯಾತ್ರೆಯಲ್ಲಿ ಗುರುಗಳು ಹೃದಯಕ್ಕೆ ಸಂಸ್ಕಾರವಿತ್ತು ನವದೃಷ್ಟಿಯನ್ನು ನೀಡುತ್ತಾರೆ. ನಾವು ಪಡೆದ, ಪಡೆಯುತ್ತಿರುವ ಗುರುಶ್ರೇಣಿಯಲ್ಲಿ ಅಪರೂಪವಾಗಿ ಅಲ್ಲೊಬ್ಬರು ಇಲ್ಲೊಬ್ಬರು ಶ್ರೀ ವಿ.ಸೀ.ಯವರಂತಹ ಪ್ರತಿಭಾಶಾಲಿಗಳು ದೊರಕುತ್ತಾರೆ. ಅದೂ ಒಂದು ಸುಕೃತವೇ! ಅಂಥ ಗುರುಗಳ

ಬಳಿ ಶಿಷ್ಯನಾಗಿ ಕಳೆದ ದಿನಗಳ ನೆನಪು ಅತ್ಯಂತ ಮಧುರವಾದುದು. ಮರೆಯಲಾರದಂತಹುದು.

ಉ. ಕಾ. ಸುಬ್ಬರಾಯಾಚಾರ್

ಹಣಪ್ರಪಂಚ

ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ ಮುಂತಾದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಪ್ರಶಂಸಾರ್ಹ ಕೃತಿರಚನೆ ಮಾಡಿರುವ 'ವಿ.ಸೀ.' ಅವರು ಅರ್ಥಶಾಸ್ತ್ರಜ್ಞರೂ ಹೌದು, ಎಂದರೆ ಆಶ್ಚರ್ಯವಾಗುವುದಲ್ಲವೆ?

ಆದರೆ ಇದು ನಿಜ, ಎನ್ನಲು ಅವರ ಒಂದೇ ಒಂದು ಗ್ರಂಥ 'ಹಣ ಪ್ರಪಂಚ' ಸಾಕು.

ವಿ.ಸೀ. ಅವರ 'ಹಣಪ್ರಪಂಚ' ಅವರ ಹಣದ ಪ್ರಪಂಚವನ್ನು ಬಿತ್ತರಿಸುವ ಗ್ರಂಥವಲ್ಲ. ಸಾಹಿತಿಯ ಹಣಪ್ರಪಂಚದ ವಿವರಣೆ ಬೇಕೆ?

ನಮ್ಮಲ್ಲಿ ಸಾಮಾನ್ಯವಾಗಿ ಸಾಹಿತಿಗೂ ಹಣಪ್ರಪಂಚಕ್ಕೂ ಯಾವಾಗಲೂ ವಿರಸ. ಹಣದ ವಿವಿಧ ವ್ಯಾಪಾರಗಳು ಆತನಿಗೆ ಸುಲಭವಾಗಿ ಅರ್ಥವಾಗಲಾರವು. ಈ ವಿಚಾರದಲ್ಲಿ ಆತನ ಆಲೋಚನೆಯ ತಕ್ಕಡಿ ಯಾವಾಗಲೂ ಏರುಪೇರೇ. ಆದರೂ ಆತ ಇದನ್ನು ಬಿಟ್ಟು ಇರಲಾರ. 'ಕವಿತೆಯೊಳಾಸೆಗೆಯ್ವ ಫಲವಾವುದೊ?' ಎಂಬ ಪ್ರಶ್ನೆಗೆ ಕನ್ನಡ ಕವಿ ಪಂಪ, 'ಪೂಜೆ, ಕೀರ್ತಿ, ಲಾಭ' ಎಂದು ಉತ್ತರಿಸಿದ್ದಾನೆ. ಆದರೆ ಈ ಪೂಜೆ, ಕೀರ್ತಿ, ಲಾಭಗಳು ಎಂಥವು? 'ಇಂದ್ರಪೂಜೆ, ಭುವನಸ್ತುತಮಪ್ಪ ನೆಗಟ್ತೆ, ಮುಕ್ತಿ ಸಂಭವಿಸುವ ಲಾಭ.' ಹೀಗೆಂದು ಆತ ಕಾವ್ಯದಲ್ಲಿ ಬರೆದರೂ ರಾಜಾಶ್ರಯವನ್ನು ಬಿಡಲಾರದಾದ. ಕವಿಗಳದು 'ಭವತಿ ಭಿಕ್ಷಾಂ ದೇಹಿ' ಎಂಬ ಸಪ್ತಾಕ್ಷರೀ ಮಂತ್ರ—ಎಂದು ಹೇಳಿದ 'ರಾಮಾಶ್ವಮೇಧ'ದ ಕವಿ ಮುದ್ದಣ ಬಹುಶಃ ದಾರಿದ್ರ್ಯದಿಂದಲೇ ಸಾಯಬೇಕಾಯಿತು. ವ್ಯಕ್ತಿ ವ್ಯಕ್ತಿಗಳ ನೇರ ಸಂಬಂಧ ಹಣದ ಮಧ್ಯಸ್ಥಿಕೆಯಿಂದ ಪರೋಕ್ಷವಾಗಿ ಪರಿಣಮಿಸಿ, ಇಂದು ಜಗತ್ತಿನಲ್ಲಿ ಎಲ್ಲವೂ ಲೆಕ್ಕಾಚಾರಕ್ಕೆ ಒಳಪಟ್ಟು ಶೋಷಣೆಯ ಹೊಸ ವ್ಯವಸ್ಥೆಯೊಂದು ಏರ್ಪಟ್ಟಿದೆ—ಎಂಬ ಮಾರ್ಕ್ಸ್ ಸಿದ್ಧಾಂತವನ್ನು ಎಲ್ಲರೂ ಒಪ್ಪಲಿ, ಬಿಡಲಿ. ಅಂತೂ ಇಂದು ಎಲ್ಲರೂ ಹಣದ ಉರುಳುಗಲ್ಲನ್ನು ಕೊರಳಿಗೆ ಕಟ್ಟಿಕೊಂಡವರೇ; ಸಾಹಿತಿಗೂ ಇದು ತಪ್ಪಿದ್ದಲ್ಲ—ಎಂಬ ಮಾತೇನೊ ನಿಜ.

ವಿ.ಸೀ. ಅವರ 'ಹಣಪ್ರಪಂಚ' ಹಣದ ವಿಚಿತ್ರ ವ್ಯಾಪಾರಗಳನ್ನು ವೈಜ್ಞಾನಿಕ ದೃಷ್ಟಿಯಿಂದ, ಶಾಸ್ತ್ರೀಯವಾಗಿ ವಿವರಿಸುವ ಉತ್ತಮ ಗ್ರಂಥ.

ಬಹುಶಃ ಈ ಜಾತಿಯ ಪುಸ್ತಕ ಇಷ್ಟು ಸಮರ್ಪಕವಾಗಿ ಕನ್ನಡದಲ್ಲಿ ಬಂದುದು ಇದೇ ಮೊದಲು. ೧೯೩೭ರಲ್ಲಿ—ದ್ವಿತೀಯ ಯುದ್ಧಪೂರ್ವ—ಪ್ರಕಟವಾದ ಈ ಪುಸ್ತಕ ಇಂದಿಗೂ ಉಪಯುಕ್ತವಾಗಿದೆ.

ಶಾಸ್ತ್ರೀಯವಿಷಯಗಳನ್ನು ಕನ್ನಡದಲ್ಲಿ ಪಾಠಹೇಳುವುದು ಕಷ್ಟ; ಅವುಗಳನ್ನು ಕುರಿತು ಪುಸ್ತಕ ತಯಾರಿಸುವುದಂತೂ ಇನ್ನೂ ಕಷ್ಟ—ಎನ್ನುವವರು ಈ ಪುಸ್ತಕವನ್ನು ನೋಡಿದರೆ ತಮ್ಮ ವಾದ ಎಷ್ಟು ಪೊಳ್ಳು ಎನ್ನುವುದರ ಅರಿವಾಗುತ್ತದೆ.

ವಿ.ಸೀ. ಅವರನ್ನು ಸಾಹಿತ್ಯಲೋಕ ಮೆಚ್ಚಿಕೊಂಡಿದೆ. ಆದರೆ ಅವರ ಮೇಲೆ ಅರ್ಥಶಾಸ್ತ್ರಕ್ಕೂ ಅಷ್ಟೇ ಹಕ್ಕಿದೆ. ವಿ.ಸೀ. ಅವರು ಮೊದಲು ಪರಿಣತಿ ಪಡೆದದ್ದು ಅರ್ಥಶಾಸ್ತ್ರದಲ್ಲಿ; ಅನಂತರ ಪ್ರವೇಶಿಸಿದ್ದು ಸಾಹಿತ್ಯ ಲೋಕವನ್ನು. ಅದಕ್ಕೇ ಇರಬೇಕು: ಸಾಹಿತ್ಯದಲ್ಲಿ ಅವರು ಸೃಷ್ಟಿಸಿದುದೆಲ್ಲ ತಕ್ಕಡಿಯಲ್ಲಿ ತೂಗಿ ಇಟ್ಟಹಾಗಿದೆ; ಅಷ್ಟು ಲೆಕ್ಕಾಚಾರ. ಅವರು ಪ್ರಕಟಿಸಿರುವ ಪುಸ್ತಕಗಳ ಅಚ್ಚುಕಟ್ಟೂ ಹಾಗೆಯೇ. ಇಲ್ಲಿ ಕಲೆಗಾರನ ದೃಷ್ಟಿಯೊಡನೆ ಶಾಸ್ತ್ರಜ್ಞನ ಕುಸುರಿಗೆಲಸವೂ ಇದೆ. ತಾವು ಬರೆದುದು ಸಾಹಿತ್ಯದ ಪೇಟೆಯಲ್ಲಿ ಪ್ರಥಮ ಸ್ಥಾನ ಗಳಿಸಬೇಕು—ಎಂಬ ದೃಢನಿಶ್ಚಯ ಅವರಿಗೆ ಇದ್ದಿರಬೇಕು. ಅಂತೆಯೇ ಅವರ ಕೃತಿಗಳ ಒಪ್ಪ ಹಲವು ಕವಿಗಳಿಗೆ ಸಾಧಿಸಿಲ್ಲ.

ಮಾತು ಎಲ್ಲಿಗೋ ಹೋಯಿತು. ವಿ.ಸೀ. ಅವರ 'ಹಣಪ್ರಪಂಚ' ವನ್ನು ಕುರಿತು ಪ್ರಶಂಸಾವಾಕ್ಯಗಳನ್ನು ಹತ್ತಾರು ಪುಟಗಳಷ್ಟು ಬರೆಯಬಹುದೇ ವಿನಾ ಈ ಉದ್ಗ್ರಂಥದ ಪರಿಚಯವನ್ನು ಅಷ್ಟೇ ಪುಟಗಳಲ್ಲಿ ಮಾಡಿಕೊಡುವುದು ಬಹು ಕಷ್ಟ. ಈ ಪುಸ್ತಕವನ್ನು ಬರೆದಾಗ ಬದುಕಿದ್ದ ಶ್ರೀಮಾನ್ ಎನ್. ಎಸ್. ಸುಬ್ಬರಾಯರೇ ಹೀಗೆ ಹೇಳಿದ್ದಾರೆ: "ಇಂಗ್ಲಿಷಿನಲ್ಲಿ 'ಫಿನಾನ್ಸ್' ಎಂಬ ಒಟ್ಟುಹೆಸರಿನಲ್ಲಿ ಅಡಕವಾಗುವ ಅತಿ ತೊಡಕಿನ ವಿಷಯಗಳನ್ನು ವಿವರಿಸುವುದರಲ್ಲಿ ಅವರು ಪಾಂಡಿತ್ಯವನ್ನೂ ತುಂಬಿದ ತಿಳಿವಳಿಕೆಯನ್ನೂ ಪ್ರಯೋಗಿಸಿದ್ದಾರೆಂದು ನಾನು ಗೊತ್ತಾಗಿ ಹೇಳಬಲ್ಲೆನು." ಲೇಖಕರಿಗೆ ಇದಕ್ಕಿಂತ ಹೆಚ್ಚಿನ ಪ್ರಶಂಸೆ ಏನು ಬೇಕು?

'ಈಗಿನ ಸಾಮಾಜಿಕ ಮತ್ತು ಆರ್ಥಿಕವ್ಯವಸ್ಥೆಯಂತೆ ದಿನಚರಿಯ ಬದುಕಿನಲ್ಲಿ ಅನೇಕ ಮೇಲುಬೀಳುಗಳೂ ಕಷ್ಟಸುಖಗಳೂ ನ್ಯಾಯ ಅನ್ಯಾಯ

ಗಳೂ ಹಣದಿಂದ ಉಂಟಾಗುತ್ತವೆ. ಸಂಪತ್ತಿನ ಉತ್ಪತ್ತಿ, ಮಾರುವೆ, ಹಂಚಿಕೆ, ಭೋಗಸಾಧನೆಗಳಲ್ಲೆಲ್ಲ ಹಣದ ಸ್ಥಾನ ದೊಡ್ಡದು.' ಹೀಗೆ ಪ್ರಾರಂಭವಾಗುವ ಈ ಪುಸ್ತಕದ ಸುಮಾರು ಮುನ್ನೂರೈವತ್ತು ಪುಟಗಳಲ್ಲಿ ವಿ.ಸೀ. ಅವರು ಹಣದ ವಿಚಿತ್ರ ವ್ಯಾಪಾರಗಳನ್ನು, ಕೇವಲ ಪದಾರ್ಥಗಳ ಮಾರುವೆಗಾಗಿ, ಮಧ್ಯಸ್ಥಿಕೆಗಾಗಿ ಮನುಷ್ಯ ಸೃಷ್ಟಿಸಿದ ಈ ಪದಾರ್ಥ ಇಂದು ಹೇಗೆ ಒಂದು ತೊಡಕಿನ ವ್ಯವಸ್ಥೆಯಾಗಿ ಪರಿಣಮಿಸಿದೆಯೆಂಬುದನ್ನು ವಿವರಿಸಿದ್ದಾರೆ.

ಮೊದಲು ಹಣದ ಅವತಾರಗಳನ್ನೇ ನೋಡೋಣ: ಹಣವಾಗುವ ಪದಾರ್ಥ ಉಪಯುಕ್ತವಾಗಿರಬೇಕು ಎಂಬ ಭಾವನೆ ಮಾರ್ಪಟ್ಟು, ಅಮೂಲ್ಯ ವಾಗಿದ್ದರೆ ಸಾಕು ಎಂಬ ಭಾವನೆ ಬಲಿತು, ಚಿನ್ನಬೆಳ್ಳಿ ಮುಂತಾದ ಲೋಹ ಗಳು ಹಣವಾಗಿ ಅವತಾರವೆತ್ತಿದ ಕತೆ ನಿಜವಾಗಿಯೂ ರೋಮಾಂಚನಗೊಳಿಸು ವಂಥದು. ಕ್ರಮೇಣ ಚಿನ್ನಬೆಳ್ಳಿಗಳಂತೆ ಅಮೂಲ್ಯವಾಗಿರುವುದೂ ಬೇಡ; ಅಪೂರ್ವ(Scarce)ವಾಗಿರುವಂತೆ ಏರ್ಪಡಿಸಿದರೆ ಸಾಕು ಎಂಬ ಭಾವನೆ ಮೂಡಿ, ಕೇವಲ ಕಾಗದದ ತುಂಡುಗಳು ಹಣವಾಗಿ ಚಲಾವಣೆಗೆ ಬಂದದ್ದಂತೂ ಪತ್ತೇದಾರಿ ಕಾದಂಬರಿಯಂತೆಯೇ ಬಹು ಆಶ್ಚರ್ಯಕರ. ಇದೆಲ್ಲ ಆದುದು ಹೇಗೆ ಎಂಬುದನ್ನು ಅರಿಯಬೇಡವೆ?

ಇದರ ಜತೆಗೆ ಹಣದ ಪ್ರಾಧಾನ್ಯ ಇನ್ನೊಂದು ರೀತಿಯಲ್ಲಿ ಬೆಳೆಯಿತು. ಈ ಸಮಾಜದಲ್ಲಿ ಉತ್ಪತ್ತಿಕಾರ್ಯದಲ್ಲಿ ಪ್ರತಿಯೊಬ್ಬರೂ ಒಂದೊಂದು ಪಾತ್ರ ಧಾರಿಗಳು. ಒಬ್ಬರೇ ತಮಗೆ ಬೇಕಾದ ಎಲ್ಲ ಪದಾರ್ಥಗಳನ್ನೂ ತಯಾರಿಸು ವುದು ಸಾಧ್ಯವಿಲ್ಲ. ಆದ್ದರಿಂದಲೇ ಪದಾರ್ಥಗಳ ವಿನಿಮಯ ಆರಂಭವಾಯಿತು. ಹಣದ ಮಧ್ಯಸ್ಥಿಕೆಯಿಂದ ಈ ವಿನಿಮಯ ಸುಲಭವಾಯಿತು. ಎಲ್ಲ ಪದಾರ್ಥ ಗಳ ವಿನಿಮಯದ ಬೆಲೆಯನ್ನೂ ಹಣದ ಗಜಗೋಲಿನಿಂದ ಅಳೆಯುವುದು ಸುಲಭವಾಯಿತು. ಆದರೆ ಹಣ ಕೇವಲ ಗಜಗೋಲಾಗಿಯೇ ಉಳಿಯಲಿಲ್ಲ. ಸಂಪಾದಿಸಿದ ಸಂಪತ್ತನ್ನು ಹಣಕ್ಕೆ ಪರಿವರ್ತಿಸಿ ಆ ರೂಪದಲ್ಲಿ ಶೇಖರಿಸಿ ಇಡು ವುದೂ ಸಾಧ್ಯವಾಯಿತು. ಈ ಶೇಖರಿಸಿಟ್ಟ ಸಂಪತ್ತಿನ ಸಹಾಯದಿಂದ ಇಂದಿನ ವರಮಾನದ ಪ್ರತಿಫಲವನ್ನು ಮುಂದೆ ಭೋಗಿಸುವುದೂ ಸಾಧ್ಯವಾಯಿತು. ಇದನ್ನು ಇತರರಿಗೆ ಸಾಲ ಕೊಡುವುದೂ ಸಾಧ್ಯವಾಯಿತು. ಹೀಗೆ ಕೇವಲ ಪದಾರ್ಥಗಳ ಮಧ್ಯವರ್ತಿಯಾಗಿ ಮೊದಲಾದ ಹಣ ಗಜಗೋಲಾಗಿ, ಕೊಡು-

ಕೊಳ್ಳುವ ಸಾಧನವಾಗಿ, ಶೇಖರಣೆಯ ಉಪಾಯವಾಗಿ ಸಮಾಜದ ಎಲ್ಲ ಕಡೆಯೂ ವ್ಯಾಪಿಸಿತು.

ಹೀಗೆ ಹಣಕ್ಕೆ ಎರಡು ಮುಖ್ಯ ಗುಣಗಳು ಲಭಿಸಿದುವು: ಪದಾರ್ಥ ವಿನಿಮಯಕ್ಕೆ—ವ್ಯಾಪಾರಕ್ಕೆ—ಒದಗಿದಾಗ ಅದು ಗಾಲಿಯಂತೆ ಉರುಳು ವುದು; ಒಬ್ಬ ತನಗೆ ಬೇಕಾದುದಕ್ಕಿಂತ ಹೆಚ್ಚಾಗಿ ಸಂಪಾದಿಸಿದಾಗ ಅದು ಹಲಗೆಯಂತೆ ಮಲಗುವುದು, ಶೇಖರಣೆಯ ಸಾಧನವಾಗುವುದು. ಆದರೆ ಅದು ಗಜಗೋಲೂ ಹೌದಲ್ಲವೆ? ಎಲ್ಲ ಪದಾರ್ಥಗಳ ಮೌಲ್ಯವನ್ನೂ ಅಳೆಯುವ ಹಣವೆಂಬ ಗಜಗೋಲಿನ ಉದ್ದವೇ ಹೆಚ್ಚುಕಡಮೆಯಾದರೆ ಏನು ಗತಿ? ಎಲ್ಲ ಪದಾರ್ಥಗಳಂತೆಯೇ ಹಣವೂ ಒಂದು ಪದಾರ್ಥವಾದರೆ ಅದರ ಮೌಲ್ಯವೂ ಇತರ ಪದಾರ್ಥಗಳ ಬೆಲೆಯಂತೆಯೇ ಏರುಪೇರಾಗಬೇಕಲ್ಲವೆ? ಹಣದ ಪ್ರಮಾಣ ಹೆಚ್ಚಾದಾಗ ಅಥವಾ ಅದು ಉರುಳದೆ, ನಿಂತ ನೀರಿನಂತೆ ಕೊಳೆಯಲಾರಂಭವಾದಾಗ ಅನರ್ಥವೇ ಆಗಬಹುದಲ್ಲವೆ? ಸಂಪತ್ತಿನ ಸಂಕೇತ ಮಾತ್ರವಾದ ಹಣ ತಾನೇ ಸಂಪತ್ತಿನ ಸ್ಥಾನ ಪಡೆದರೆ ಆಗ ಆಗುವುದು ಅನರ್ಥ ವಲ್ಲವೆ? ಹಣದ ಬೆಲೆಯ ಏರಿಳಿತವೆಂದರೆ ಪದಾರ್ಥಗಳ ಬೆಲೆಗಳಲ್ಲಿ ವ್ಯತ್ಯಾಸ. ಎಲ್ಲರಿಗೂ ಪದಾರ್ಥಗಳ ಬೆಲೆಗಳ ಏರಿಳಿತಗಳ ಬಿಸಿ ತಟ್ಟುವುದಲ್ಲವೆ?

ವಿ.ಸೀ. ಅವರು ತಮ್ಮ ಪುಸ್ತಕದಲ್ಲಿ ಹಣದ ಈ ವ್ಯಾಪಾರಗಳನ್ನೆಲ್ಲ ಮನೋಜ್ಞವಾಗಿ ಬಣ್ಣಿಸಿದ್ದಾರೆ. ಹಣವನ್ನು ಸೃಷ್ಟಿಸುವ ನಾನಾ ಸಂಸ್ಥೆ ಗಳನ್ನೂ, ಹಣದ ಬೆಲೆಯ ಏರಿಳಿತಗಳಿಂದ ನಾನಾ ಹಿತಗಳ ಜನರಿಗೆ ಆಗುವ ಅನುಕೂಲ ಪ್ರತಿಕೂಲಗಳನ್ನೂ ವಿವರಿಸಿದ್ದಾರೆ.

ಇಷ್ಟೇ ಅಲ್ಲ, ಅವರು ಹಣಪ್ರಪಂಚವನ್ನು ಇನ್ನೂ ಕೂಲಂಕಷವಾಗಿ ಪರೀಕ್ಷಿಸಿದ್ದಾರೆ. ಹಣದ ವಹಿವಾಟನ್ನೇ ನಡಸುವ ಬ್ಯಾಂಕುಗಳ ಪ್ರಪಂಚ; ಒಳ-ಹೊರ ವ್ಯಾಪಾರಗಳಲ್ಲಿ ಹಣದ ಪಾತ್ರ, ವಿವಿಧ ಭಂಗಿ; ಕೈಗಾರಿಕೆಗೆ ಹಣ ಒದಗುವ ಬಗೆ; ಸ್ಟಾಕ್ ಎಕ್ಸ್‌ಛೇಂಜ್, ಇತರ ಹಣಸಂಸ್ಥೆಗಳು— ಇವನ್ನೆಲ್ಲ ವಿವರಿಸಿದ್ದಾರೆ.

ಅನೇಕ ಬಗೆಯ ಲೇವಾದೇವಿ ನಡೆಯುತ್ತಿರುವ ಈ ಕಾಲದಲ್ಲಿ, ಅದ್ಭುತ ಪ್ರಮಾಣದಲ್ಲಿ ಹಲವು ಸಂಸ್ಥೆಗಳು ಲಾಭಕ್ಕಾಗಿ ಪೈಪೋಟಿ ನಡಸುತ್ತಿವೆ. ಬ್ಯಾಂಕುಗಳಂತೂ ಬರಿಗೈಯಲ್ಲಿ ಮೊಳ ಹಾಕುವಂತೆ ಅದ್ಭುತ ಪ್ರಮಾಣದಲ್ಲಿ

ಡಿಪಾಜಿಟ್ ಹಣ ಸೃಷ್ಟಿಸುವ ಶಕ್ತಿ ಪಡೆದಿವೆ. ಕೇವಲ ಹತ್ತು ರೂಪಾಯಿ ಇದ್ದರೆ ಸಾಕು; ನೂರು ರೂಪಾಯಿಗಳ ವರೆಗೆ ಸಾಲ ಕೊಡುವ ಉಪಾಯ ಹೊಂದಿವೆ. ಹೀಗೆ ನಾನಾ ಸಂಸ್ಥೆಗಳ ಚಟುವಟಿಕೆಗಳು ದೇಶದ ಜನದ ಕ್ಷೇಮ ಸುಭಿಕ್ಷಗಳ ಸಾಧನವಾಗದೆ ಅಸುಖಕ್ಕೆ ಕಾರಣವಾಗುವ ಅಪಾಯವಿದೆ. ಆದ್ದರಿಂದ ಪರಸ್ಪರ ವಿರೋಧವಾಗಿಯೇ ನಡೆಯಬಹುದಾಗಿರುವ ಉತ್ಪತ್ತಿಯಂತ್ರ, ವ್ಯಾಪಾರಮಂಡಲ, ಧನಮಂಡಲಗಳನ್ನು ಒಂದು ತಾನದಲ್ಲಿ ನಡಸುವ ಜವಾಬ್ದಾರಿ ಹೊಂದಿದ ಸಂಸ್ಥೆಯೊಂದು ಇರಬೇಕಲ್ಲವೆ? ಸರಕಾರವಂತೂ ಈ ಕೆಲಸ ಮಾಡಲಾರದು. ಏತಕ್ಕೆಂದರೆ ಅದು ಜನಜೀವನದ ನಾಡಿಯ ಗತಿಯನ್ನು ಸುಲಭವಾಗಿ ಅರಿಯಲಾರದು. ಇದಕ್ಕೆ ಜನರ ಆರ್ಥಿಕ ಚಟುವಟಿಕೆಗಳನ್ನೇ ಪ್ರತಿನಿಧಿಸುವ ಸಂಸ್ಥೆಯೇ ಇರಬೇಕು. ಅದು ಕೇಂದ್ರ ಬ್ಯಾಂಕು. ಪ್ರತಿಯೊಂದು ದೇಶಕ್ಕೂ ಇಂಥ ಕೇಂದ್ರ ಬ್ಯಾಂಕು ಒಂದು ಇರುತ್ತದೆ. ಈ ಸೆಂಟ್ರಲ್ ಬ್ಯಾಂಕು ಇಂದು ಬೃಹತ್‌ಪ್ರಮಾಣದಲ್ಲಿ ಕೆಲಸ ನಡಸುತ್ತಿದೆ. ಸರಕಾರದ ವಿಶೇಷ ಅಧಿಕಾರ ಆಶ್ರಯ ಬೆಂಬಲಗಳನ್ನು ಪಡೆದ ಈ ಬ್ಯಾಂಕು ಧನಮಂಡಲದ ರಕ್ಷಣೆಯ ಜವಾಬ್ದಾರಿ ಹೊತ್ತಿರುತ್ತದೆ. ಬ್ಯಾಂಕುಗಳಿಗೆ ಬ್ಯಾಂಕೂ, ಸರಕಾರದ ಬ್ಯಾಂಕೂ ಆದ ಸೆಂಟ್ರಲ್ ಬ್ಯಾಂಕು ದೇಶದಲ್ಲಿ ಹಣದ ಚಲಾವಣೆಯ ಜವಾಬ್ದಾರಿಯನ್ನೂ ಆರ್ಥಿಕ ಚಟುವಟಿಕೆಗಳ ಮೇಲೆ ಹತೋಟಿಯನ್ನೂ ಪಡೆದಿರುತ್ತದೆ. ಇದರ ನೀತಿ ಹೇಗೆ ದೇಶದಲ್ಲಿ ಉದ್ಯೋಗ ಮೊದಲುಗೊಂಡು ಎಲ್ಲ ಕ್ಷೇತ್ರಗಳ ಮೇಲೂ ಪರಿಣಾಮಕಾರಿಯಾಗಿರುತ್ತದೆ ಎಂಬುದನ್ನು ಇಂದು ಪ್ರತಿಯೊಬ್ಬರೂ ಅರಿಯಬೇಕು. ಸರ್ವಸೌಖ್ಯದ ರಾಜ್ಯವನ್ನು ಸೃಷ್ಟಿಸಬಯಸುವ ಸರಕಾರ, ಕೇಂದ್ರ ಬ್ಯಾಂಕಿನ ಮೂಲಕವೇ ಇದನ್ನು ಸಾಧಿಸಬೇಕಾಗಿದೆ. ವಿ.ಸೀ. ಅವರು ಈ ಸೆಂಟ್ರಲ್ ಬ್ಯಾಂಕಿನ ದರ್ಪವನ್ನೂ ಪ್ರಭಾವವನ್ನೂ ಅದು ಕಾರ್ಯ ನಡಸುವ ವಿಧಾನವನ್ನೂ ಬಣ್ಣಿಸಿದ್ದಾರೆ.

ಧನಮಂಡಲದಲ್ಲಿ ಸರಕಾರದ ಪಾತ್ರವೂ ಬಹುದೊಡ್ಡದೇ. ಪಾಶ್ಚಿಮಾತ್ಯ ಅರ್ಥಶಾಸ್ತ್ರದ ಜನಕ ಆಡಂ ಸ್ಮಿತ್ ಎಂಬಾತನ ಅಭಿಪ್ರಾಯದ ಪ್ರಕಾರ, ಪ್ರಭುತ್ವವೆಂಬುದು ಕೇವಲ ಪೋಲೀಸ್ ಕೆಲಸ ಮಾಡುವ ಸಂಸ್ಥೆ. ಹೊರಗಿನ ಶತ್ರುಗಳನ್ನು ತಡೆಗಟ್ಟುವುದು; ಒಳನಾಡಿನಲ್ಲಿ ಶಾಂತಿ ಸ್ಥಾಪಿಸುವುದು; ಆಸ್ತಿಗೆ ರಕ್ಷಣೆ ನೀಡುವುದು; ಪ್ರಭುತ್ವ ಇಷ್ಟು ಕೆಲಸ ಮಾಡಿದರೆ ಸಾಕು. ಉಳಿದದ್ದೆಲ್ಲ

ಜನರಿಗೆ ಇರಲಿ. ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿರಲಿ. ಈ ಕೆಲಸ ಮಾಡಲು ಪ್ರಭುತ್ವಕ್ಕೆ ಎಷ್ಟು ಹಣ ಬೇಕೋ ಅಷ್ಟು ತೆರಿಗೆ ಹಾಕಿದರೆ ಸಾಕು. ಇದು ಆಡಂ ಸ್ಮಿತ್‌ನ ವಾದ.

ಆದರೆ ಆಡಂ ಸ್ಮಿತ್‌ನ ಅನಂತರ ಹಲವಾರು ಘಟನೆಗಳು ಸಂಭವಿಸಿವೆ. ಜಗತ್ತು ಬಹುದೂರ ಸಾಗಿದೆ. ಇಂದು ಈ ಅಭಿಪ್ರಾಯಕ್ಕೆ ಮಾನ್ಯತೆಯಿಲ್ಲ. ಇಂದು ಸರಕಾರದ ಜವಾಬ್ದಾರಿ ಬಹು ದೊಡ್ಡದು. ಉತ್ಪತ್ತಿ, ಹಂಚಿಕೆ, ಉದ್ಯೋಗ, ವರಮಾನ—ಎಲ್ಲವೂ ಸಮರಸದಿಂದ ಇರುವಂತೆ ಎಸಗುವುದು ಪ್ರಭುತ್ವದ ಜವಾಬ್ದಾರಿ. ಅಂತೆಯೇ ಪ್ರಭುತ್ವ ಇಂದು ಪ್ರವೇಶಿಸದ ಕ್ಷೇತ್ರವಿಲ್ಲ. ಪ್ರಭುತ್ವ ಇಂದು ಸರ್ವಜನಕ್ಷೇಮದ ಗುರಿಯನ್ನು ಯಾವ ರೀತಿ ಮುಟ್ಟಲು ಯತ್ನಿಸುತ್ತದೆ? ಅದರ ಹಣ ಕಾರ್ಯಗಳ, ಅದರ ಕೈವಾಡದ ರೀತಿ ಏನು?—ಇವನ್ನೂ ಕೂಡ ವಿ.ಸೀ. ಅವರು ಸರಳವಾಗಿ ವಿವೇಚಿಸಿದ್ದಾರೆ.

ಕೊನೆಯ ಅಧ್ಯಾಯ, ಇಂಡಿಯಾ ದೇಶದಲ್ಲಿ ಹಣ ಮತ್ತು ಹಣದ ಪೇಟೆಯ ವಿವರಣೆಗಾಗಿ ಮೀಸಲು. ಭಾರತದ ಪುರಾತನ ಹಾಗೂ ಅರ್ವಾಚೀನ ಧನಸಂಸ್ಥೆಗಳ ವಿವರಣೆ ಇರುವುದಲ್ಲದೆ ಭಾರತದ ಕೇಂದ್ರ ಹಾಗೂ ಪ್ರಾಂತ ಸರಕಾರಗಳ ಧನಕಾರ್ಯಗಳ ಪರಿಚಯವೂ ಇಲ್ಲಿದೆ.

ವಿ.ಸೀ. ಅವರ ಈ ಪುಸ್ತಕ ಪ್ರಕಟವಾದುದು ೧೯೩೭ರಲ್ಲಿ. ಹಣ ಪ್ರಪಂಚದಲ್ಲಿ ಈಚೆಗೆ ಹಲವು ಬದಲಾವಣೆಗಳಾಗಿವೆ. ಆದರೆ ಅರ್ಥಶಾಸ್ತ್ರದ ಪರಿಚಯಮಾಡಿಕೊಳ್ಳಬಯಸುವವರಿಗೆ, ಇಂದಿಗೂ ಈ ಪುಸ್ತಕ ಉಪಯುಕ್ತವಾದುದು. ಅವರು ಈ ಪುಸ್ತಕ ಬರೆಯಲು ಆಧಾರವಾಗಿ ಇಟ್ಟುಕೊಂಡಿರುವ ಕೀನ್ಸ್, ಪಿಗೂ, ಹಾಟ್ರೆ ಮುಂತಾದ ಇಂಗ್ಲಿಷ್ ಅರ್ಥಶಾಸ್ತ್ರಜ್ಞರ ಬರವಣಿಗೆಗಳು ಇಂದಿಗೂ ಮಾನ್ಯವಾಗಿವೆ.

ಈ ಪುಸ್ತಕ ಸುಲಭವಾಗಿ ಅರ್ಥವಾಗುವುದಿಲ್ಲ, ಎಂದು ಕೆಲವರು ಹೇಳುವುದನ್ನು ಕೇಳಿದ್ದೇನೆ. ಆದರೆ ಅದಕ್ಕೆ ಕಾರಣ ಪುಸ್ತಕವಲ್ಲ; ಹಾಗೆ ಹೇಳುವವರು. ಇಂಗ್ಲಿಷ್ ಬಲ್ಲವರಿಗೆ ಹಲವು ಇಂಗ್ಲಿಷ್ ಪದಗಳಿಗೆ ಸಮಾನವಾದ ಕನ್ನಡ ಪದಗಳ ಪರಿಚಯ ಇನ್ನೂ ಇಲ್ಲ. ಇಂಗ್ಲಿಷ್ ಬಾರದವರಿಗೆ ಈ ಪುಸ್ತಕವನ್ನು ಓದಿ ಅರಿಯುವಷ್ಟು ಜ್ಞಾನದ ಮಟ್ಟವಿಲ್ಲವೆಂಬ ಭಾವನೆ. ಇಬ್ಬರೂ ಸ್ವಲ್ಪ ತಾಳ್ಮೆಯಿಂದ ಈ ಪುಸ್ತಕವನ್ನು ಓದಿದರೆ ವಿ.ಸೀ. ಅವರ

ಜ್ಞಾನಭಂಡಾರದ ಪರಿಚಯವಾಗದೆ ಇರುವುದಿಲ್ಲ.

ವಿ.ಸೀ. ಅವರ 'ಹಣಪ್ರಪಂಚ' ಎಲ್ಲ ಕನ್ನಡ ವಿಚಾರಪ್ರಿಯರ ಕೈದೀವಿಗೆ. ಶಾಸ್ತ್ರಗ್ರಂಥಗಳನ್ನು ಕನ್ನಡದಲ್ಲಿ ಶ್ಲಾಘ್ಯರೀತಿಯಲ್ಲಿ ಬರೆಯಬಹುದೆಂಬುದನ್ನು ತೋರಿಸುವ ಒಂದು ಯಶಸ್ವೀ ಪ್ರಯೋಗ; ನಮಗೆ ಅನಿವಾರ್ಯವಾಗಿದ್ದೂ ಅರ್ಥವಾಗದಿರುವ ಹಣದ ವ್ಯವಸ್ಥೆಯ ಸುಲಭ ಪರಿಚಯ; ಸಾಹಿತಿ ವಿ.ಸೀ. ಅವರು ಕನ್ನಡಕ್ಕೆ ನೀಡಿರುವ ಅಮೂಲ್ಯ ಕಾಣಿಕೆ.

ಎಚ್ಕೆಸ್ಕೆ

ಒಂದು ಚಿರಂತನ ಕೃತಿ

ಮಹಾಕವಿ ಕಾಳಿದಾಸನ ನಾಟಕರತ್ನವಾದ 'ಶಾಕುಂತಲ'ದಲ್ಲಿ ನಾಲ್ಕನೇ ಅಂಕ ಬಹು ಮನೋಹರವಾದುದು. ಪೂಜ್ಯರಾದ ಕಣ್ವರು ಶಕುಂತಲೆಯನ್ನು ದುಷ್ಯಂತನ ಬಳಿಗೆ ಕಳುಹಿಸಿಕೊಡುವ ಸನ್ನಿವೇಶವೊಂದು ಅಲ್ಲಿ ಚಿತ್ರಿತವಾಗಿದೆ. ಶಕುಂತಲೆ ಮುದ್ದಿನಿಂದ ಸಾಕಿ ಸಲಹಿದ ಕಣ್ವರನ್ನೂ, ತನ್ನ ಬಾಳಿಗೆ ಬೆಸೆದುಕೊಂಡ ಆ ಆಶ್ರಮ ನಿಸರ್ಗಶ್ರೀಯನ್ನೂ, ಆಪ್ತರಾದ ಸಖಿಯರನ್ನೂ ತೊರೆದು ಕೈಹಿಡಿದ ನಲ್ಲನ ಮನೆಗೆ ಹೊರಟುನಿಂತಿದ್ದಾಳೆ. ಹೆಣ್ಣುಮಗಳೊಬ್ಬಳ ಬಾಳಿನಲ್ಲಿ ಒಂದು ಸಂಧಿಕಾಲ ಇದು. ಪೂಜ್ಯರಾದ ಕಣ್ವರು, ಸಂಯಮಿಗಳಾದ ಋಷಿಗಳಾದ ಅವರೂ ತಮ್ಮ ಸಾಕುಮಗಳಾದ ಶಕುಂತಲೆಯನ್ನು ಕಳುಹಿಸುವ ಮುನ್ನ ತಮ್ಮೊಳಗೆ ಆದ ಕಳವಳವನ್ನು ಕಂಡು 'ಅಳಲಿನಿತಾಗೆ ಕಾಡಮನುಜಂಗೆನಗಂ ಕಡುನೇಹದಿಂದಮಿನ್ನುಳಿದ ಗೃಹಸ್ಥರಾತ್ಮಭವೆಯಂ ಕಳುಪುತ್ತಕಟೆಂತಳಲ್ವರೋ' ಎಂದುಕೊಳ್ಳುತ್ತಾರೆ. ಕಣ್ವರು ಆಶ್ರಮದ ನಿಸರ್ಗದೇವತೆಯನ್ನು ಕುರಿತು 'ಶಕುಂತಲೆ ಪತಿಗೃಹಕ್ಕೆ ತೆರಳಲು ನೀವೆಲ್ಲರೂ ಅನುಜ್ಞೆಯನ್ನು ಕೊಡಿ' ಎಂದು ಕೇಳಿಕೊಳ್ಳುತ್ತಾರೆ. ಶಕುಂತಲೆ ಪತಿಗೃಹಕ್ಕೆ ಹೊರಟುನಿಂತ ಸಮಯದ ಮೂಕಮೌನ ಶೋಕಭಾರವನ್ನು ಕವಿ ಪ್ರಿಯಂವದೆಯ ಬಾಯಿಂದ ವರ್ಣಿಸಿದ್ದಾನೆ :

'ಕುಣಿವುದನುಳಿದುವು ಶಿಖಿಗಳ್
ತೃಣಕಬಳಂ ಜಗುಳೆ ಬಾಯಿನರಿಯದು ಹರಿಣೀ
ಗಣಮುದಿರ್ವೆಲೆಯಿಂ ರಮಣೀ
ಮಣಿ ಕಣ್ಣೀರ್ವಿಡುವ ತೆರದೆ ತೋರ್ಪುವು ಲತೆಗಳ್'

ಸುತ್ತಣ ನಿಸರ್ಗವೇ ಕಂಬನಿಗರೆಯುವಂತಹ ಸನ್ನಿವೇಶ ಅದು. ಶಕುಂತಲೆಯ ಶೋಕವನ್ನು ಕಂಡು ಕಣ್ವರು 'ತಡೆ ಮಗಳೆ ಬರ್ಪ ಕಂಬನಿ ಗಡಣವನ್' ಎಂದು ಸಮಾಧಾನಮಾಡಿ,

'ಪಿರಿಯರ ಸೇವೆಗೆಯ್ ಸವತಿಯರ್ಕಳೊಳಿಷ್ಟಸಯಸ್ಯೆಯಂದದಿಂ
ದಿರು ಪತಿಯೊರ್ಮೆ ಹೇವಗೊಳಿಸಲ್ ಮುಳಿಸಿಂ ಪ್ರತಿಕೂಲೆಯಾಗದಿರ್'

ಪರಿಜನವಂ ಕರಂ ಸಲಹು ಭಾಗ್ಯದೆ ಬಾಗಿರು ಪೆಣ್ಗಳಿಂತಿರಲ್
ಗರತಿಯುರಪ್ಪರಿಂತಿರದರನ್ವಯಕಾಧಿಯುಸುಂಟುಮಾಳ್ಪರ್'

ಎಂದು ಗೃಹಿಣೀಧರ್ಮವನ್ನು ಬೋಧಿಸುತ್ತಾರೆ. ಅನಂತರ ಶಕುಂತಲೆ ಶೋಕ ಭಾರದಿಂದ ತನ್ನ ಪತಿಗೃಹಕ್ಕೆ ತೆರಳುತ್ತಾಳೆ. ಕವಿ ಕಾಳಿದಾಸ ಮಧುರ ವಾದರೂ ವೇದನಾಪೂರ್ಣವಾದ ಈ ಮೃದುವಾದ ಸನ್ನಿವೇಶವನ್ನು ಬಹು ರಮ್ಯ ವಾಗಿ ಚಿತ್ರಿಸಿದ್ದಾನೆ. ಕಾಳಿದಾಸ, ಕಣ್ವರ ಬಾಯಲ್ಲಿ ಹೇಳಿಸಿರುವ ಗೃಹಿಣೀ ಧರ್ಮದ ಸೂತ್ರ ಶತಮಾನಗಳಿಂದಲೂ ಭಾರತೀಯ ಸ್ತ್ರೀಯರ ಬದುಕನ್ನು ತಿದ್ದುತ್ತಿದೆ. ಒಂದು ಜೀವ ತಾನು ಹುಟ್ಟಿ ಬೆಳೆದ ಆವರಣವನ್ನು ತೊರೆದು, ಹೊಸತೊಂದು ಆವರಣಕ್ಕೆ ಒಳಗಾಗುವ ಸನ್ನಿವೇಶದ ದಾರುಣತೆಯನ್ನು ನಾವು ಅಲ್ಲಿ ಕಾಣುತ್ತೇವೆ.

ಕನ್ನಡದ ಮಹಾಕವಿ ಪಂಪನ 'ಆದಿಪುರಾಣ'ದಲ್ಲಿನ ಒಂದು ಸನ್ನಿವೇಶ ಗಮನಾರ್ಹವಾಗಿದೆ. ಶ್ರೀಮತಿ ವಜ್ರಜಂಘರ ಕತೆಯಲ್ಲಿ ವಜ್ರಜಂಘನನ್ನು ಮದುವೆಯಾದ ಶ್ರೀಮತಿ ಗಂಡನ ಮನೆಗೆ ಹೊರಟಿದ್ದಾಳೆ. ತಂದೆಯಾದ ವಜ್ರದಂತ ಮಗಳ–ಅಳಿಯನ ಪ್ರಯಾಣದ ಏರ್ಪಾಡು ಮಾಡಿದ್ದಾನೆ. ಬಂಧು ಬಾಂಧವರೆಲ್ಲರೂ ನೆರೆದು ಈ ನವದಂಪತಿಗಳನ್ನು ಬೀಳ್ಕೊಡಲು ಮನವಲ್ಲದ ಮನದಲ್ಲಿ ನಿಂತಿದ್ದಾರೆ. ಆ ಸನ್ನಿವೇಶದ ಸ್ವಾರಸ್ಯವನ್ನು 'ಹಿತಮಿತ ಮೃದು ವಚನ'ನಾದ ಪಂಪ ನಾಲ್ಕೇ ಸಾಲುಗಳಲ್ಲಿ ಮೂಡಿಸಿದ್ದಾನೆ:

'ಪೊಡೆಮಡುವ, ಅಪ್ಪಿಕೊಳ್ವ, ನೆನೆಯುತ್ತಿರಿಮೆಂಬ, ಸಮಸ್ತವಸ್ತುವಂ
ಕುಡುವ, ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ, ಬುದ್ಧಿವೇಳ್ವ, ಕ
ಯ್ಯಡೆ ನಿಮಗೆಂದೊಡಂಬಡಿಪ, ನಲ್ಲರಗಲ್ಕೆಗೆ ಕಣ್ಣನೀರ್ಗಳಂ
ಮಿಡಿವ, ಬಹುಪ್ರಕಾರ ಜನಸಂಕಟಮೊಪ್ಪಿದುದಾಪ್ರಯಾಣದೊಳ್'

(iv ೫೭)

ಜೀವನದ ಹಾದಿಯಲ್ಲಿ ಬರುವ ಈ ಬಗೆಯ ಬೀಳ್ಕೊಡಿಗೆಯ ಸನ್ನಿವೇಶ ಗಳು ಬಹು ದಾರುಣವಾದುವು. ವಿರಹ–ಸಂಗಮಗಳ ನೋವು ನಲಿವುಗಳೆರಡೂ ವಿಚಿತ್ರ ರೀತಿಯಲ್ಲಿ ಮಿಶ್ರಣಗೊಳ್ಳುವ ಈ ಸನ್ನಿವೇಶದ ಮನೋಹರತೆಯನ್ನು ಮನಗಂಡು ಚಿತ್ರಿಸುವ ಕಲೆ ಹಿರಿಯದು. ಈ ಕರುಣಾರಸದ ಹೊನಲು ಮಹಾ

ಕವಿಗಳ ಕೈಯಲ್ಲಿ ಮಾತ್ರವಲ್ಲ, ನಮ್ಮ ಸಾಮಾನ್ಯ ಜನತೆಯ ಹೃದಯ ಭಾವಗಳನ್ನು ಹಾಡಿನಲ್ಲಿ ಹರಿಸಿರುವ ಅಜ್ಞಾತ ಜಾನಪದ ಕವಿಗಳಲ್ಲಿಯೂ ಈ ಚಿತ್ರಣ ಕಾಣುತ್ತದೆ. ಅವರದೇ ಆದ ಸರಳಸುಂದರ ಶೈಲಿಯಲ್ಲಿ ಈ ಸುಂದರ ಸನ್ನಿವೇಶವನ್ನು ಚಿತ್ರಿಸಿದ್ದಾರೆ. ಗಂಡನ ಮನೆಗೆ ಹೊರಟ ಮಗಳಿಗೆ ತಾಯಿ :

‘ಅತ್ತೇ ಮಾವಗಂಜಿ ಸುತ್ತೇಲು ನೆರೆಗಂಜಿ
ಮತ್ತೆ ಆಳುವಾ ದೊರೆಗಂಜಿ ಮಗಳೇ
ಅತ್ತೆಮನೆಯಾಗೇ ಬಾಳಮ್ಮಾ’

ಎಂದು ಬುದ್ಧಿಹೇಳುತ್ತಾಳೆ. ಮಗಳು ತವರುಮನೆಯ ಹೊಸ್ತಿಲನ್ನು ದಾಟಿ ಹೊರಗೆ ಕಾಲಿಟ್ಟಾಗ ಹಡೆದ ತಾಯಿಗೆ ಆದ ವೇದನೆಯನ್ನು ಜಾನಪದ ಕವಯಿತ್ರಿ ಹೀಗೆ ವರ್ಣಿಸುತ್ತಾಳೆ :

‘ಹುಟ್ಟೇದ ಮನೆಯಿಂದ ಮೆಟ್ಟಿಲನಿಳಿವಾಗ
ಹೊಟ್ಟೆಗೆ ಸಿಡಿಲು ಬಡಿದಂತೆ ತಾಯಿಯ
ಕಣ್ಣಸೀರೆದ್ದು ಹೊಳೆಯಾದೊ !’

ತಾಯಿಯ ಕಣ್ಣೀರು ಹೊನಲಾಯಿತಂತೆ—ಮಗಳು ಹುಟ್ಟಿದ ಮನೆಯ ಮೆಟ್ಟಿಲಿಳಿದಾಗ. ಹೀಗೆ ಈ ವಿರಹ-ಸಂಗಮಗಳ ಮಧುರ ವೇದನೆಯನ್ನು ಮಹಾಕವಿಯಿಂದ ಹಿಡಿದು ಸಾಮಾನ್ಯ ಜಾನಪದ ಕವಿಯವರೆಗೂ ಚಿತ್ರಿಸದವ ರಿಲ್ಲ. ಆ ವಸ್ತುವಿನ ಮಹತ್ವ ಅಂಥದು. ಅದೇ ಒಂದು ವಸ್ತುವನ್ನು ಕನ್ನಡ ಕವಿ ವಿ.ಸೀ.ಯವರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಮನಮುಟ್ಟುವಂತೆ ‘ಮನೆತುಂಬಿಸುವುದು’ ಎಂಬ ಕೃತಿಯಲ್ಲಿ ರೂಪಿಸಿದ್ದಾರೆ. ವಸ್ತು ಒಂದೇ ಆದರೂ, ಅದು ಕವಿಗಳ ಸಾಮರ್ಥ್ಯಕ್ಕೆ ಅನುಸಾರವಾಗಿ ನವನವೀನವಾಗಿ ರೂಪುಗೊಳ್ಳುತ್ತದೆ. ಸಮರ್ಥನಾದ ಕವಿಯ ಕೈಯಲ್ಲಿ ಈ ಚಿರಂತನ ವಸ್ತು ಎಷ್ಟರಮಟ್ಟಿಗೆ ಸಾರ್ಥಕತೆಯನ್ನು ಪಡೆಯಬಲ್ಲುದೆಂಬುದಕ್ಕೆ ವಿ.ಸೀ.ಯವರ ‘ಮನೆತುಂಬಿಸುವುದು’ ಎಂಬ ಕವಿತೆ ಒಂದು ನಿದರ್ಶನ.

ಎಲ್ಲರ ಬಾಳಿನಲ್ಲಿಯೂ ಒಂದಲ್ಲ ಒಂದು ದಿನ ಬರುವ ಈ ಕರುಣಾ ಪೂರ್ಣವಾದ ಸನ್ನಿವೇಶವನ್ನು ಚಿತ್ರಿಸುವ ಈ ಕೃತಿ ಇಂದಲ್ಲ ನಾಳೆಯಲ್ಲ, ಎಂದೆಂದಿಗೂ ಎಲ್ಲರ ಮನವನ್ನೂ ಸೂರೆಗೊಳ್ಳುವಂಥದು. ಮಗಳನ್ನು ಗಂಡನ ಮನೆಗೆ ಕಳುಹಿಸುವಾಗ ತಾಯಿತಂದೆಯರ ಮನದಲ್ಲಿ ಆಗುವ ವೇದನೆ, ತಾಯಿ

ತಂದೆಯರ ಬುದ್ಧಿವಾದ, ತಂದೆ ಮಗಳ ಪರವಾಗಿ ವರನ ಕಡೆಯವರಿಗೆ ಹೇಳುವ ಮಾತು— ಈ ಒಂದೊಂದು ಅಂಶವೂ ಏಳುಸುತ್ತಿನ ಮಲ್ಲಿಗೆಯ ದಳದಳದಂತೆ ನವಿರಾಗಿವೆ.

‘ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮುಡಿಲೊಳಗಿಡಲು ತಂದಿರುವೆವು.
ಕೊಳ್ಳಿರೀ ಮಗುವನ್ನು ಎಮ್ಮ ಮನೆಬೆಳಕನ್ನು
ನಿಮ್ಮ ಮನೆಯನು ತುಂಬಲೊಪ್ಪಿಸುವೆವು.’

ಎಂದು ಮೊದಲಾಗುತ್ತದೆ ಕವನ. ಈ ಕವನಕ್ಕೆ ವ್ಯಾಖ್ಯಾನವೇ ಅನವಶ್ಯಕ. ಮುಟ್ಟಿದರೆಲ್ಲಿ ಮಾಸುವುದೋ ಎಂಬಂತೆ ಥಳಥಳಿಸುವ ಇಬ್ಬನಿಯಂತೆ ಇದರ ಚೆಲುವು. ವಿ.ಸೀ.ಯವರ ಕಾವ್ಯದ ವಿಶಿಷ್ಟತೆಯೇ ಅದು. ಸರಳ, ಸುಂದರ. ಅಬ್ಬರ, ಆಡಂಬರಗಳಿಲ್ಲದ ಮೃದುಪದಬಂಧ. ಅವರು ತಮ್ಮ ಕವನಕ್ಕೆ ತಕ್ಕ ರಾಗವನ್ನು ಹಾಕುವುದು ಇನ್ನೂ ಸೊಗಸು. ಅವರ ಬಹುಪಾಲು ಕವನಗಳು ರಾಗಸಹಿತವಾಗಿಯೇ ಹುಟ್ಟಿಬಂದವು. ಈ ಸಂಗೀತಗುಣ ಓದುಗನ ದೃಷ್ಟಿಯಿಂದ ಹಲವೆಡೆ ಅನುಕೂಲವಾಗಿಯೂ, ಅನಾನುಕೂಲವಾಗಿಯೂ ಪರಿಣಮಿಸಿರಬಹುದು. ಆದರೆ ಈ ಒಂದು ಕವನದಲ್ಲಿ ಸಂಗೀತ ಸಾಹಿತ್ಯಗಳು ಎರಡೂ ಹಾಲು–ಸಕ್ಕರೆ ಬೆರೆತಂತೆ ಸಮರಸವಾಗಿ ಬೆರೆತಿವೆ.

ಕವನದ ಹೆಸರು ‘ಮನೆತುಂಬಿಸುವುದು’. ತವರುಮನೆಯ ಈ ಬೆಳಕಿನ ಬಳ್ಳಿಯಾದ ಮಗಳು ಗಂಡನ ಮನೆಯನ್ನು ತನ್ನ ವ್ಯಕ್ತಿತ್ವದಿಂದ ತುಂಬಿಸುತ್ತಾಳೆ. ಜೀವನವೇ ಅಷ್ಟು. ಒಬ್ಬರ ಬಾಳನ್ನು ಮತ್ತೊಬ್ಬರು ತುಂಬಿದಾಗಲೇ ಬಾಳು ಸಾಫಲ್ಯವನ್ನು ಪಡೆಯುತ್ತದೆ. ಒಂದು ಮನೆಯಿಂದ ಮತ್ತೊಂದು ಮನೆಯನ್ನು ತುಂಬುವ ಹೆಣ್ಣುಮಕ್ಕಳನ್ನು ಕುರಿತು ‘ಗೃಹದೀಪ್ತಯಃ’ (ಗೃಹದ ದೀಪ್ತಿಸ್ವರೂಪರು) ಎಂದು ಮನುಋಷಿಗಳು ಹೇಳಿದ್ದಾರೆ.

ಮೊದಲ ಪದ್ಯದ ಸೊಗಸನ್ನು ಪರಿಶೀಲಿಸಿ. ತಂದೆ ತನ್ನ ಮಗಳ ಬಗ್ಗೆ ಆಡಿರುವ ಮಾತುಗಳಲ್ಲಿ ವಾತ್ಸಲ್ಯವೇ ಹರಿದಿದೆ. ಹೂವು–ಮಗು–ಬೆಳಕು ಎಂಬ ಮಾತುಗಳಲ್ಲಿ ಎಂತಹ ಧ್ವನಿ ಮಿಡಿಯುತ್ತಿದೆ! ಹೆಣ್ಣುಮಗಳು ತಾಯಿ ತಂದೆಯರ ಮನೆಯಂಗಳದಲ್ಲಿ ಬೆಳೆದ ಹೂವು. ಸಂಸಾರವೃಕ್ಷಕ್ಕೆ ಮಕ್ಕಳೇ ಹೂವು. ಹೂವಿನಿಂದ ಗಿಡದ ಬಾಳು ಸಾರ್ಥಕತೆಯನ್ನು ಪಡೆಯುವಂತೆ

ದಾಂಪತ್ಯಜೀವನದ ಸಾಫಲ್ಯ ಪುತ್ರಸಂತಾನದಲ್ಲಿ. ತಂದೆ ತನ್ನ ಮಗಳನ್ನು 'ಹೂವು' ಎನ್ನುವುದು ಉಚಿತವಾಗಿದೆ. ಮುಂದಿನ ಪದ್ಯದಲ್ಲಿ 'ಕಠಿಣಗಳ ನೆಳಲ್ ಸುಳಿಯಲದುರಿ ಬಾಡುವಳು ಹಿರಿಮಂಜು ಬಳಲಿಸಿದ ಹೂವಿನಂತೆ' ಎಂದು ಮಗಳ ಕೋಮಲ ಗುಣವನ್ನು ಹೇಳುವಲ್ಲಿ ಈ ಭಾವಕ್ಕೆ ಇನ್ನೂ ಪುಷ್ಟಿ ದೊರೆತಿದೆ. ಎರಡನೆಯದಾಗಿ, 'ಕೊಳ್ಳಿರೀ ಮಗುವನ್ನು' ಎಂಬ ಮಾತಿನಲ್ಲಿ 'ಮಗು' ಎಂಬ ಪದ ತುಂಬ ಅರ್ಥಪೂರ್ಣವಾಗಿದೆ. ಮಗಳು ಬೆಳೆದು ದೊಡ್ಡವಳಾಗಿ ಗಂಡನ ಮನೆಗೆ ಹೊರಟುನಿಂತಿದ್ದರೂ ಆಕೆ ತಾಯಿ ತಂದೆಯರ ಪಾಲಿಗೆ ಇಂದಿಗೂ 'ಮಗು', ಮುಂದೆಯೂ ಮಗು. ಮೂರನೆಯ ದಾಗಿ ಅದು 'ಬೆಳಕು'. ಈ ಮನೆಯ ಬೆಳಕು ಗಂಡನ ಮನೆಯನ್ನು ತುಂಬಲು ಹೊರಟಿದೆ. ತಾಯಿತಂದೆಯರು ತಮ್ಮ ಮನೆಯ ಬೆಳಕನ್ನು, ಮತ್ತೊಬ್ಬರ ಮನೆಯನ್ನು ತುಂಬಲು ಒಪ್ಪಿಸುತ್ತಾರೆ. ಈ ಒಂದು ಸುಂದರಭಾವ ಭಾರತೀಯ ಸಂಸ್ಕೃತಿ 'ಮದುವೆ' ಎಂಬುದನ್ನು ಯಾವ ದೃಷ್ಟಿಯಿಂದ ನೋಡುತ್ತದೆ— ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಮುಂದಿನ ಪದ್ಯಗಳಲ್ಲಿ ತಂದೆ, ಮಗಳನ್ನು ಕರೆದುಕೊಂಡು ಹೋಗುವ ಮನೆಯವರನ್ನು ಕುರಿತು ತಮ್ಮ ಮಗಳ ಗುಣಗಳನ್ನು ಹೇಳುತ್ತಾರೆ. ಈ ಮುಗ್ಧೆ 'ಮರೆ ಮೋಸ ಕೊಂಕುಗಳನರಿಯ'ದ, 'ಇನಿಸವಿಶ್ವಾಸವನು ಕಂಡ ರಿಯ'ದ, 'ಕಷ್ಟಗಳ ಸೈಸದೆಯೆ ಕಾಣದೆಯೆ ಬೆಳೆದ' ಸುಕುಮಾರಿ. ಇವಳು 'ಕಠಿಣಗಳ ನೆಳಲ್ ಸುಳಿಯಲದುರಿ ಬಾಡುವಳು.' ಮಗಳು ಹೀಗೆ ಬೆಳೆದ ವಳು ಎಂದರೆ ಬರುವ ಕಷ್ಟಗಳನ್ನು ಸಹಿಸಲು ಸಿದ್ಧವಾಗಿಲ್ಲ ಎಂದಲ್ಲ. ಇನ್ನು ಮುಂದೆ ಆಕೆ:

> 'ಸುಖದಲ್ಲಿ ದುಃಖದಲಿ ಎಲ್ಲ ದೆಸೆಯಿರವಿನಲಿ
> ನಿಮ್ಮ ಪಾಲಿಗೆ ನಿಲುವ ಕುವರಿಯಿವಳು.'

ಅಷ್ಟೇ ಅಲ್ಲ 'ಎಂದೆಂದು ಅವಳ ನಡೆ ನಿಮ್ಮ ಪರವಾಗಿ' ಎಂದು ಹೇಳುವಲ್ಲಿ ಗಂಡನ ಕಡೆಯವರಿಗೆ ಆಶ್ವಾಸನೆ ಮಾತ್ರವಲ್ಲ, ಮಗಳು ಇನ್ನುಮುಂದೆ ಬಾಳ ಬೇಕಾದ ರೀತಿಯ ನಿರ್ದೇಶವೂ ಆಗಿದೆ.

ನಮ್ಮ ಬಾಳಿನಲ್ಲಿ ಮದುವೆಗಿಂತಲೂ ಹಿರಿಯ ಪವಾಡ ಮತ್ತೊಂದಿಲ್ಲ ಎನ್ನಿಸುತ್ತದೆ. ಎಲ್ಲೋ ಬೆಳೆದ ಹೆಣ್ಣು ಎಲ್ಲೋ ಬೆಳೆದ ಗಂಡೊಂದನ್ನು

ಕೈಹಿಡಿದು, ಆಡಿ ಬೆಳೆದ ಅಂಗಳವನ್ನು ತೊರೆದು ಇದ್ದಕ್ಕಿದ್ದಂತೆಯೇ ಹೊರಡ ಬೇಕಾದ ಪ್ರಸಂಗ ನಿಜವಾಗಿಯೂ ಕರುಣಾಪೂರ್ಣವಾದುದು. ಅವಳನ್ನು ಒಪ್ಪಿಸುವ ತಂದೆ :

‘ ಎಮ್ಮ ಕುಲಮನೆಗಳಿಗೆ ಹೊರಗಾಗಿ ಬಂದಿಹಳು
ನಿಮ್ಮ ಕುಲವನು ಬೆಳಗಬಂದಿರುವಳು’

ಎಂದು ಹೇಳಿ,

‘ ಹೆತ್ತವರ ಮನೆಗಿಂದು ಹೊರಗಾದೆ ನೀ ಮಗಳೆ,
ಈ ಮನೆಯೆ ಈ ಇವರೆ ನಿನ್ನವರು ಮುಂದೆ ;
ಇವರೆ ತಾಯ್ಗಳು ಸಖರು ಭಾಗ್ಯವನು ಬೆಳೆಸುವರು ;
ಇವರ ದೇವರೆ ನಿನ್ನ ದೇವರುಗಳು ’

ಎಂದು ಮಗಳಿಗೆ ದಾರುಣವಾದ ಸತ್ಯವನ್ನು ತಿಳಿಯಪಡಿಸುತ್ತಾನೆ. ಹೆಣ್ಣೊಂದು ‘ ಹೆತ್ತವರ ಮನೆಗೆ ಹೊರಗಾ ’ಗಿ ಹೊರಟಾಗ, ಅದು ಎಂತಹ ತ್ಯಾಗವನ್ನು ಮಾಡಬೇಕು! ಮುಂದಿನ ಭೋಗಕ್ಕೆ ಮುನ್ನುಡಿಯಾದ ಈ ತ್ಯಾಗ—ತನ್ನನ್ನೂ ತನ್ನ ತಂದೆತಾಯಿಯರನ್ನೂ—ತನ್ನ ಹುಟ್ಟುಮನೆಯ ದೈವವನ್ನೂ ತ್ಯಾಗಮಾಡುವುದರಲ್ಲಿ ಪೂರ್ಣಗೊಳ್ಳುತ್ತದೆ. ಹೆಣ್ಣು ತ್ಯಾಗದ ಮೂರ್ತಿ ಎಂದು ಹೇಳುವ ಮಾತಿಗೆ ಇದಕ್ಕಿಂತಲೂ ಹಿರಿಯ ನಿದರ್ಶನ ಬೇಕೆ?

ತಂದೆತಾಯಿಯರು ಅಳಿಯನನ್ನು ಮತ್ತು ಅವರ ಕಡೆಯವರನ್ನು ಕುರಿತು :

‘ ನಿನ್ನ ಮಡದಿಯ ಕೊಂಡು ಸುಖವಾಗಿರೌ ಮಗುವೆ
ನಿಮ್ಮ ಸೊಸೆ ಸೋದರಿಯು ಕೊಳ್ಳಿರಿವಳ ’

ಎಂದು ಹೇಳುವಲ್ಲಿ ಅವರ ವಾತ್ಸಲ್ಯಪೂರ್ಣವಾದ ಆಶಯ ಕೈಗೂಡಿದ ನೆಮ್ಮದಿಯ ನಿಟ್ಟುಸಿರೊಂದು ಕೇಳುತ್ತದೆ. ಕಡೆಗೆ ಮಗಳು ಶೋಕಪೂರ್ಣವಾಗಿ, ದೀನವಾಗಿ, ತನ್ನ ತಾಯಿತಂದೆಯರ ಕಡೆ ನೋಡುವಾಗ, ತಂದೆ ಮಗಳನ್ನು ಕುರಿತು :

‘ ನಿಲ್ಲು ಕಣ್ಣೊರಸಿಕೊಳು, ನಿಲ್ಲು ತಾಯ್, ಹೋಗುವೆವು ;
ತಾಯ್ವಿರಾ ತಂದೆಯಿರ, ಕೊಳ್ಳಿರಿವಳ ;
ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ
ತುಂಬಿದಾಯುಷ್ಯದಲಿ ಬಾಳಿ ಬದುಕು ’

ಎಂದು ಹೇಳುವಲ್ಲಿ ಕಡೆಯಾಗುವ ಈ ಕವನ ಕರುಣಾರಸದ ಮಡುವಿನಂತಿದೆ. ಈ ಕಡೆಯ ಪದ್ಯದ ಸಾಲುಗಳಲ್ಲಿ ಮೂಡಿರುವ ಚಿತ್ರ ಅದ್ಭುತ. ಕಣ್ಣೀರು ಸುರಿಸುತ್ತ ಮೂಕಳಾಗಿ ನಿಂತಿರುವ ಹೆಣ್ಣುಮಗಳು, ನಿಷ್ಠುರ ನಿಯಮಕ್ಕೆ ತಲೆಬಾಗಿ ನಿಂತ ತಂದೆಯ ವಾತ್ಸಲ್ಯಪೂರ್ಣವಾದ ವೇದನೆ, ಜೇಡಿಕೆ, ಆದರೂ ಆ ಸನ್ನಿವೇಶದಲ್ಲಿ 'ಎರಡು ಮನೆಗಳ ಹೆಸರು ಖ್ಯಾತಿಗಳು ಉಳಿವಂತೆ ತುಂಬಿದಾಯುಷ್ಯದಲಿ ಬಾಳಿ ಬದುಕು' ಎಂದು ಹೇಳುವಲ್ಲಿ ಎಚ್ಚರಿಕೆಯ ರೂಪದ ಆಶೀರ್ವಾದ—ಈ ಎಲ್ಲವೂ ಈ ಕವನ ರಸದ ಮಡುವಾಗುವಂತೆ ಮಾಡಿವೆ.

ವಿ.ಸೀ.ಯವರು ಈ ಕವನಕ್ಕೆ ಆರಿಸಿಕೊಂಡಿರುವ ವಸ್ತು ಜನಜೀವನದ ಒಂದು ಕರುಣಾರಸಪೂರ್ಣ ಸನ್ನಿವೇಶ. ಜಗತ್ತು ಹುಟ್ಟಿ ಇಷ್ಟು ವರ್ಷಗಳಾದರೂ ಎಲ್ಲ ತಾಯಿತಂದೆಯರೂ ಒಂದಲ್ಲ ಒಂದು ದಿನ ತಮ್ಮ ಬಾಳಿನಲ್ಲಿ ಎದುರುಗೊಂಡ ಮತ್ತು ಎದುರುಗೊಳ್ಳಬೇಕಾದ ಚಿರಂತನ ಭಾವ ಈ ಕವನದ ಮೂಲ. ಈ ಚಿರಂತನ ಭಾವದ ಮೂರ್ತಿಯಾದ ಈ ಕವನ ಚಿರಂತನಗುಣ ಉಳ್ಳುದೆನ್ನುವ ವಿಷಯದಲ್ಲಿ ಸಂದೇಹವೇ ಇಲ್ಲ. ಭಾರತೀಯ ವಿವಾಹ ಮತ್ತು ದಾಂಪತ್ಯಜೀವನದ ಆದರ್ಶಕ್ಕೆ ಹಿಡಿದ ಒಂದು ರನ್ನಗನ್ನಡಿಯಂತೆ ಈ ಕವನ ರಾಜಿಸುತ್ತದೆ.

ಜಿ. ಎಸ್. ಶಿವರುದ್ರಪ್ಪ

ಪಂಪಾಯಾತ್ರೆ

'....in green ruins, in the desolate walls
Of antique palaces where man hath been,
Though the dun fox or wild hyaena calls,
And owls, that flit continually between,
Shriek to the echo, and the low winds moan,
There the true silence is, self-conscious
and alone!'

ವಿ.ಸೀ. ಅವರ 'ಪಂಪಾಯಾತ್ರೆ'ಯನ್ನು ಓದಿದಾಗಲೆಲ್ಲ ನನಗೆ ಥಾಮಸ್‌ಹುಡ್ ಕವಿಯ ಮೇಲಿನ ಸಾಲುಗಳು ನೆನಪಿಗೆ ಬರುತ್ತವೆ. ಚಳಿಯಿಂದ ಕೋಡುವ ಕಲ್ಲುಗೋರಿಯ ಅಡಿಯಲ್ಲಿ, ಮಹಾಸಾಗರಗಳ ಗಭೀರ ಗರ್ಭದಲ್ಲಿ, ಜೀವದ ಸುಳಿವನ್ನೂ ಕಾಣದ ಮರಳುಗಾಡಿನ ಮಧ್ಯಪ್ರದೇಶದಲ್ಲಿ, ನೀರವತೆ ಮೌನವಾಗಿ ಮಲಗಿದೆ. ಸದ್ದುಮಾಡದೆ ಹೆಜ್ಜೆಯ ಮೇಲೆ ಹೆಜ್ಜೆಯಿಟ್ಟು ನಡೆಯುವ ಪ್ರಾಣಿಗಳು ಕೂಡಾ ಅಲ್ಲಿ ಸುಳಿಯದಿವೆ. ಮೇಲೆ ತೇಲುವ ಮೋಡಗಳಾಗಲಿ ಕೆಳಗೆ ಓಡುವ ನೆರಳುಗಳಾಗಲಿ ಅಲ್ಲಿ ಒಮ್ಮೆಯಾದರೂ ಬಾಯಿಬಿಟ್ಟುದಿಲ್ಲ. ಅದೊಂದು ಬಗೆಯ ಸೋಮಾರಿತನದ ಪಾನಪ್ರಮತ್ತವಾದಂತಿರುವ ನೀರವತೆ....ಆದರೆ, ಒಂದಾನೊಂದು ಕಾಲದಲ್ಲಿ ಮಾನವರು ನಕ್ಕು ನಲಿದು ಬಾಳಿದ ಹಸಿರು ಹಾಳಿನಲ್ಲಿ, ಪ್ರಾಚೀನ ಅರಮನೆಗಳ ಅವಶೇಷವಾಗಿ ನಿಂತ ಮುರುಕು ಗೋಡೆಗಳಲ್ಲಿ, ಆಗೊಮ್ಮೆ ಈಗೊಮ್ಮೆ ಕಾಡುಪ್ರಾಣಿಗಳು ಕಿರುಚಿದರೂ, ಗೂಬೆಗಳ ಗೂಂಕಾರ ಮಾರ್ದನಿಗೊಟ್ಟು ಹೊಳಲಿಟ್ಟರೂ, ಮೆಲುಗಾಳಿ ನರಳಿದರೂ—ಅಲ್ಲಿ ನಿಜವಾದ ನೀರವತೆಯಿದೆ; ತನ್ನ ಇರುವಿಕೆಯ ಅರಿವುಳ್ಳ ಏಕಾಂಗಿಯಾದ ನೀರವತೆ!

ಇಂತಹ ಸ್ವಯಂಪ್ರಜ್ಞೆಯುಳ್ಳ ಭಯಂಕರ ನೀರವತೆಯನ್ನೆದುರಿಸಿ ಎದೆಯನ್ನು ತೆರೆದಿಟ್ಟು ನಿಂತಾಗ ಮನುಷ್ಯನ ಮನಸ್ಸು ಏನಾದೀತು? ಪ್ರಾಚೀನ ವೈಭವಗಳ ನೆನಪು ಎಡಬಿಡದೆ ಒಂದೇ ಸಮನಾಗಿ ತೂರಿಬರುತ್ತಿರುವಾಗ,

ಕ್ರೂರ ವಾಸ್ತವತೆ ಅದಕ್ಕೆ ತದ್ವಿರುದ್ಧವಾದ ಮತ್ತೊಂದು ಬಗೆಯನ್ನೆ ಅಲ್ಲಿ ಬತ್ತಲೆಯಾಗಿ ತೆರೆದು ನಿಲ್ಲಿಸಿರುವಾಗ, ಮನಸ್ಸು ಈ ಅದ್ಭುತ ವಿಸ್ಮಯಕ್ಕೆ ಬೆರಗಾಗಿ ತೇಂಕಾಡುತ್ತಿರಲು, ಅರಿವು ಭೂತವರ್ತಮಾನಗಳ ಈ ಎರಡು ವಿರುದ್ಧ ಸ್ಥಿತಿಯ ನಡುವೆ ಸೇತುರೂಪವಾಗಿ ನಿಂತು ಎರಡನ್ನೂ ತಬ್ಬಿಕೊಳ್ಳಲು ಯತ್ನಿಸಿ ವಿಫಲವಾಗಿ ವಿಮುಖವಾದಾಗ, ಎದೆಯ ಹೊಯ್ದಾಟ, ತಳಮಳ ಹೇಗಿದ್ದಿರಬೇಕು? ಸೃಷ್ಟಿಯನ್ನು ಕುರಿತಾಗಿ ವಿಲಕ್ಷಣವಾದ ಸ್ಪಷ್ಟಪ್ರಜ್ಞೆಯುಳ್ಳ ಯೋಗಿಯೊಬ್ಬ ಎದೆಗುಂದಿಯಿಲ್ಲದೆ ಅದನ್ನೆದುರಿಸಿ ನಿಂತಾನು. ಅರಿವು ವಿಮುಖವಾದರೂ ಅರಿವಿನ ಸೂಕ್ಷ್ಮರೂಪವಾದ ಪ್ರತಿಭೆಯ ಸೆರವನ್ನು ಪಡೆದ ಕವಿ, ತರ್ಕಶೀಲಬುದ್ಧಿಯವನಾಗದೆ, ಉಳಿದವರಂತೆಯೇ ಈ ವಿಸ್ಮಯಾದ್ಭುತವನ್ನು ಅನುಭವಿಸಿಯೂ, ಆ ಅನುಭವ ಪ್ರಜ್ಞಾಶೂನ್ಯವಾಗದಂತೆ ನೋಡಿಕೊಂಡಾನು. 'ಪಂಪಾಯಾತ್ರೆ'ಯನ್ನು ಓದಿದಾಗ ಇಂತಹ ಕವಿಚೇತನದ ಪರಿಚಯ ನಮಗಾಗುತ್ತದೆ.

ಗ್ರಂಥದ ಆರಂಭದಲ್ಲಿ ಪೀಠಿಕಾರೂಪವಾಗಿ, 'ಪಂಪಾಯಾತ್ರೆ'ಗೆಂದು ಬಂದಿಳಿದ ರಸಿಕಪ್ರವಾಸಿಗಳೈವರ ಚಿತ್ರ ಬರುತ್ತದೆ. ಸ್ವಲ್ಪಹೊತ್ತಿನಲ್ಲೆ ಅವರೆಲ್ಲರೂ ನಮಗೆ ತೀರಾ ಪರಿಚಿತರಾಗಿಬಿಡುತ್ತಾರೆ. ಆಚಾರನಿಷ್ಠರೂ ಮೃದುಹೃದಯರೂ ಆದ ಯಜಮಾನರು, 'ನಯದ ಪ್ರೇಮದ ಮಾನವೀಮೂರ್ತಿ' ಯಾದ ವೆಂಕಟೇಶಯ್ಯನವರು, ರಸಿಕರೂ ಸ್ನೇಹಜೀವಿಗಳೂ ಆದ ಮೂರ್ತಿಯವರು ಮತ್ತು ಶ್ರೀಕಂಠಯ್ಯನವರು, ಐವರಲ್ಲಿ 'ಚಿರಂಜೀವಿ'ಗಳಾದ ಸೂಕ್ಷ್ಮಹೃದಯದ ಕವಿಗಳು—ಇವರೆಲ್ಲರ ಸಂಗಡ ನಾವೂ ಇದ್ದಿರುವಂತೆ, ಅವರ ವಾತ್ಸಲ್ಯ ಮಮತೆಗಳಿಗೆ ನಿರ್ವ್ಯಾಜ ಸ್ನೇಹಕ್ಕೆ ಪಾತ್ರರಾಗಿರುವಂತೆ, ಆ ರಸಿಕಗೋಷ್ಠಿಯಲ್ಲಿ ಕುಲುಕುಲು ಅರಳುವ ಮೃದುಹಾಸ್ಯದಿಂದ ಪುನೀತರಾದೆವೆಂಬಂತೆ ನಮಗೆ ಭಾಸವಾಗುತ್ತದೆ. ಶತಮಾನಗಳ ಹಿಂದೆ ಮಾನವಪ್ರೇಮದ ಪ್ರತೀಕವಾಗಿ ತಲೆಯೆತ್ತಿನಿಂತ ಮಹಾಸಾಮ್ರಾಜ್ಯದ ವೈಭವಗಳನ್ನೂ, ಮಾನವದ್ವೇಷದ ಪರಿಣಾಮವಾಗಿ ಅದಕ್ಕೊದಗಿಬಂದ ದುರಂತವನ್ನೂ ಕಣ್ಣಾರೆ ಕಂಡು ಅನುಭವಿಸುತ್ತ ಬಂದ ಪುರಾತನ ಚೇತನಗಳಿವು; ಅನಾದಿಯಾದ ಅನುಭವ ಪರಂಪರೆಗಳಿಂದ ಮಾನವಕುಲದ ರತ್ನಮೌಲ್ಯವನ್ನು ಕಂಡುಕೊಂಡವರು; ಅದಕ್ಕೇ ಈ ಬಗೆಯಾದ ಮಮತೆ, ಸ್ನೇಹ, ಕರುಣೆಗಳು ಈ ಚೇತನಗಳ

ಸುತ್ತಲೂ ಒಂದು ಸಾತ್ವಿಕಪ್ರಭೆಯನ್ನು ಚೆಲ್ಲಿವೆ—ಎಂದು ನಮಗೆನ್ನಿಸುತ್ತದೆ. ಈ ಬಗೆಯ ವಿಶಿಷ್ಟವಾದ ಪ್ರವಾಸಗೋಷ್ಠಿಯ ಪರಿಚಯ ನಮಗೆ ಯಾತ್ರೆಯಲ್ಲಿ ಕಣ್ಣಾಗಿ ಬರುತ್ತದೆ. ಈ ಕಣ್ಣಿನ ಮೂಲಕವಾಗಿಯೆ ನಾವು ಯಾತ್ರೆಯನ್ನು ಆಗುಗೊಳಿಸುತ್ತೇವೆ.

ಈ ಕಣ್ಣಿನಲ್ಲಿ ' ಪಂಪಾಪತಿಯ ಪುಣ್ಯಕ್ಷೇತ್ರ ' ಕಾಣಿಸಿದ ಬಗೆ ಎರಡನೆಯ ಭಾಗದಲ್ಲಿ ಬರುತ್ತದೆ.

' ವಿರೂಪಾಕ್ಷ ದೇವಸ್ಥಾನದ ಮುಂದೆ ಸುಮಾರು ಇನ್ನೂರು ಮುನ್ನೂರು ಗಜಗಳ ದೂರ ಅಗಲವಾದ ತೇರುಬೀದಿ; ಇಕ್ಕಡೆಯೂ ಕಲ್ಲುಮಂಟಪಗಳು; ರಸ್ತೆಯ ಕೊನೆಯಲ್ಲಿ ನಮ್ಮ ದಾರಿಯ ಎಡಗಡೆ·ಬೃಹದಾಕಾರದ ಕಲ್ಲುಬಸವನ ವಿಗ್ರಹ. ಆಗಿನ ಕಾಲದವರಿಗೆ ಮಾಡುವುದಕ್ಕೆ ಬೇರೆ ಏನೂ ಕೆಲಸವಿರಲಿಲ್ಲವೆಂದು ಕಾಣುತ್ತದೆ; ಎಲ್ಲಿ ದೊಡ್ಡ ಬಂಡೆಯೊಂದು ಸಿಕ್ಕಿದರೆ ಅಲ್ಲಿ ಬಸವ, ಗಣೇಶ, ಹನುಮಂತ, ನರಸಿಂಹ, ಈ ವಿಗ್ರಹಗಳನ್ನು ಕೆತ್ತುತ್ತಿದ್ದರು.... ಹದಿನೈದು ಇಪ್ಪತ್ತು ಅಡಿ ಎತ್ತರದ ನರಸಿಂಹಸ್ವಾಮಿ! ಹದಿನೈದು ಅಡಿಯ ಗಣೇಶ!! ಅವರಿಗೆ ಹುಚ್ಚು ಹಿಡಿದಿರಬೇಕು!.... ಒಂದು ಸಾಸವೆಕಾಳಿನ ಗಣೇಶವಂತೆ; ಇನ್ನೊಂದು ಕಡಲೆಕಾಳಿನ ಗಣೇಶವಂತೆ; ಹೀಗೆಯೇ ಹಲಸಿನಕಾಯಿ ಗಣೇಶನೆಂದೂ ಬೂದುಗುಂಬಳಕಾಯಿ ಗಣೇಶನೆಂದೂ ಒಂದನ್ನು ಮಾಡಿದ್ದರೆ ಅದು ಹೇಗಿರುತ್ತಿದ್ದಿತೋ! '—ಎಂತಹ ವಿಲಕ್ಷಣವಾದ ಮೃದು ಹಾಸ್ಯ! ತೀರಿಕೊಂಡ ಗೆಳೆಯನೊಬ್ಬನನ್ನು ಕುರಿತು ಮೆಚ್ಚುಗೆಗಾಗಿ ಚೇಷ್ಟೆಮಾಡಿ ನೋವಿನಿಂದ ತುಟಿ ಅರಳಿಸಿದಂತೆ!

ಮುಂದಿನ ಹಾದಿಯ ವರ್ಣನೆಯನ್ನು ವಿ.ಸೀ.ಯವರ ಮಾತಿನಲ್ಲೇ ಕೇಳಬೇಕು: ' ನೂರಾರು ವರುಷಗಳಿಂದ ಸುಮಾರು ಒಂದೇ ಸಮನಾಗಿ ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡು ಪ್ರಪಂಚದ ಕಷ್ಟಸುಖಗಳನ್ನೂ ಮಂಗಳಾಮಂಗಳಗಳನ್ನೂ ಅವಿಚಲಿತ ದೃಷ್ಟಿಯಿಂದ ನೋಡುತ್ತ ದೃಢವಾಗಿ ಪಟುವಾಗಿ ನಿಂತಿರುವ ಪರ್ವತಗಳು; ಪರ್ವತಶಿಖರಗಳ ಮೇಲೆ ಆಕಾಶದ ಬಿಳಿ ಮೋಡಗಳಿಂದ ಸುತ್ತುವರಿಯಲ್ಪಟ್ಟು, ಸೇವೆಗೊಳ್ಳುತ್ತ ಗಿಡಬಳ್ಳಿಗಳೊಡನೆ ಸರಸವಾಡುತ್ತ ಉಚ್ಚಪೀಠಗಳ ಮೇಲಿರುವ ದೇವಾಲಯ, ತಪೋಗೃಹ, ಆಶ್ರಮಗಳು; ಬೆಟ್ಟಗಳ ನಡುನಡುವೆ ದೂರದಲ್ಲಿ ಒಂದರ ಹಿಂದೆ ಒಂದು,

ಒಂದಕ್ಕಿಂತ ಒಂದು ಹೆಚ್ಚು ಎತ್ತರವಾಗಿ ಶಿಖರಗಳ ಹಂತದಂತೆ ದೂರದ ಆಕಾಶಕ್ಕೆ ಏರಿ ಕಾಣುತ್ತಿರುವ ದೇವಾಲಯಗಳ ಮಹಾದ್ವಾರ ಗೋಪುರಗಳು; ಎಡಗಡೆ ಹತ್ತಿರದಲ್ಲಿಯೆ ಕಲ್ಲುಬಂಡೆಗಳ ಹಿಂದೆ ಕಲಕಲ ನಾದದಿಂದ ಹರಿಯುತ್ತಿರುವ ತರಂಗಿಣೀ ತುಂಗಭದ್ರೆಯ ಕೋಲಾಹಲ; ನದಿಗೂ ನಮಗೂ ಮಧ್ಯೆ ಅಲ್ಲಲ್ಲಿ ಹೊಸದಾಗಿ ಪೂರ್ಣಕುಸುಮಿತವಾದ ಕಾಡುಮಲ್ಲಿಗೆ ಗಿಡಗಳು; ಸ್ವಲ್ಪ ದೂರ ನೇರವಾಗಿ ಹೋಗಿ, ಉತ್ತರಕ್ಷಣದಲ್ಲಿಯೇ ಎಲ್ಲಿಯೋ ಹೊಕ್ಕು ಹೇಗೋ ತಿರುಗಿ, ಮರೆಯಾಗಿ ಮುಖ ಮುಚ್ಚಿಕೊಂಡು, ಪುನಃ ಮೈಲಿಗಳ ದೂರದಲ್ಲಿ ಪರ್ವತಸಾನುವೊಂದರಲ್ಲಿ ಕಣ್ಣಿಗೆ ಬೀಳುತ್ತ ನಮ್ಮೊಡನೆ ಹುಡುಗಾಟವಾಡ ಲೆಳಸುವಂತೆ ಮುಂದುವರಿದಿರುವ ಮೆಟ್ಟಲುದಾರಿ!'

ಕವಿಯ ಚಿತ್ತವನ್ನು ಸೂರೆಗೊಂಡ ಬೆಟ್ಟದ ಕಿಬ್ಬಿಯಲ್ಲಿರುವ ಲಕ್ಷ್ಮೀ ನಾರಾಯಣ ದೇವಸ್ಥಾನ, '....ದೊಡ್ಡದಲ್ಲ. ಹೊರಗಡೆ ಕೆತ್ತನೆಕೆಲಸವೊಂದೂ ಇಲ್ಲ....ಒಂದೇ ಬಂಡೆಯಲ್ಲಿ ದೇವಸ್ಥಾನವನ್ನು ಕೊರೆದು ಸಾಮಾನ್ಯವಾಗಿ ಕಟ್ಟಿದ್ದಾರೆ....ಒಳಗೆ ಮೂರು ವಿಗ್ರಹ ಇವೆ; ತೆಳ್ಳಗೆ ಉದ್ದವಾಗಿ ಒಂದರ ಪಕ್ಕದಲ್ಲಿ ಒಂದು ಅತ್ಯುತ್ತಮವಾಗಿ ಕಡೆದು ಮಾಡಿವೆ. ಒಂದು ಶ್ರೀಮನ್ನಾರಾಯಣ ವಿಗ್ರಹ; ಅದರ ಎರಡು ಪಕ್ಕಗಳಲ್ಲಿಯೂ ಶ್ರೀದೇವಿ ಭೂದೇವಿ ಮೂರ್ತಿಗಳು....ಆದರೆ ನಾವು ಹತಭಾಗ್ಯರು...ಯಾರೋ ಕ್ರೂರಕರ್ಮಿಗಳು— ಘಾತಕರು—ಈ ಸೌಂದರ್ಯವನ್ನೇ ದೂರದಿಂದ ಹುಡುಕಿಕೊಂಡು ಬಂದು ವಿಗ್ರಹಗಳ ಚೆಂದವನ್ನೂ ಚೆಲುವನ್ನೂ ನೋಡಿ ಸಹಿಸಲಾರದೆ ಅವನ್ನು ಭಿನ್ನ ಮಾಡಿದ್ದಾರೆ. ದೇವನ ಅಖಂಡ ಮೂರ್ತಿಯನ್ನು ಈ ಕರ್ಮಭೂಮಿಯಲ್ಲಿ ನೇರ ನೋಡುವುದು ಅಸಾಧ್ಯವೆಂದು ಕಾಲಕಾಲದಲ್ಲಿಯೂ ಯಾವುದೋ ಅದೃಷ್ಟ ವ್ಯಕ್ತಿಯೊಂದು ಸಾರಿಸಾರಿ ಹೇಳುವುದು ಎನ್ನುವಂತೆ, ಈ ಮೂರ್ತಿಗಳ ಪಾದಭಾಗವೊಂದು ಮಾತ್ರ ಉಳಿದು ಉಳಿದ ಶ್ರೀತನುವೆಲ್ಲವೂ ಈಗ ಕಾಣದಂತಾಗಿದೆ. ಸಾಧಾರಣದವರಿಗೆ ಕಾಣಿಸದ ಕಡೆ ಎಲ್ಲಿಯೋ ಒಂದು ಮೂಲೆಯಲ್ಲಿ, ಶ್ರದ್ಧಾಳುಗಳಾಗಿ ಅರಸುವವರಿಗೆ ಭಗವಂತದ ಪಾದದರ್ಶನವಾಗುವುದೆಂದು ಹಿರಿಯರು ಹೇಳುವುದನ್ನು ಕೇಳಿದ್ದೇವೆ....ಮೇಲ್ಗಡೆ ಸಪ್ತಫಣಗಳಿಂದ ದೇವನಿಗೆ ಛತ್ರಿ ಹಿಡಿದಂತೆ ನಿಂತಿರುವ ಫಣಿರಾಜನಿಗೂ ದುರ್ಗತಿ ತಪ್ಪಿಲ್ಲ, ಫಣಿರಾಜನ ಕಂಠ ಕತ್ತರಿಸಿ ಹೋಗಿದೆ. ಎಲ್ಲಿಯೋ ನಡುವೆ ಹರಿದುಹೋಗಿರುವ

ಫಣಭಾಗದಿಂದ ಒಂದೆರಡು ಜೊತೆ ನಾಲಗೆಗಳು ಒಡೆಯುಸಿಗೆ ಏನೋ ಹೇಳುವುದಕ್ಕೆಂದು ಹೊರಟು ಹೇಳಿ ಮುಗಿಸುವಷ್ಟರಲ್ಲೇ ಜೀವರಸಪ್ರವಾಹ ನಿಂತು ಹೋಗಲು ಸಿಕ್ಕೇಸ್ಟವಾಗಿ ನಿಂತುಬಿಟ್ಟಂತೆ ಕಾಣುತ್ತಿದೆ.' ಈ ಭಾಗವನ್ನು ಓದುತ್ತಿದ್ದಂತೆ ನಮ್ಮ ಕಣ್ಣು ತೇವವಾಗುತ್ತದೆ; ಯಾವುದೋ ಪ್ರಶಾಂತವಾದ ಬೆಳಕಿನಲ್ಲಿ ಮೆಯ್ ನವಿರೆದ್ದು ನಡೆದಾಡುತ್ತಿರುವಂತೆ ನಮಗೆ ಭಾಸವಾಗುತ್ತದೆ. ಅಳಲೆ, ಬೆಳಕೆ, ಪುಳಕವೆ, ಯಾವ ಸ್ಥಿತಿಯಿದು? ಎಂತಹ ವಿಚಿತ್ರವಾದ ಭಾವಪಾಕ! ಅಳಲೇ ಸಾಂತ್ವನವಾಗಿ ದಿವ್ಯಸುಖವನ್ನು ಕೊಡುವ ಎಂತಹ ಅಲೌಕಿಕ ಕ್ರಿಯೆ!

ಕೋದಂಡರಾಮಸ್ವಾಮಿಯ ದೇಗುಲದ ಎದುರಿನಲ್ಲಿ: 'ನದಿಯ ಪಾತ್ರ ಬಹಳ ಅಗಲವಾಗಿದೆ. ಎದುರಿಗಿರುವ ದೇವರು ದೇವಸ್ಥಾನಗಳ ಸಮ್ಮುಖದಲ್ಲಿ ತುಂಗಭದ್ರೆ ನಮ್ರಳಾಗಿ ಪ್ರಣಾಮ ಮಾಡಲೆಳಸಿ ಪ್ರದಕ್ಷಿಣೆಮಾಡಿ ಹೋಗುವಂತಿದೆ....ನದಿಯ ಆಚೆ ಕಡೆಯ ದಂಡೆಯಲ್ಲಿ ಶ್ರೀರಾಮದೂತನು ಹುಟ್ಟಿದ ಅಂಜನಾಪರ್ವತ.' ಎದೆಯಿಂದ ಸಹಜವಾಗಿ ಅರಳಿದ ಈ ಕಲ್ಪನೆಯ ಹೂವು ಎಷ್ಟು ರಮಣೀಯವೆಂಬುದು ಅನುಭವವೇದ್ಯ ಮಾತ್ರ! ನದಿಯ ಆಚೆಯ ಕಡೆ ಕಲ್ಲುಮಂಟಪ—ಅದೇ ಸನ್ಯಾಸಿ ದಿಬ್ಬ. 'ಇಲ್ಲಿ ಕುಳಿತು ತಾನೇ ಆ ವೀರ ತಪಸ್ವಿಗಳು ವೇದಧರ್ಮವನ್ನು ಉದ್ಧಾರಮಾಡುವ ಯೋಚನೆಗಳನ್ನು ಪಕ್ವಮಾಡಿಕೊಂಡುದು! ಸ್ವಾರ್ತಸಾಮ್ರಾಜ್ಯಸ್ಥಾಪನೆಯ ಉದ್ದೇಶಗಳನ್ನು ಹುರಿಮಾಡಿಕೊಂಡುದು!' 'ಮುಂದೆ ಅನತಿದೂರದಲ್ಲಿಯೆ ಎತ್ತರವಾದ ತುಲಾಪುರುಷ ದಾನಸ್ತಂಭಗಳು; ವಿಜಯನಗರದ ಅರಸರು ಪರ್ವಗ್ರಹಣಾದಿ ಪುಣ್ಯಕಾಲಗಳಲ್ಲಿ ತೂಕಮಾಡಿಸಿಕೊಂಡು ರತ್ನಕನಕಾದಿದ್ರವ್ಯಗಳನ್ನು ಯಥೇಚ್ಛವಾಗಿ ದಾನಮಾಡುತ್ತಿದ್ದ ಸ್ಥಳವಂತೆ'—ಆದರೆ ಈಗ?....ಮತ್ತೆ ಮತ್ತೆ ಅದೇ ಪ್ರಶ್ನೆ; ಮತ್ತೆ ಮತ್ತೆ ಅದೇ ನಿಟ್ಟುಸಿರಿನ ಉತ್ತರ!

ವಿಜಯವಿಟ್ಠಲಸ್ವಾಮಿಯ ಗುಡಿ! ಒಳಗೆ ದೇವರಿಲ್ಲವೆ ಭಣಗುಟ್ಟುವ ಆ ಮಂದಿರದ ಸೌಂದರ್ಯ ಮನಸ್ಸನ್ನು ಕೆರಳಿಸುವಂಥದು. ಆದರೇನು, ದಿವ್ಯ ಪ್ರಶಾಂತತೆಯ ಹಾಲುಬೆಳಕಿಲ್ಲದೆ ಎದೆ ಅರಳುವುದಿಲ್ಲ; ನರಳುತ್ತದೆ. ಅಲ್ಲಿನ 'ಕಲ್ಯಾಣಮಂಟಪ'ದ ವರ್ಣನೆಯನ್ನಂತೂ ಲೇಖಕರ ಮಾತುಗಳಲ್ಲಿಯೇ ನೋಡಬೇಕು. 'ಉತ್ತಮವಾದ ಸಹಜಸೌಂದರ್ಯವನ್ನು ವೃದ್ಧಿಮಾಡಲು

ಅಂಗಾಂಗಗಳಿಗನುಗುಣವಾದ ಉಡುಗೆತೊಡುಗೆಗಳನ್ನು ಹಾಕಿ ಅಲಂಕರಿಸುವಂತೆ—ಮಂಟಪದ ಒಳಮೂಳೆಗೆಯ ಪ್ರತಿಭಾಗವೂ ಸ್ಫುಟವಾಗಿ ಕಂಡು ಶೋಭಿಸುವಂತೆ—ಹಸುರು, ನೀಲಿ, ಗುಲಾಬಿ, ಕೆಂಪು ಮುಂತಾದ ಬಣ್ಣಗಳಿಂದ ಅವನ್ನು ಹೆಚ್ಚು ಉಜ್ವಲವಾಗಿ ಕಾಂತಿಯುತವಾಗಿ ಮಾಡಿದ್ದಾರೆ. ಭವ್ಯಗಾನವೊಂದು ಘನಿಸಿ ಶಿಲ್ಪಕೃತಿಯಾಗಿ ಪರಿಣಮಿಸಿದಂತೆ ಇಲ್ಲಿನ ನೋಟ....ಸಂಧ್ಯಾರುಣ ರಾಗಗಳಿಂದ ಬಣ್ಣಗೊಂಡು ವಿಧವಿಧವಾಗಿ ಕಾಂತಿ ಪಡೆದು ಕ್ಷಣಕ್ಷಣಕ್ಕೂ ಶೃಂಗಾರಗಳನ್ನು ತೋರಿಸಿ ಮೋಹಿಸುವ ಮುಗಿಲಿನ ಶ್ರೇಣಿಗಳು ಒಂದೊಂದೂ ತಮ್ಮಿಷ್ಟಕ್ಕೆ ತಾವೆ ಕೂಡಿ ಬಂದು ಈ ರೀತಿಯಲ್ಲಿ ಆಕಾರ ತಾಳಿ, ಘನಿಷ್ಠವಾಗಿ ಇಲ್ಲಿ ಊರಿ ನಿಂತುಬಿಟ್ಟಿರುವಂತೆ ಈ ಮಂಟಪವು ಶೋಭಿಸುವುದಿಲ್ಲ!'—ನಿಸರ್ಗದ ಚೆಲುವು ಕ್ಷಣಭಂಗುರವೆಂದು ತಿಳಿದು ಅಮೃತವಾದ ಕಲೆಯನ್ನು ಸೃಷ್ಟಿಸಿಕೊಂಡ, ಮನುಷ್ಯ. ಆದರೆ ತಾನೂ ಅಮರನಾಗಿ ಬಾಳಲು ಸಾಧ್ಯವಾಗಲಿಲ್ಲ....ಅಥವಾ ಕಲಾಪ್ರಕೃತಿಯ ಮಾದರಿಯಲ್ಲಿ ತಾನೇ ಅಮರವಾದ ಕಲಾಕೃತಿಯೊಂದನ್ನು ಸೃಷ್ಟಿಸಿ, ತನ್ನ ಚೇತನದ ಬಯಕೆ ಆದರಲ್ಲಿ ಅಮೃತವಾಗಿ ಬಾಳುವಂತೆ ಮಾಡಿದನೆ? ಅಂತೂ ಈ ಘನೀಭೂತಪ್ರತಿಮೆ ರಸಿಕಚೇತನದಲ್ಲಿ ಕರಗಿ ಮಾನವಚೇತನದ ಹಂಬಲನ್ನೇ ಮತ್ತೆ ಕೆರಳಿಸುತ್ತದೆ.

'ಇತರ ದೇವಸ್ಥಾನಗಳ ಮುಂಭಾಗದಲ್ಲಿರುವಂತೆಯೇ ಇಲ್ಲಿಯೂ ತೇರುಬೀದಿ; ನಾಲ್ಕು ಕಡೆಯೂ ದೇವಸ್ಥಾನ; ಈಗ ಅವೆಲ್ಲ ಭೂಶಾಯಿಯಾಗಿವೆ.... ರಕ್ತ, ಮಾಂಸ, ರಸ, ರಾಗ, ಬಣ್ಣ, ಕಾಂತಿಗಳಿಂದ ಪರಿಪುಷ್ಟರಾದ ಯುವಕಯುವತಿಯರು ನಗುನಗುತ್ತ ಸರಸವಾಡುತ್ತಿದ್ದ ಸುಖಭೂಮಿಯಲ್ಲಿ ಈಗ ವಿಷಧರ ಸರ್ಪ, ಮುಳ್ಳುಹಂದಿ, ಕಳ್ಳಕಾಕರು; ಎಲ್ಲಿ ಹೂದೋಟಗಳ ಪರಿಮಳವನ್ನು ಹೊತ್ತು ತಣ್ಣನೆ ತಂಗಾಳಿ ಬೀಸುತಿತ್ತೊ ಅಲ್ಲಿ ದಾರುಣವಾದ ಉರಿಗಾಳಿ.' ತನ್ನ ಬಸಿರಿಸಿಂದಲೇ ಚಿಮ್ಮಿಸಿದ ತನ್ನ ಹಸುಮಕ್ಕಳ—ಆ ಯುವಕಯುವತಿಯರ—ಒಲವಿನಾಟವನ್ನು ಭೂಮಿತಾಯಿ ಸಹಿಸಲಾರದಾದಳೆ? ಅಂತೆಯೇ ತನ್ನ ಮಕ್ಕಳನ್ನು ತಾನೇ ನುಂಗಿ ಈ ಮುಳ್ಳುಗಿಡಗಳನ್ನು ಚಿಮ್ಮಿಸಿಬಿಟ್ಟಳೆ?....ಅಥವಾ ಈ ಮರ್ತ್ಯಭೋಗವನ್ನು ಕಂಡು ಸಹಿಸಲಾರದೆಯೋ, ಅದು ತಮ್ಮ ನಾಡಿಗೆ ಮೀಸಲೆಂದೋ ಬಾನಿನವರು ಇವರನ್ನೆಲ್ಲ ಆವಿಯಾಗಿಸಿ ಮೇಲಕ್ಕೆ ಕೊಂಡೊಯ್ದುಬಿಟ್ಟರೆ?....ಒಮ್ಮೆ ಕಸ್ತುರಿಗಂಪಿನ ಪ್ರೇಮವಾಕ್ಕು

ಗಳನ್ನು ತನ್ನ ಉಡಿತುಂಬಿಸಿಕೊಂಡು ಮದುವಣಗಿತ್ತಿಯಂತೆ ಒಲೆಯುತ್ತಿದ್ದ ತಂಗಾಳಿ ಈಗ ಉರಿಗಾಳಿಯಾಗಿದೆ!....ಯಾರ ಸಿಟ್ಟು ಸಿರೋ!

ನದಿಯ ದಡದಾಚೆಗಿರುವ ಆನೆಗೊಂದಿಗೆ ಹೋಗಲು ಹರಿಗೋಲನ್ನು ಹತ್ತಿ ಹೊರಟಾಗ: 'ಎರಡೂ ಕಡೆಯ ಬೆಟ್ಟಗಳಲ್ಲಿ ದಾರಿಮಾಡಿಕೊಂಡು ತೆಳ್ಳಗೆ ಬೆಳ್ಳಗೆ ಎಷ್ಟು ಯುಗಗಳಿಂದಲೊ ಇದೇ ರೀತಿ ಹರಿದುಬರುತ್ತ, ಎಲ್ಲಿಯೋ ಹುಟ್ಟಿ ಹೇಗೊ ಹೇಗೋ ಹರಿದು, ಎಲ್ಲಿನ ಯಾವುದನ್ನೋ ಅರಸಿಕೊಂಡು ಹೋಗುತ್ತಿರುವ ಮಂದಗಾಮಿನಿ ನದಿ; ಅದರ ಸಮಕಾಲೀನರಾಗಿ, ಇಲ್ಲವೆ ಇನ್ನೂ ಪುರಾತನರಾಗಿ ಒಂದೇ ವಿಧವಾದ ವೃತ್ತಿ ಪ್ರವೃತ್ತಿ, ಮೋಹ, ದ್ವೇಷ, ಅಸೂಯೆ ಮೊದಲಾದ ಮೂಲ ಸ್ವಭಾವಗಳನ್ನು ವ್ಯಕ್ತಗೊಳಿಸುತ್ತ ಜೀವನ ಪ್ರಯಾಣ ಮಾಡುತ್ತಿರುವ ಮನುಷ್ಯರಾದ ನಾವು;........' ನೀರವವಾದ ಹಸಿರು ನೆಲದ ನಡುವೆ ಹರಿಯುವಾಗ ಇದೇ ನದಿ ಆ ಮೂಕಪ್ರಕೃತಿಯ ಅಭಿವ್ಯಕ್ತಿಸಾಧನವೆಂದು ಭಾಸವಾಗುತ್ತಿತ್ತೇನೋ; ಸ್ಮಾರ್ತಸಾಮ್ರಾಜ್ಯದ ಮಹಾಸಂಸ್ಕೃತಿ ಅದರ ದಂಡೆಯಲ್ಲಿ ತಲೆಯೆತ್ತಿ ನಿಂತಿದ್ದಾಗ, ಎತ್ತರದ ಸಂಜೆಯ ವೇಳೆ ಕರುಮಾಡದ ಮೇಲೆ ನಿಂತು ಹಾಯಿದೋಣಿಗಳು ತೇಲುವ ನದಿಯನ್ನು ಕಂಡು ಚೆಲುವಿನ ತರುಣಿಯರು 'ಚೆಲುವಿನ ಸಿರಿ ನಾಡನ್ನು ತುಂಬಿತುಳುಕಿ ಬಂಗಾರದ ಹೊಳೆಯಾಗಿ ಹರಿಯುತ್ತಿದೆ' ಎಂದಿದ್ದರೇನೋ; ಆದರೆ ಈಗ? —ಒಮ್ಮೆ ಸೌಂದರ್ಯದ ದರ್ಶನ; ಒಮ್ಮೆ ಸತ್ಯದ ದರ್ಶನ. ತನ್ನ ಅನಂತ ಜೀವನದಲ್ಲಿ ಕ್ಷಣಮಾತ್ರವಾಗಿ ಬಂದ ಈ ಮಹಾವೈಭವ ಆ ತುಂಗಾತಾಯಿಯನ್ನು ವಿಚಲಿತಗೊಳಿಸಿದ್ದಿರಬಹುದೆ? ಇಲ್ಲ, ಆಕೆ ಅರಿತಿದ್ದಿರಬೇಕು, 'ಜಗ ಚೆಲುವೆನ್ನುವ ಬಗೆಯನುರಣನೆ' ಎಂಬ ಸತ್ಯವನ್ನು.

'ನದಿಯ ಹೊರದಡವನ್ನು ಸೇರಿದುದಾಯಿತು. ಉದ್ದಕ್ಕೆ ಹೊರಟೆವು. ಆನೆಗೊಂದಿ ಸಂಸ್ಥಾನವನ್ನು ಹೊಕ್ಕು ಮುಂದೆ ನಡೆದೆವು. ನಾವು ಹಿಂದೆ ಬಿಟ್ಟು ಬಂದ ಆ ಹಾಳು ಸಾಮ್ರಾಜ್ಯಕ್ಕೂ ಈ ಜೀವಂತ ಸಂಸ್ಥಾನಕ್ಕೂ ಎಲ್ಲಿಯ ಹೋಲಿಕೆ?........ಆದರೆ ಆ ಊರನ್ನು ದಾಟಿ ಹೋಗುತ್ತಿರುವಲ್ಲಿ ನಮಗೆ ಇವಾವುದೂ ಜೀವಂತವಾಗಿರುವಂತೆ ಕಾಣಬರಲಿಲ್ಲ........ಆ ಸೌಂದರ್ಯ ಸಾಮ್ರಾಜ್ಯದ ಪಾಳೇ ಸತ್ಯ, ಈ ಜೀವಂತ ಸಂಸ್ಥಾನ ಮಿಥ್ಯ—ನಾವೂ ಆ ಶೂನ್ಯಜಗತ್ತೂ ಪರಸ್ಪರ ಪ್ರೇಮಾಭಿಲಾಷಿಗಳು; ಇತರ ವಿಶ್ವಾಸ ಬಂಧನಗಳಿಗೆ

ಸಿಕ್ಕದೆ ಅನುರಕ್ತರಾಗಿ ಆ ಪ್ರೇಮಸಾಧನೆಯಲ್ಲೇ ಮಗ್ನರಾಗಿರುವವರು ಎಂಬುದು ಸ್ಥಿರಪಡುವಂತೆ, ನಮ್ಮ ಮನಸ್ಸಿನಿದಿರಿಗೆ ಶಿಥಿಲ ಸೌಂದರ್ಯದ ಚಿತ್ರವೊಂದು ಮಾತ್ರ ಕಾಣುತ್ತಿತ್ತು '—ನಿಜ, ಕಣ್ಣು ಗುರುತಿಸುವ ಜೀವಕಳೆಯೇ ಬೇರೆ; ಮನಸ್ಸು ಕಾಣುವ ಜೀವಕಳೆಯೇ ಬೇರೆ. ಕಣ್ಣು ನಾಶವಾಯಿತೆಂದು ತಿಳಿದ ಚೇತನ ಎಷ್ಟೋ ಬಾರಿ ಮನಸ್ಸಿಗೆ ಚಿರಂಜೀವಿಯಾಗಿ ತೋರುತ್ತದೆ; ಕಣ್ಣಿನೆದುರು ಜೀವಂತವಾಗಿ ಸಂಚರಿಸುತ್ತಿರುವ ಚೇತನ ಹಲವು ಬಾರಿ ಮನಸ್ಸಿನಲ್ಲಿ ಮೃತವಾಗಿಯೇ ಇರುತ್ತದೆ.

'ಇಲ್ಲಿಯೆ ಎಲ್ಲಿಯೊ ರಾಮದರುಶನ ಸುಧಾರಸಪಾನಕ್ಕಾಗಿ ಚಕೋರಿಯಂತೆ ಕಾದಿದ್ದ ಪೂಜ್ಯಳಾದ ಶಬರಿಯ ಆಶ್ರಮ; ಆತನ ಸಂದರ್ಶನಕ್ಕಾಗಿ ವರ್ಷಾಂತರ ಕಾದುಕೊಂಡಿದ್ದು, ಹೃದಯದಲ್ಲಿ ಆತನ ಮೂರ್ತಿಯನ್ನು ಕಲ್ಪಿಸಿ ತುಂಬಿಕೊಂಡು ಕಣ್ಣುಗಳಿಂದ ಸರ್ವದಾ ಅವನನ್ನೇ ನೋಡುತ್ತ, ಕೈಗೆಟುಕಿದ ಪ್ರತಿಯೊಂದು ತನಿವಣ್ಣನ್ನೂ ಕಿತ್ತು ಶೇಖರಿಸಿಟ್ಟು, ಕೈಗೆ ಸಿಕ್ಕಿದ ಪ್ರತಿಯೊಂದು ಹೂವರಳನ್ನೂ ಪೂಜೆಗೆಂದು ಅಣಿಮಾಡಿಟ್ಟು, ನಿಮಿನಿಮಿಷವೂ ಅವನು ಬರುವನೆಂದು ನಿರೀಕ್ಷಿಸಿಕೊಂಡು, ಗಾಳಿಯ ಪ್ರಭಾವದಿಂದ ತರಗೆಲೆಯೊಂದು ಮೆಲ್ಲನೆ ಮರಮರ ಶಬ್ದಮಾಡಿದರೆ ಅದು ತನ್ನ ಉಪಾಸನಾದೇವನ ಕಾಲಸಪ್ಪಳವೆಂದು ಭ್ರಮಿಸಿ ಹೊರಗೆ ನೋಡುತ್ತ ಕಾದು ವೃದ್ಧೆಯಾಗಿದ್ದ ಆಕೆಯ ಆಶ್ರಮಸ್ಥಾನ. ತಾರೆಯ ಅಳು ಹೊನಲಾದುದೂ ಇಲ್ಲೇ ಎಲ್ಲೋ. ಮುಂದೆ ವಾಲಿಸುಗ್ರೀವರು ಕಿಷ್ಕಿಂಧೆಗಾಗಿ ಹೋರಾಡಿದ ಪ್ರದೇಶಗಳು........ಇಲ್ಲಿಯೆ ಅಣ್ಣತಮ್ಮಂದಿರು ಘೋರವಾಗಿ ಯುದ್ಧಮಾಡಿ ಕಪಿರಕ್ತದ ಕಾಲುವೆಗಳನ್ನು ಹರಿಸಿದುದು. ಹೀಗೇ ರಾಮಲಕ್ಷ್ಮಣರು ಸೀತಾವಿಯೋಗದಿಂದ ಬಾಡಿ ಬಳಲಿ ಪಂಪಾಸರಸ್ಸಿಗೆ ನಡೆದು ಹೋಗಿದ್ದುದು....'—೧೫ನೆಯ ಶತಮಾನದ ಎಡಬಲವನ್ನು ಬಿಟ್ಟು ತ್ರೇತಾಯುಗದ ಮಹಾಘಟನೆಗಳಿಗೆ ಕೊಂಡೊಯ್ಯುವ ನೆಲ. ಇದೇ ರಂಗಭೂಮಿಯ ಮೇಲೆ ಎಷ್ಟು ಪ್ರಹಸನಗಳು ನಡೆದುಹೋದವೊ! ಈಗ: '....ನಾಲ್ಕಾರು ಹೆಂಡದ ಗಾಡಿಗಳು, ಕಬ್ಬಿನ ಕಂತೆಗಳು; ಅರ್ಧ ಮತ್ತವಾದ ಕಣ್ಣಿಂಪಿಂದಲೂ ಅಸ್ಥಿಮಿತ ಪದಗತಿಯಿಂದಲೂ ನಡೆದುಬರುತ್ತಿರುವ ಮನುಷ್ಯಮೂರ್ತಿಗಳು.' ಎಳೆಗಾಳಿ, ಕೋಗಿಲೆ, ಕ್ರೌಂಚ, ಬಲಾಕ ಪಂಕ್ತಿ....ಅರ್ಥಾರ್ಥಸಂಬಂಧವಿಲ್ಲದ ಯುಗಯುಗಗಳ ವಿಶಾಲ ಪಟದಮೇಲಿನ ಈ ಬಣ್ಣಬಣ್ಣದ ಮಬ್ಬು ಚಿತ್ರಗಳನ್ನು

ಸಮಗ್ರವಾಗಿ ಗ್ರಹಿಸಲಾರದೆ ಮನಸ್ಸು ಅಳುಕುತ್ತದೆ.

'........ಎಡಕ್ಕೆ ಸ್ವಲ್ಪ ತಿರುಗಿದರೆ ಅಲ್ಲಿಯೇ ಎದುರಿಗೆ, ಅಂಜನಾ ಪರ್ವತದ ತಪ್ಪಲಲ್ಲಿ, ತಿಳಿಹಸುರಿನ ಮೃದು ಚೌಕಟ್ಟಿನಲ್ಲಿ ನೆಲಸಿರುವ ಪ್ರಶಾಂತ ಪಂಪಾ ಸರಸ್ಸು!' ಮಾನವಚೇತನದ ತಪೋಭಿಲಾಷೆಗೆ ಮೂರ್ತಸ್ವರೂಪವಾಗಿ ನಿಂತ ವಿದ್ಯಾರಣ್ಯರಂತೆ, ಪ್ರಕೃತಿಚೇತನದ ತಪೋಭಿಲಾಷೆಗೆ ಮೂರ್ತಸ್ವರೂಪನಾಗಿ ಈ 'ಪಂಪಾ ಸರಸ್ಸು' ನಿಂತಿತೇನೋ! ಮಾನವ ಮನಸ್ಸಿನ ಮಹಾಭಿಲಾಷೆಯ ಮಹಾ ಪ್ರತೀಕವಾಗಿ ಸ್ಮಾರ್ತಸಾಮ್ರಾಜ್ಯಸ್ಥಾಪನೆಯಾಯಿತು; ಅದು ನೆಲಸಮವೂ ಆಯಿತು. ಮಾನವಕೃತಿಯ ಮತ್ತು ನಿಸರ್ಗಕೃತಿಯ ತರಂಗವಿನ್ಯಾಸದಲ್ಲಿ ಎಲ್ಲವೂ ಬದಲಾಯಿತು. ಈ ತಿಳಿಗೊಳದ ತಪಸ್ಸು ಮಾತ್ರ ನಿಲ್ಲಲಿಲ್ಲ. ಸರ್ವವನ್ನೂ ಆಳಿದ ರಾಗದ್ವೇಷಗಳ ಸೋಂಕು ಇದಕ್ಕೆ ಮಾತ್ರ ತಾಗಲಿಲ್ಲ! 'ಉತ್ತರಕ್ಕೆ ಅಂಜನಾ ಪರ್ವತ. ಇನ್ನು ಮೂರು ಕಡೆಯೂ ಬೇರೆ ಪರ್ವತಗಳ ಸಾನುಪ್ರದೇಶ ಈ ಸರಸ್ಸಿನವರೆಗೂ ಇಳಿದು ಬಂದಿದೆ. ಕಾಲದ ಆದಿಯಿಂದಲೂ ಇಲ್ಲೇ, ಹೀಗೇ ಒಂದರ ಕೆಳೆಯಲ್ಲೊಂದು ಬೆಳೆದು ಏಕಾಂತರಂಗದಿಂದ ಕಾಲಕಳೆಯುತ್ತಿರುವ ಚಿರಂಜೀವಿಗಳು ಇವು.... ಈ ಭೂಭಾಗದ ಹೊರ ಎಲ್ಲೆಗೆ ಬಹುದೂರದಲ್ಲಿ ಎಲ್ಲಿಯೋ ವ್ಯವಹಾರಪ್ರಪಂಚ ಕೊನೆಗೊಂಡಂತೆ ಇದೆ.....ಬೆಟ್ಟಗಳು ಕೂಡಾ ಇಲ್ಲಿ ನಮ್ರತೆಯಿಂದ ಉಚ್ಚ ಮನೋಭಾವದಿಂದ ನಿರ್ಮಲ ಚಿತ್ತದಿಂದ ಸರಸ್ಸಿಗೆ ಮರ್ಯಾದೆ ಕೊಟ್ಟು ಅದರ ಶಾಂತಿಯನ್ನು ಕಾಪಾಡಿಕೊಂಡು ಬಂದಿವೆ....ಇಲ್ಲಿನದು ತಿಳಿಯಾಗಿ ಹೊಳೆವ ಪುಣ್ಯೋದಕ. ಶ್ರೀರಾಮಪಾನದಿಂದ ಪವಿತ್ರವಾದ್ದು....ಸುತ್ತಣ ಹೂಗಿಡಗಳೂ ಪರ್ವತಪಂಕ್ತಿಗಳೂ ತಮ್ಮ ಪ್ರತಿಬಿಂಬಗಳನ್ನು ಅದರೊಳಗೆ ಕಾಣುತ್ತ ಕೃತಕೃತ್ಯತೆಯನ್ನು ಪಡೆವಂತಿವೆ....ಪಕ್ಕದ ಪರ್ವತಶಿಖರಗಳೊಂದಿಗೆ ಎಷ್ಟೋ ಬಾರಿ ಸರಸದಿಂದ ಕ್ರೀಡಿಸಿದ್ದ ಸಿಡಿಲುಗಳೂ ದರ್ಪಹತವಾಗಿ ಈ ಶಾಂತಿಯಲ್ಲಿ ಲಯವಾಗಿ ಹೋಗಿರಬೇಕು. ದಿಕ್ಕುಗಳನ್ನು ತಿವಿದಳಿಸಿ ಉರಿಸಿಕೊಂಡು ಕ್ಷಣಮಾತ್ರದಲ್ಲಿ ಭೂವಲಯವನ್ನು ಏಳು ಸುತ್ತು ಸುತ್ತಿ, ಭೂಮಿ ಆಕಾಶಗಳನ್ನು ಒಂದುಮಾಡಿ ಹೊಳೆದು ಹೋಗುವ ಮಿಂಚೂ ಈ ಸರಸ್ಸಿಗೆ ತನ್ನ ಕಾಂತಿಯನ್ನು ಕಾಣಿಕೆ ಕೊಟ್ಟು ಪರಾಜಯವನ್ನು ಒಪ್ಪಿಕೊಂಡು ತಿವ್ಯವೃತ್ತಿ ಆಚರಿಸಿರಬೇಕು....ಇತ್ತಲಾಗಿ ಇವೆಲ್ಲವನ್ನೂ ನೋಡುತ್ತ, ಪುರಾತನದಿಂದ

ಈವರೆಗಿನ ಎಲ್ಲ ವಿಧವಾದ ಕಾರ್ಯಕರ್ಮಗಳನ್ನು ಕಣ್ಣಾರ ಕಂಡು ಎಲ್ಲವನ್ನೂ ತಿಳಿದುಕೊಂಡಿದ್ದರೂ ಏನೂ ತಿಳಿಯದಂತೆ ತನ್ನ ಆನಂದದಲ್ಲಿ ತಾನು ಮಗ್ನನಾಗಿರುವ ಸಿದ್ಧನಂತೆ ಈ ಸರಸ್ಸು ಕಾಣುತ್ತದೆ.'

ಪಕ್ಕದಲ್ಲಿಯೇ ಸೀತಾದೇವಿಯ ದೇಗುಲ. '....ಸೀತಾದೇವಿಯ ದರ್ಶನ ಮಾಡಲು ನನಗೇನೋ ಮನಸ್ಸು ಬರಲಿಲ್ಲ;....ನಿಡುಸುಯ್ಯುತ್ತ ಆಕೆ ಕಣ್ಣೀರ ಮಳೆಯನ್ನು ಸುರಿಸಿಕೊಂಡು ಹೋಗಿದ್ದ ಪ್ರದೇಶವಿದು! ದೇವಿಯ ವಿರಹದಿಂದ ಶ್ರೀರಾಮನು ಬಾಡಿ ಉನ್ಮತ್ತನಂತಾಗಿ ದುಃಖಪಟ್ಟ ಸ್ಥಳವಿದು!.... ಫುಲ್ಲಹಾಸ ಹೋಗಿ ಮೊಗದ ಮೇಲೆ ಕತ್ತಲೆ ಕವಿದಂತಿರುವ ಈ ಪ್ರದೇಶದಲ್ಲಿ ಆಕೆಯನ್ನು ಕಂಡು ಆನಂದಿಸುವುದು ಹೇಗೆ?'—ಹಂಪೆಯ ಹಾಳಿನಲ್ಲಿ ರಸಿಕರ ಮನಸ್ಸನ್ನು ತನ್ನದೇ ಆದ ಸೌಂದರ್ಯದಿಂದ 'ಪಂಪಾ ಸರಸ್ಸು' ಸೆರೆಗೈಯುವಂತೆ ಗ್ರಂಥದ ಈ ವರ್ಣನೆಯ ಭಾಗ ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತದೆ. ಗ್ರಂಥದಲ್ಲಿ ಈ ವರ್ಣನೆಯೊಂದು ರಸ ಸರಸ್ಸು!

ಈ ಭಾಗದಲ್ಲಿ ಬರುವ 'ಚೆನ್ನಯ್ಯ' ಆ ಐವರು ಪ್ರವಾಸಿಗಳನ್ನೆಂತೊ ಅಂತೆಯೆ ನಮ್ಮನ್ನೂ ತನ್ನ ಕಡೆಗೆ ಬಹುವಾಗಿ ಆಕರ್ಷಿಸಿಕೊಳ್ಳುತ್ತಾನೆ. ಆತ ಆ ಹಂಪೆಯ ಹಾಳಿನಲ್ಲೆ ಹುಟ್ಟಿ ಬೆಳೆದವ. ಅಲ್ಲಿನ ಅಂಗುಲ ಅಂಗುಲವೂ ಆತನಿಗೆ ಸುಪರಿಚಿತ—ಪ್ರಿಯನಿಗೆ ಪ್ರೇಯಸಿಯಂತೆ! ಅವನ ಪಾಲಿಗೆ ಈ ಹಾಳು ಹಾಳೇ. ಯಾವ ಬಗೆಯ ಐತಿಹಾಸಿಕ ಬೆಳಕಿನ ಹಿನ್ನೆಲೆಯಿಂದಲೂ ಅದು ಬೆಳಗಬೇಕಿಲ್ಲ. ಅಂದು–ಇಂದಿನ ವಿರುದ್ಧಗಳನ್ನು ನೆನೆದು ಮರುಗುವವನಲ್ಲ ಆತ. ಆ ಹಾಳು ಅವನಿಗೆ ಬಗೆಬಗೆಯ ಅದ್ಭುತರಮ್ಯ ಕತೆಗಳನ್ನು ಹೇಳುತ್ತಿದ್ದಿರಬೇಕು. ಅಂತಹ ಕತೆಗಳಾದರೂ ಅವನಿಗೆ ರಮ್ಯವೆನಿಸಿಬರಹುದಲ್ಲದೆ ಮರುಕವನ್ನು ಹುಟ್ಟಿಸಿರಲಾರವು. ಆತ ಆ ಹಾಳಿನಲ್ಲಿಯೇ ಒಂದು ಬಗೆಯ ಬಾಳನ್ನು ಕಂಡುಕೊಂಡವ. ಆತನಿಗೆ ಅದೊಂದು ಸಂಸ್ಕೃತಿಯ ಅವಶೇಷ ಮಾತ್ರವಲ್ಲ; ಆ ನೆಲ ಪೂಜ್ಯವೂ ಅಲ್ಲ, ತುಚ್ಛವೂ ಅಲ್ಲ. ಒಲವನ್ನು ಕೊಂಡು ಒಲವನ್ನು ನೀಡಿದ ಕೆಳೆ!

ತಿರುಗಿ ತಿರುಗಿ ದಣಿದು ಉತ್ಪಾತ ಮಳೆಯಲ್ಲಿ ಹಿಂದಿರುಗಿ ಬಂದು ಮಲಗಿದಾಗ....'ರಾತ್ರಿಯೆಲ್ಲ ಕನಸುಗಳು': ಆ ಮಹಾಸಾಮ್ರಾಜ್ಯದ ವೈಭವವೆ, ಅಟ್ಟಹಾಸವೆ, ಅಲ್ಲಿನ ರಾಜ ರಾಣಿಯರ ರಾಗಭೋಗಗಳೆ, ನೃತ್ಯವೆ,

ಸಂಗೀತವೆ, ಉತ್ಸವವೆ, ಪೂಜೆಯೆ, ಯುದ್ಧಸಿದ್ಧತೆಯೆ—ಒಂದಲ್ಲ, ಎರಡಲ್ಲ ಸರಗಟ್ಟಿ ಸಾಲುಗಟ್ಟಿ ಬರುವ ಕನಸುಗಳು! ಆ ದೃಶ್ಯಗಳೋ, ಒಂದಕ್ಕೊಂದಕ್ಕೆ ಸಂಬಂಧವಿಲ್ಲ: ಒಮ್ಮೆ ಗುಡಿ, ಒಮ್ಮೆ ಅಂತಃಪುರ, ಒಮ್ಮೆ ರಾಜಸಭೆ; ಅಷ್ಟು ಮಾತ್ರವಲ್ಲ, ಯುಗಯುಗ ಹಿಂದಿನ ರಾಮಾಯಣದ ಚಿತ್ರಗಳು ಮತ್ತೊಮ್ಮೆ ನುಗ್ಗುತ್ತವೆ.

ಬುದ್ಧಿ ಕಂಡ ವಾಸ್ತವಿಕತೆ ಹಗಲಿನಲ್ಲಿ ಮನಸ್ಸಿನ ಸ್ವಚ್ಛಂದ ಕಲ್ಪನೆಗಳಿಗೆ ಸಂಯಮದ ಕಟ್ಟು ವಿಧಿಸಿದರೂ ನಿದ್ರಾವಸ್ಥೆಯಲ್ಲಿ, ಅರಿವು ಓರೆಯಾದಾಗ ಮತ್ತೆ ಮನಸ್ಸು ಸ್ವಚ್ಛಂದವಾಗುತ್ತದೆ; ಬಗೆಬಗೆಯ ಬಣ್ಣದ ರೆಕ್ಕೆಗಳನ್ನು ತೊಟ್ಟು ಹಾರಾಡುತ್ತದೆ.

ಈ ಚಿತ್ರವಿಚಿತ್ರವಾದ ಕನಸುಗಳ ಹಿಂದೆ ಚೆಲ್ಲಿದ ವರ್ಣ ಪ್ರಕಾಶ, ಯಾತ್ರೆಯ ಚಿತ್ರಕ್ಕೆ ತನ್ನದೇ ಆದ ಒಂದು ಬಣ್ಣವನ್ನು ಕೊಟ್ಟು ರಂಜಿಸುವಂತೆ ಮಾಡುತ್ತದೆ....ಯಾವುದು ಕನಸು ಎಂದು ಗುರುತಿಸುವುದಕ್ಕೇ ಆಗದ ಸನ್ನಿವೇಶ. ಯಾತ್ರೆಯುದ್ದಕ್ಕೂ ಕನಸೇ ಕೈಹಿಡಿದುಕೊಂಡು ವಾಸ್ತವಿಕತೆ ಯನ್ನು ತೋರಿಸುತ್ತಾ ನಡೆಯುತ್ತದೆ; ಕೊನೆಯಲ್ಲಿ ತಾನೇ ಬೃಹದ್ರೂಪಿ ಯಾಗಿ ಏಕಾಂಗಿಯಾಗಿ ನಿಂತುಬಿಡುತ್ತದೆ.

ಎಷ್ಟು ಉಚಿತವಾಗಿದೆ ಈ ಯಾತ್ರೆಯ ಉಜ್ವಲರಾಗಕ್ಕೆ ಕನಸಿನ ರಮಣೀಯವಾದ ಮುಕ್ತಾಯ!

ತಿರುಗಿ ರೈಲಿನಲ್ಲಿ ಹೊರಟಾಯಿತು. "ಎಲ್ಲರ ಮುಖಗಳಲ್ಲಿಯೂ ಏಕ ಮನೋಭಾವದ ಸಂಚಾರವಿತ್ತು. ಸುಮ್ಮನಾದೆವು. ಮೂರ್ತಿ ಕಿಟಕಿಯ ಹೊರಗೆ ತಲೆಹಾಕಿ ಹೊರಗಿನ ದೂರವನ್ನೇ ನೋಡುತ್ತಿದ್ದರು.

'ಪಂಪಾಯಾತ್ರೆ ಮುಗಿಯಿತಪ್ಪ' ಎಂದರು ರಾಯರು.

'ಇನ್ನೊಂದು ಸಲ ನಾವು ಬರುವ ಹೊತ್ತಿಗೆ ಅಲ್ಲಿನ ಬೆಟ್ಟಗಳೆಲ್ಲ ಉರುಳಿ ಪುಡಿಪುಡಿಯಾಗಿ ಹೋಗಿರುವುವೇನೋ' ಎಂದರು ವೆಂಕಟೇಶಯ್ಯ ನವರು.

'ನಾಳೆ ಊರು ಸೇರಿಕೊಳ್ಳುವೆವು. ಅಲ್ಲಿ ಯಾವ ಯಾವುದು ಏನೇನು ಗತಿಯಾಗಿ ಹೋಗಿದೆಯೊ? ಊರು ಬಿಟ್ಟು ಆಗಲೇ ಹತ್ತು ಹನ್ನೆರಡು ದಿನಗಳಾಗಿ ಹೋಯಿತು' ಎಂದರು ಯಜಮಾನರು."

ಕೂಡಿ ಪ್ರವಾಸ ಮುಗಿಸಿದ ಆ ಗೆಳೆಯರೊಬ್ಬೊಬ್ಬರ ಚಿತ್ರಕ್ಕೂ ಎಷ್ಟು ಉಚಿತವಾದ ಮುಕ್ತಾಯದ ಗೆರೆ!

'ಯಾತ್ರೆ ಮುಗಿಯಿತು'—ಅದರ ಸಂಗಡಲೇ ಓದುಗರಿಂದಲೂ ಸಹಜವಾಗಿ ನಿಟ್ಟುಸಿರು ಹೊರಬೀಳುತ್ತದೆ.

ಕನ್ನಡದಲ್ಲಿ ಪ್ರವಾಸ ಸಾಹಿತ್ಯ ತೀರ ಕಡಿಮೆ; ಬೆರಳುಗಳಲ್ಲೆಣಿಸುವಷ್ಟು ಪುಸ್ತಕಗಳು, ಅಷ್ಟೇ ಬಿಡಿ ಬರಹಗಳು. 'ಪಂಪಾಯಾತ್ರೆ' ಮೊದಲು ಪ್ರಕಟವಾದಾಗ ಅದರ ಮುನ್ನುಡಿಯಲ್ಲಿ ವಿ.ಸೀ.ಯವರು ಹೀಗೆ ಬರೆದಿದ್ದರು: 'ವರ್ಣನೆಯೊಂದಿಗೆ ನಮ್ಮ ಭಾವನೆಗಳನ್ನು ಬೆರಸಿ, ಮನಸ್ಸನ್ನು ಅದರೊಳಗೆ ಹೊಗಿಸಿ ಸ್ವಚ್ಛಂದವಾಗಿ ಬರೆದಿರುವವರು ಕನ್ನಡದಲ್ಲಿ ಕಮ್ಮಿ ಎಂಬ ವಿಶೇಷ ಸಂಗತಿಯು ಈ ಕೆಲಸದಲ್ಲಿ ನನಗೆ ಪ್ರವೃತ್ತಿಯನ್ನು ಹುಟ್ಟಿಸಿತು' ಎಂದು. ಸುಮಾರು ೨೮ ವರ್ಷಗಳ ಅನಂತರ ಇಂದಿಗೂ ಅದೇ 'ವಿಶೇಷ ಸಂಗತಿ' ಕನ್ನಡದಲ್ಲಿ ಹಾಗೆಯೇ ಉಳಿದಿದೆ. ಇದಕ್ಕೆ ಕಾರಣ ನಮಗೆ ಪ್ರವಾಸಕ್ಕೆ ಹೆಚ್ಚಿನ ಅನುಕೂಲವಿಲ್ಲದಿರುವುದೊ ಅಭಿರುಚಿಯಿಲ್ಲದಿರುವುದೊ ಇದ್ದಿರಬಹುದೆಂದು ಒಮ್ಮೆ ತೋರುತ್ತದೆ. ಅಲ್ಲದೆ ಪ್ರವಾಸಸಾಹಿತ್ಯರಚನೆಯೂ ಕಷ್ಟವಾದುದು. ಅದು ಕೇವಲ ಒಣ ವರದಿಯಾಗಿಬಿಡಬಹುದು ಇಲ್ಲವೆ ಭಾವೋದ್ರೇಕದಿಂದ ರಮ್ಯವಾದರೂ ಕಾಲ್ಪನಿಕ ಕತೆಯಾಗಿ ಹೋಗಬಹುದು. ಅತ್ತಲೂ ಬಾಗದೆ ಇತ್ತಲೂ ಒಲೆಯದೆ ತನ್ನ ಕ್ಷೇತ್ರವನ್ನು ಸಂಪೂರ್ಣವಾಗಿ ಅರಿತ, ತನ್ನ ಎಲ್ಲೆ ಕಟ್ಟುಗಳನ್ನು ಸ್ಪಷ್ಟವಾಗಿ ಗುರುತಿಸಿಕೊಂಡ 'ಪಂಪಾಯಾತ್ರೆ'ಯಂತಹ ಗ್ರಂಥ ವಿರಳವಾಗುವುದಕ್ಕೆ ಇದೇ ಕಾರಣವಿರಬಹುದು. ತನ್ನ ಅನುಭವಗಳನ್ನು ಸಹೃದಯವೇದ್ಯವೂ ಸಹೃದಯಪ್ರಿಯವೂ ಆಗುವಂತೆ ಬರೆಯಬೇಕೆನ್ನುವ ಪ್ರವಾಸಿಯಲ್ಲಿ ಮುಖ್ಯವಾಗಿ ರುಚಿಶುದ್ಧಿಯಿರಬೇಕಾಗುತ್ತದೆ. ವಸ್ತುಕಾಂತಿಯೊಡನೆ ಭಾವಕಾಂತಿ ಸಹಜವಾಗಿ ಚೆಂದವಾಗಿ ಹೊಂದಿಕೊಂಡಿರಬೇಕಾಗುತ್ತದೆ. ಈ ಹೊಂದಿಕೆಗೆ ಮೆಯ್‌ಗೊಟ್ಟು ತನ್ನನ್ನು ಅದಕ್ಕಾಗಿಯೇ ಉಪಸರ್ಜಿಸಿಕೊಳ್ಳುವ ಮಧ್ಯಮಮಾರ್ಗಗಾಮಿಯಾದ ಭಾಷೆಯಿರಬೇಕಾಗುತ್ತದೆ. ರುಚಿಶುದ್ಧಿ, ವಸ್ತುಭಾವಗಳ ಹೊಂದಾಣಿಕೆ, ಈ ಹೊಂದಾಣಿಕೆಗೆ ಅಳವಟ್ಟ ಭಾಷೆ—ಈ ಗುಣಗಳಿಂದಲೇ 'ಪಂಪಾಯಾತ್ರೆ' ಕನ್ನಡ ಸಾಹಿತ್ಯದಲ್ಲಿ 'ಏಕಮೇವ' ಗ್ರಂಥವಾಗಿದೆ.

'ಪಂಪಾಯಾತ್ರೆ'ಯನ್ನು ಕುರಿತು ಹಲವಾರು ಪುಟಗಳಲ್ಲಿ ಹೇಳಬೇಕಾದುದನ್ನು ಪೂಜ್ಯ ಬೇಂದ್ರೆಯವರು ತಮ್ಮ ಮುತ್ತಿನಂತಹ ನುಡಿಯಲ್ಲಿ ಹೀಗೆ ಹೇಳಿದ್ದಾರೆ:

'ಹಾಳಿಗೂ ಬಾಳುಂಟೆ?'
ಉಂಟು, ಉಂಟು!

* * *

'ಮೌನಕ್ಕೆ ಮಾತುಂಟೆ?'
ಉಂಟು, ಉಂಟು!

ಇದನ್ನು ಮೀರಿ ಎಷ್ಟು ಪುಟಗಳಲ್ಲಿ ತಾನೆ ನಾವು ಏನು ಹೇಳಿಯೇವು?

ಕೆ. ವಿ. ಸುಬ್ಬಣ್ಣ

ವಿ.ಸೀ. ಅವರ ಕವಿತೆಗಳಲ್ಲಿ ಶುಚಿ ಜೀವನ ದರ್ಶನ

'ಬಾಳನು ಶೋಧಿಸಿ ಶುಚಿಯನು ಬೆಳೆದರೆ
ಇಹವೇ ಅರಳದೆ ಪರವಾಗಿ' —ವಿ.ಸೀ.

'ಗೀತಗಳು', 'ದೀಪಗಳು', 'ನೆಳಲು-ಬೆಳಕು', 'ದ್ರಾಕ್ಷಿ-ದಾಳಿಂಬೆ' ಈ ಕವನಸಂಕಲನಗಳನ್ನು ಓದಿದಾಗ ಇದರ ಕರ್ತೃಗಳಾದ ವಿ.ಸೀ. ಅವರ ಮನೋಧರ್ಮದ ಸಮಗ್ರವಾದ ಒಂದು ಪರಿಚಯ ನಮಗೆ ಆಗುತ್ತದೆ. ಆ ಪರಿಚಯ ನಮಗೆ ನಿಜಕ್ಕೂ ಲಾಭದಾಯಕವಾಗುತ್ತದೆ. ಒಟ್ಟಿನಲ್ಲಿ ನನ್ನ ಅನುಭವಕ್ಕೆ ಬಂದ ಸಂಗತಿಯನ್ನು ಹೇಳುವುದಾದರೆ ಈ ಎಲ್ಲ ಕವನಸಂಕಲನ ಗಳ ಕವಿತೆಗಳನ್ನೂ ನುಡಿದ ಕವಿಮನೋಧರ್ಮ, ಸೋತ ಜೀವಕ್ಕೆ ಒಂದು ಧೈರ್ಯವನ್ನೂ ನೊಂದ ಜೀವಕ್ಕೆ ಒಂದು ಭರವಸೆಯನ್ನೂ ಕೊಡಬಲ್ಲ ಸತ್ವ ವುಳ್ಳದ್ದು ಎನಿಸುತ್ತದೆ. ಜೀವನದ ನಾನಾ ವಿಧವಾದ ನೋವು–ನಲಿವು ಗಳಲ್ಲಿಯೂ, ಕಷ್ಟಸುಖಗಳಲ್ಲಿಯೂ, ಬೇನೆಬೇಸರಗಳಲ್ಲಿಯೂ ಕಸಮುಸುರೆ ಗಳಲ್ಲಿಯೂ ಸಿಲುಕಿ ಸೊರಗಿದ ಜೀವಕ್ಕೆ ದಾರಿದೀಪವಾಗಿ ಈ ಕವಿಹೃದಯ ಒಂದು ಆಸೆಯ ಜ್ಯೋತಿಯನ್ನು ಕೊಡುತ್ತದೆ ಎಂದು ಧೈರ್ಯವಾಗಿ ಹೇಳಬಲ್ಲೆ. ಆದ್ದರಿಂದಲೇ ವಿ.ಸೀ. ಅವರ ಕೃತಿಗಳಲ್ಲಿ ಶುಚಿ ಜೀವನ ದರ್ಶನ ಎಂದು ಅವರ ಕವಿಮನೋಧರ್ಮವನ್ನು ಗುರುತಿಸಿ ಇಲ್ಲಿ ನಾನು ಆ ದರ್ಶನದ ಹಲವು ಮುಖ ಗಳ ಪರಿಚಯ ಮಾಡಿಕೊಡಬೇಕೆಂದು ಆಶಿಸಿದ್ದೇನೆ. ಮುಖ್ಯವಾಗಿ ಪರತತ್ವ ಚಿಂತನ, ಆತ್ಮಸಾಂತ್ವನ, ಪ್ರೇಮಾರಾಧನ, ರಾಷ್ಟ್ರಾಭಿಮಾನ ಎಂಬ ಈ ನಾಲ್ಕು ದೃಷ್ಟಿಯಿಂದ ಶುಚಿ ಜೀವನ ದರ್ಶನದ ಪರಿಚಯವನ್ನು ನನಗೆ ತಿಳಿದ ಮಟ್ಟಿಗೆ ಇಲ್ಲಿ ಕೊಡಲು ಪ್ರಯತ್ನಿಸಿದ್ದೇನೆ.

೧

ಮೊಟ್ಟಮೊದಲು ವಿ.ಸೀ. ಅವರ ಕವಿತೆಗಳಲ್ಲಿ ಕಾಣಬರುವ ಪರತತ್ವ ಚಿಂತನವನ್ನು ಕುರಿತು ನೋಡುವುದು ಯುಕ್ತ. ಸಾಮಾನ್ಯವಾಗಿ ಎಲ್ಲ ಕವಿ

ಗಳೂ ಒಂದು ಕಡೆ ಪ್ರಕೃತಿಯ ಲಲಿತವೂ ರುದ್ರವೂ ಆದ ಬಗೆಬಗೆಯ ಚಿತ್ತಾಕರ್ಷಕವಾದ ವೈಚಿತ್ರ್ಯಗಳನ್ನು ಕ್ಷಣಕ್ಷಣವೂ ಕಣ್ತೆರೆದು ನೋಡುತ್ತಿರುತ್ತಾರೆ. ಇನ್ನೊಂದು ಕಡೆ ಸುತ್ತಣ ಸಮಾಜದ, ಜನಜೀವನದ ನಾನಾ ವಿಧವಾದ ಸುಖದುಃಖಗಳ ವ್ಯಾಪಾರಗಳನ್ನು ಅನುಭವಕ್ಕೆ ತಂದುಕೊಳ್ಳುತ್ತಿರುತ್ತಾರೆ. ಮತ್ತೊಂದು ಕಡೆ ತಮಗೆ ಮಾತ್ರ ಅನುಭವಕ್ಕೆ ಬಂದ ಸ್ವಯಂ ವೇದ್ಯವಾದ ತುಂಬ ವೈಯಕ್ತಿಕವೂ, ತೀರ ಹೃನ್ನಿಹಿತವೂ ಆದ ಅನುಭವವಿಶೇಷಗಳನ್ನು ಕುರಿತು ಧೇನಿಸುತ್ತಿರುತ್ತಾರೆ. ಇವುಗಳೆಲ್ಲದರ ಪರಿಣಾಮವಾಗಿ, ಈ ಎಲ್ಲ ವ್ಯಾಪಾರಗಳ ತಳಹದಿಯಾಗಿ ಯಾವುದೋ ಒಂದು ಶಕ್ತಿ ಅಡಗಿದೆ. ಆ ಶಕ್ತಿ ಸರ್ವತಂತ್ರ ಸ್ವತಂತ್ರವಾದದ್ದು, ಅಜೇಯವಾದದ್ದು, ಅಘಟನ ಘಟನಾ ಸಾಮರ್ಥ್ಯವುಳ್ಳದ್ದು, ಸರ್ವವ್ಯಾಪಕವಾದದ್ದು ಎಂಬ ವಿಷಯ ಮನಸ್ಸಿಗೆ ಖಚಿತವಾಗುತ್ತಾ ಬರುತ್ತದೆ. ‘ ತೇನ ವಿನಾ ತೃಣಮಪಿ ನ ಚಲತಿ ’ ಎಂಬ ಮಂತ್ರದ ಅರ್ಥ ಅನುಭವವೇದ್ಯವಾಗುತ್ತಾ ಹೋಗುತ್ತದೆ. ಈ ಘಟ್ಟದಲ್ಲಿ ಕವಿಯಾದವನು ಆ ಶಕ್ತಿಯನ್ನು ಹೆಚ್ಚುಹೆಚ್ಚಾಗಿ ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಅದರ ಮಹಿಮೆಯನ್ನು ಹಾಡುತ್ತಾನೆ. ವೈಭವವನ್ನು ಕೊಂಡಾಡುತ್ತಾನೆ. ಅದರ ಕರುಣೆಯನ್ನು ಬೇಡುತ್ತಾನೆ. ಆ ಪರವಸ್ತುವನ್ನು, ಆ ಪರಾಶಕ್ತಿಯನ್ನು ಇನ್ನಿಲ್ಲದ ಶ್ರದ್ಧಾಭಕ್ತಿಗಳಿಂದ ನೋಡುತ್ತಾನೆ, ಓವುತ್ತಾನೆ. ವಿ.ಸೀ. ಅವರ ಕೃತಿಗಳಲ್ಲಿಯೂ ಇಂತಹ ಪರಾಶಕ್ತಿಗೆ ನಿವೇದಿತವಾದ ಗೀತಕುಸುಮಗಳನ್ನು ನಾವು ಕಾಣುತ್ತೇವೆ. ಆ ಕುಸುಮಗಳ ಸೌರಭ, ಸೌಕುಮಾರ್ಯ, ಸೌಂದರ್ಯ, ಲಾಲಿತ್ಯಾದಿಗಳಿಗೆ ಬೆರಗಾಗುತ್ತೇವೆ. ಇಂತಹ ಗೀತಕುಸುಮಗಲ್ಲಿ ಪ್ರಳಯ ತಾಂಡವ, ಪ್ರಶ್ನೆ, ಆಸೆ, ಜೀವವಾಹಿನಿ, ಮೊರೆ, ಭ್ರಮೆ, ಶಿಖರದಲ್ಲಿ, ಪರತತ್ವ, ನಿನ್ನ ಕೃಪೆ, ಯಾನ, ಕ್ಷೇಮಕಾರಿ, ನಿಲ್ಲಿಸಮ್ಮ, ಪ್ರತಿಧ್ವನಿ, ಋತುಗಳ ಹೇಳಿಕೆ, ನನ್ನ ನಿನ್ನ ಕಾರ್ಯಗಳು, ಪ್ರಾರ್ಥನೆ, ಶಿವರಾತ್ರಿ, ನೈವೇದ್ಯ, ದೇವನ ಬರವು, ಕಸ್ಮೈದೇವಾಯ, ಚಿತ್ರ, ಶಿವನ ಕೋಪ, ಅರ್ಧನಾರೀಶ್ವರ, ಶಿವ, ದೀಪಗಳು, ಶಬರಿ, ಗಂಗಾಪೂಜೆ, ಕನಸು ಮುಂತಾದ ಕವನಗಳು ಮುಖ್ಯವಾದವು. ಇವುಗಳಲ್ಲಿ ಪರತತ್ವಚಿಂತನದ ಮತ್ತು ಇಹಪರ ಸಂಬಂಧದ ಹತ್ತಾರು ಪರಿಗಳನ್ನು ನಾವು ಕಾಣುತ್ತೇವೆ. ‘ ಈ ಜಗದ ವ್ಯಾಪಾರವು ಚಿತ್ರವಾಗಿದೆ. ಇದರ ಸಾರವೂ ಅಷ್ಟೇ ಚಿತ್ರವಾಗಿದೆ. ಈ ಭೂಮಿ ಮೋಕ್ಷಕ್ಕೆ

ಒಂದು ಸಾಧನರಂಗದಂತೆ ಇದೆ. ಇಲ್ಲಿ ಅಕ್ಷಯದ ಆನಂದಕ್ಕೆ ಅವಕಾಶವಿದೆ. ಮೃದುಮಧುರವಾದ ರೀತಿಯಲ್ಲಿ ಈ ಜಗವು ನಮ್ಮನ್ನು ಮೋದಗೊಳಿಸುತ್ತಿದೆ' ಎಂದು ಕವಿ ಒಮ್ಮೆ ಹೇಳಿ ಅದೇ ಉಸುರಿನಲ್ಲಿ, 'ಜಗವು ಸುಂದರವಾದರೂ ಅದನ್ನು ಅನುಭವಿಸುವ ಒಂದು ಚಿತ್ತವೃತ್ತಿ ನಮ್ಮಲ್ಲಿ ಇಲ್ಲ' ಎಂದು ಕೊರಗಿದ್ದಾರೆ. 'ಕಣ್ಣೆದುರಿನ ಸೃಷ್ಟಿಯ ಸೌಂದರ್ಯವನ್ನು ನೋಡಿ ಸುಖಿಸುವುದಕ್ಕಾಗದೆ ಹೃದಯದ ಉದ್ವೇಗದಿಂದ ಯಾವ ಯಾವುದನ್ನೋ ನೆನೆದು ನಾವು ಕೊರಗುತ್ತೇವೆ' ಎಂದು ನೊಂದು ನುಡಿದಿದ್ದಾರೆ. ತಮ್ಮ ಮನಸ್ಸು ಜೀವನದ ಅನಂತತೆಯನ್ನು ನೆನೆದಾಗ ತಮಗೆ ಹೊಳೆದ ಒಂದು ಭಾವನೆಯನ್ನು ಇನ್ನೊಂದು ಕವನದಲ್ಲಿ ಮೂಡಿಸಿದ್ದಾರೆ, 'ಜೀವ ಒಂದು ಅನಂತವಾಹಿನಿ; ಇದರ ಆಳವನ್ನು ಕಂಡವರಾಗಲಿ ಮೂಲವನ್ನು ಅರಿತವರಾಗಲಿ ಯಾರೂ ಇಲ್ಲ. ಈ ಜೀವವಾಹಿನಿ ಯಾವ ಸಾಗರಕ್ಕೆ ಎಲ್ಲಿ ಹೋಗಿ ಸೇರುತ್ತದೆಯೋ ಯಾವ ಕಡೆ ಧುಮ್ಮಿಕ್ಕುತ್ತ ಎಲ್ಲಿ ಸುಳಿಯುತ್ತದೆಯೋ, ಯಾವ ದೋಣಿಯನ್ನು ಎಳೆದು ದಡಕ್ಕೆ ನೂಕುತ್ತದೆಯೋ, ಯಾವ ನಾವಿಕನು ಇದನ್ನು ದಾಟಲು ತಿಳಿದಿದ್ದಾನೆಯೋ?' ಎಂದು ವಿಚಾರಮಗ್ನರಾಗಿದ್ದಾರೆ. ಹೀಗೆಯೆ 'ಈ ಲೋಕ ಎನ್ನುವುದು ನಿಜಕ್ಕೂ ಯಾವುದು? ಅರಿವೋ, ಮಾಯೆಯ ಮಂಕೋ, ಭ್ರಮೆಯೋ, ಬೇಸರವೋ, ಬರಿಯ ನೆಳಲ ಬೇಂಟೆಯೋ, ಪರ ಎನ್ನುವುದೊಂದು ಇದೆಯೋ, ಇಲ್ಲವೋ' ಎಂಬ ಒಂದು ಭ್ರಮೆ ಕವಿಯ ಮನಸ್ಸಿನ ಶಾಂತಿಯನ್ನು ಕದಡಿದ್ದೂ ಉಂಟು. ಆದರೆ ಈ ಚಿತ್ತದ ಭ್ರಮೆ ಸ್ವಲ್ಪಕಾಲ ಮಾತ್ರ ಇರುತ್ತದೆ. ಮರುಗಳಿಗೆಗೆ ಚಿತ್ತ ನಲಿಯುತ್ತದೆ, ಮೊರೆಯುತ್ತದೆ, ಕುಣಿಯುತ್ತದೆ, ಮೆರೆಯುತ್ತದೆ, ಹೊಳೆಯುತ್ತದೆ, ಬಿರಿಯುತ್ತದೆ. ಈ ಅರ್ಥ ಬರುವಂಥ 'ಚಿತ್ತ' ಎಂಬ ಒಂದು ಕವನವನ್ನು ಈ ಕವಿ ಹಾಡಿದ್ದಾರೆ. ನಗುವ ಹಗಲು, ಮುಗಿಲ ಮೋಹರ, ಬಗೆ ಬಗೆಯ ಖಗ ಗಣ, ಸೂರ್ಯ ಚಂದ್ರರ ಬಿಸಿಲು ಬೆಳುದಿಂಗಳುಗಳು, ಭಾಮೆಯರ ವೈಯಾರ, ಸರಸಿಗಳ ಹೂದಳ, ತಂಬೆಲರ ತೀಟ ಮುಂತಾದುವುಗಳನ್ನು ನೋಡಿ ಚಿತ್ತ ಮಾರುಹೋಗುತ್ತದೆ. ಪ್ರಕೃತಿಯಲ್ಲಿಯೂ ಜನಜೀವನಗಳಲ್ಲಿಯೂ ಕಾಣಬರುವ ಸುಖ, ಸೌಂದರ್ಯಗಳ ಲಾಸ್ಯದಲ್ಲಿ ಚಿತ್ತ ತಾನೂ ಬೆರೆತು ಆ ನಾಟ್ಯೋನ್ಮಾದದಲ್ಲಿ ಲೀನವಾಗುತ್ತದೆ. ಹೀಗೆ ಮನಸ್ಸು ಸೃಷ್ಟಿಯನ್ನೂ, ಜೀವನವನ್ನೂ ನೋಡಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ

ಇವುಗಳ ಅಂತರಾರ್ಥವನ್ನು ಅರಿಯಲು ತೊಡಗಿದಾಗ ಪರವೂ, ಪರಮತತ್ವದ ಸಾರವೂ ಯಾವುದೆನ್ನುವುದು ಮನಸ್ಸಿಗೆ ಹೊಳೆಯುತ್ತದೆ. ಕುಹಕ ಭಾವನೆಗಳು ಎದ್ದು ತನುವನ್ನು ತಲ್ಲಣಗೊಳಿಸಿದಾಗ ವಿಹಿತಮಾರ್ಗವನ್ನು ತೋರಿ ಪೊರೆವ ದೈವವೊಂದಿದೆ. ಅದೇ ಪರ; ಅದೇ ಪರಮತತ್ವ. ಅಹಿತ ಸಂತತಿಯ ಜಾಲ ವೊನೆಗೊಂಡು ಮುಸುಕಿದಾಗ ಮಹಿಯ ಮಂಗಳವನ್ನು ಬಯಸಿ, ಮರುಗುವ ಆತ್ಮವೊಂದಿದೆ—ಅದೇ ಪರ; ಅದೇ ಪರಮತತ್ವ. ಕಣ್ಣುಗಳಿಗೆ ಕಾಣದಂತೆ ಎಂದಿಗೂ ಮರೆಯಾಗಿ ಮಂಗಳದ ಕಾರ್ಯಗಳಿಗೆ ಆಧಾರವಾಗಿ ತುಂಗಬಲಯುತ ರಾದವರಿಗೆ ಬಲದಾತ್ಮವಾಗುತ್ತ ಉತ್ತುಂಗಮಾನಸರಿಗೆ ನೆರವಾಗುತ್ತಾ ಇರುವ ಯಾವ ಶಕ್ತಿಯಿದೆಯೋ ಅದೇ ಪರ; ಅದೇ ಪರಮತತ್ವ. ಈ ತತ್ವವನ್ನು ತಿಳಿದವನು ನರರ ಎರೆಯ ಆಗಬಲ್ಲನು. ಇವನೇ ಅರಿವಿನ ಗಿರಿಯ ಶಿಖರವನ್ನು ಏರಬಲ್ಲನು. ಮರವಿನಲ್ಲಿಯೂ ನಿದ್ರೆಯಲ್ಲಿಯೂ ತಮದ ಅರೆತಿಳಿವಿನಲ್ಲಿಯೂ ಧರೆಯೆಲ್ಲ ಮುಳುಗಿರುವಾಗ ಇವನೊಬ್ಬನೇ ಅರಿವಿನ ಗಿರಿಯ ಶಿಖರಕ್ಕೆ ಹೋಗು ತ್ತಾನೆ. ಇವನು ಹಾರುವ ಹಕ್ಕಿಗಳ ಜತೆಗಾರ, ಪಾರವಿಲ್ಲದ ಪ್ರೇಮ ಇವನ ಮನವನ್ನು ಅರಳಿಸುತ್ತದೆ. ಇವನು ಏರುತ್ತೇರುತ್ತಾ ವೈಮರೆತು ಹಾಡು ತ್ತಾನೆ ಎಂದು ವಿ.ಸೀ. ಪರತತ್ವವನ್ನು ಅರಿತವನ ನಿಲುವಿನ ಚಿತ್ರವೊಂದನ್ನು ನೆನೆದಿದ್ದಾರೆ.

ಜೀವನದ ಯಾವುದೋ ಒಂದು ಸನ್ನಿವೇಶದಲ್ಲಿ ಭಗವತ್ಕೃಪೆ ತಾನಾಗಿಯೆ ಬಂದು ನಮ್ಮನ್ನು ಸೋಂಕುತ್ತದೆ. ನಮ್ಮಲ್ಲಿ ಯಾವ ಅಂತಹ ಮಹಿಮೆಯಿಲ್ಲ ದಿದ್ದರೂ, ನಮ್ಮನ್ನೇ ಹುಡುಕಿಕೊಂಡು ಪರದೈವ ಬಂದು ಕೃಪೆದೋರುತ್ತದೆ, ಎಂಬ ಅರ್ಥದ ಒಂದು ಕವಿತೆ 'ನಿನ್ನ ಕೃಪೆ'.

'ಒಂದು ದಿನ ನಾ ನಿನ್ನ ಭಜಿಸಿದವನಲ್ಲ
ಒಂದು ದಿನ ಹೂಗಳಿಂ ಸಿಂಗರಿಸಲಿಲ್ಲ,
ಕಂಗಳಿದ್ದರು ಕಾಣದಂಥನೋಲ್ ಇರುತಿದ್ದೆ
ನಿಂದಿನೀ ಕರುಣೆಗೆ ಕಾರಣವನರಿಯೆ'

ಈ ಭಗವತ್ಕೃಪೆ ಕಣ್ಮುಚ್ಚಿ ಕಣ್ ತೆಗೆಯುವಷ್ಟರಲ್ಲಿ ಮತ್ತೆ ಮಾಯ ವಾಗುತ್ತದೆ. ಕಣ್ಣುಮುಚ್ಚಾಲೆಯ ಆಟದಂತೆ ಪರವಸ್ತು ನಮ್ಮನ್ನು ಆಡಿಸು ತ್ತದೆಯೋ ಎನಿಸುತ್ತದೆ. ನಮ್ಮ ಧ್ಯೇಯ, ಆದರ್ಶ ಮುಂತಾದುವುಗಳ ಕಡೆಗೆ

ನಮ್ಮ ದೋಣಿ ಸಾಗುವುದೇ ಕಷ್ಟವಾಗುತ್ತದೆ. 'ದೋಣಿಯೊಳು ಕುಳಿತಾನು ಬಲುದೂರ ಬಂದಿಹೆನು; ಕಾಣಿಸೆಲ್ಲಿಹುದೋ ತೀರ ಇನ್ನು ಮುಂದೆ' ಎಂಬ ಹಾಡಿನಲ್ಲಿ ಪಯಣಮಧ್ಯದ ಕಷ್ಟಕೋಟಿಗಳನ್ನು ಕವಿ ಬಹು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಇದು ತಿಳಿದ ದೇಶ ಅಲ್ಲ; ಅರಿತ ಮಾರ್ಗ ಅಲ್ಲ; ಉಳಿದ ನಮ್ಮವರೆಲ್ಲ ಅಲ್ಲೇ ನಿಂತರು. ನಾಲ್ಕು ದಿಕ್ಕಿನಲ್ಲೂ ಜಲರಾಶಿ ಹಬ್ಬಿದೆ. ನನ್ನ ದೋಣಿಯೋ ಬಳುಕಿ ಬೀಳುತ್ತಾ, ಏಳುತ್ತಾ ಹೋಗುತ್ತಿದೆ ಎಂದು ಮುಂತಾಗಿ ಹಾಡಿ, ಕವಿ ಕೊನೆಗೆ ಹೀಗೆ ಹೇಳಿದ್ದಾರೆ :

'ಬಂದುದಕೆ ಭಯವಡದೆ ನಂಬಿ ಮುಂಬರಿಯುವೆನು
ಅಂಬಿನಂದದಿ ನೇರ ಗುರಿಯನರಸಿ
ಕಂಡರದ ನೋಡುವೆನು; ಇಲ್ಲದಿರೆ ಕಳ್ತಲೆಯ
ನುಂಗಿನೊಳಗಾಂ ಸೇರಿ ಅಳಿಸಿ ಪೋಗುವೆನು.'

ಇಂತಹ ಸಂಕಷ್ಟಸಮಯದಲ್ಲಿ ವೀರ ನಿರ್ಧಾರದಿಂದ ಮುಂಬರಿವ ಜೀವಕ್ಕೆ ಮತ್ತೆ ಪರವಸ್ತುವಿನ ಕೃಪಾಕಟಾಕ್ಷ ಲಭಿಸುತ್ತದೆ. 'ಕೊನೆಗೆ ದರುಶನವಿತ್ತೆಯೈ ಕ್ಷೇಮಕಾರಿ. ಇನಿತು ದಿನ ಕೊರಗಿ ನಾ ತಪಿಸುತಿದ್ದುದಕೆ' ಎಂದು ಕವಿ ಹಾಡುತ್ತಾರೆ. 'ಜೀವನದ ಕಷ್ಟಗಳು ದೇಹವನ್ನು ಸುಡುತ್ತಿದ್ದುವು. ಆಗ ದೇವಾ, ನೀನು ಅಮೃತಧಾರೆಗಳನ್ನೇ ಕರೆದೆ; ನನ್ನ ಹಾಗೆ ಇರುವವರು ನಿನಗೆ ಇನ್ನು ಎಷ್ಟು ಜನರೋ? ನನಗಿಂತಲೂ ಆರ್ತರೂ, ಕಾತರರೂ, ನಿರ್ಗತಿಕರೂ ಯಾರು ಯಾರು ಇರುವರೋ! ಆದರೂ ನನ್ನ ಬೇನೆಯನ್ನು ಹರಸುವುದಕ್ಕಾಗಿ ನೀನು ಕಾಪಾಡಿದೆ. ಶಾಂತಿಗಾಗಿ ನಾನು ನೆಲವನ್ನು ಬಿಡಲಿಲ್ಲ, ವಿಶ್ರಾಂತಿಗಾಗಿ ರಂಗದಿಂದ ಸರಿಯಲಿಲ್ಲ; ಎಲ್ಲವನ್ನೂ ನೀನು ತಿಳಿದಿದ್ದೀಯೆ. ಒಂದು ಸಲ ಮಧುರ ಗೀತೆಯ ಹಾಗೆ ನಿನ್ನ ದನಿ ಕೇಳಿಸುತ್ತದೆ. ಒಂದು ಸಲ ಕೊಂಬಿನ ಕೂಗಿನಂತೆ ಅದೇ ದನಿ ಮೊಳಗುತ್ತದೆ........ಇಂತಹ ನೀನು ಬಂದು ದರುಶನವಿತ್ತು ನಮ್ಮ ನಂಬುಗೆಯನ್ನು ಉಳಿಸಿದ್ದೀಯೆ' ಎಂದು ಕವಿ ಹಾಡಿದ್ದಾರೆ.

ಆದರೆ ಒಮ್ಮೊಮ್ಮೆ ಎಂಥವನಿಗಾದರೂ ಕೂಡ ದೇವರು ಒಬ್ಬನು ಇರುವನೋ ಇಲ್ಲವೋ ಎಂಬ ಶಂಕೆ ತಲೆದೋರದಿರದು. 'ಪ್ರತಿಧ್ವನಿ' ಎಂಬ ಕವಿತೆಯಲ್ಲಿ ಈ ಶಂಕೆಯ ಒಂದು ಛಾಯೆಯನ್ನು ನಾವು ಕಾಣುತ್ತೇವೆ.

'ಭಾವದುದ್ರೇಕದಾವೇಶದಲಿ ಕೂಗಿ
ಕಾವ ದೇವನು ಒರ್ವನಿರ್ಪನೋ ಎನಲು
ಆವ ದೇವನು ಒರ್ವನಿರ್ಪನೋ ಎಂಬುದು
ಕರುಣೆಯೇನೆಂದೆನಲು ರುಣೆಯೆಂಬುದು.'

ಈ ವಿಧವಾದ ಚಿತ್ತವೃತ್ತಿಯ ಇನ್ನೊಂದು ಮುಖವನ್ನು 'ಕಸ್ಮೈ ದೇವಾಯ' ಎಂಬ ಕವಿತೆಯಲ್ಲಿ ನಾವು ಕಾಣುತ್ತೇವೆ. ಈ ಪರತತ್ವಚಿಂತನದ ಗುಂಪಿಗೆ ಸೇರುವ ಕವನಗಳಲ್ಲಿ 'ಕಸ್ಮೈ ದೇವಾಯ' ತುಂಬ ಮುಖ್ಯವಾದ್ದು. ಚಾರಿತ್ರಿಕವಾಗಿಯೂ ವೈಜ್ಞಾನಿಕವಾಗಿಯೂ ಒಂದೊಂದು ವಿಷಯವನ್ನೂ ತೋಲನ, ಪರೀಕ್ಷೆ, ಪ್ರಯೋಗಗಳಿಗೆ ಒಳಪಡಿಸಿ ನೋಡುವ ಈ ಶತಮಾನದ ಒಂದು ಚಿಕಿತ್ಸಕಬುದ್ಧಿ ಇಲ್ಲಿ ವ್ಯಕ್ತವಾಗಿದೆ. ಅಂದಿನ ದೇವರುಗಳೆಲ್ಲರೂ ಮಡಿದು ಉರುಳಿಹೋಗಿದ್ದಾರೆ; ಇಂದ್ರ, ವರುಣ, ಧನದ, ಮಿತ್ರ, ಪೂಷಣ ಮುಂತಾದ ವೇದಗಳ ಕಾಲದ ದೇವತೆಗಳೆಲ್ಲ ತಮ್ಮ ಅಗ್ಗಳಿಕೆಯನ್ನೂ ಔನ್ನತ್ಯವನ್ನೂ ಕಳೆದುಕೊಂಡಿದ್ದಾರೆ ಎಂದು ಕವಿ ಕವಿತೆಯ ಪ್ರಾರಂಭದಲ್ಲಿ ನುಡಿದಿದ್ದಾರೆ. ಮನುಷ್ಯನ ಅತಿ ತೀಕ್ಷ್ಣವಾದ ಮನಸ್ಸಿನ ವಿಮರ್ಶೆಯ ಮೊನೆಯ ಕತ್ತಿಯ ಘಾತದಲ್ಲಿ ಈ ದೇವತೆಗಳೆಲ್ಲರೂ ನೊಂದು ಸೋಲನ್ನೊಪ್ಪಿಕೊಂಡಿದ್ದಾರೆ. ಧ್ಯಾನಪೂಜೆಗಳು ತಮಗೆ ಇನ್ನು ಸಲ್ಲವೆಂದು ಶರಣು ಬೇಡಿದ್ದಾರೆ. ಆಶ್ಚರ್ಯ ದಿಂದಲೂ ಮೋಹದಿಂದಲೂ ಆಕಾಶವನ್ನು ನೋಡುತ್ತ ಉಚ್ಚ ಕಂಠದಿಂದ ಹಾಡಿದ ಆ ಭಕ್ತರುಗಳು ಅಳಿದಿದ್ದಾರೆ. ಇಂದಿನ ದಿನ ನಯದಿಂದಲೂ, ಭಯ ದಿಂದಲೂ ಆ ಇಂದ್ರಾದಿದೇವತೆಗಳನ್ನೊಲಿಸುವ ಸ್ಥಿತಿ ನಮ್ಮ ಜನರ ಮನಸ್ಸಿ ನಿಂದ ತೊಲಗಿಹೋಗಿದೆ. ಸಮುದ್ರದ ಅಪಾರ ಜಲರಾಶಿಯನ್ನೂ ಭೋರ್ಗರೆ ಯುವ ಆರ್ಭಟೆಯನ್ನೂ ಸುರನೀಲ ನೀಲಿಮತೆಯನ್ನೂ ನೋಡಿ ಅದರ ಅಪಾರ ಗಂಭೀರತೆಗೆ ಬಾಗಿ ಮಾಡುತ್ತಿದ್ದ ವರುಣಪೂಜೆ ಈ ಹೊತ್ತು ಕಾಣಿಸು ವುದಿಲ್ಲ. ಹಾಗೆಯೇ ಆಕಾಶಕ್ಕೆ ಮುಖಮಾಡಿ ಹೂವು ಎಲೆಗಳನ್ನು ಎರಚುತ್ತಾ ಪರ್ಜನ್ಯ ಕೃಪೆದೋರು ಎಂದು ಈಗ ಯಾರೂ ಮೊರೆಯಿಡುವುದಿಲ್ಲ. ಗುಡುಗಿನ ಘರ್ಜನೆಯನ್ನು ಕೇಳಿ ನಡುಗುವುದಿಲ್ಲ; ಬಲಿಯನ್ನು ಅರ್ಪಿಸುವುದಿಲ್ಲ. ಈಗ ಯಾರೂ ರುದ್ರನ ರೌದ್ರವನ್ನು ಈ ರೀತಿ ಇಳಿಸುವುದಕ್ಕೆ ಪ್ರಯತ್ನಿಸುವುದಿಲ್ಲ. ಇದೇ ರೀತಿಯಲ್ಲಿ, ಹೇ ಪೂಷನೆ, ನಮ್ಮ ಗೋವುಗಳನ್ನು ಕಾಪಾಡು, ಅವುಗಳ

ತಳಿಯನ್ನು ಹೆಚ್ಚಿಸು, ದವಸಧಾನ್ಯಗಳನ್ನು ಕೊಡು, ಎಂದು ಪೂಷನನ್ನು ಯಾರೂ ಬೇಡುವುದಿಲ್ಲ. ಧನಕನಕವಾಹನಾದಿಗಳನ್ನು ಕೊಡು ಎಂದು ಧನದನನ್ನು ಯಾರೂ ಶರಣು ಹೋಗುವುದಿಲ್ಲ. ಹೀಗೆಂದು ಕವಿ ಈ ಕವನದ ಪ್ರಥಮ ಭಾಗದಲ್ಲಿ ವೇದಕಾಲದ ದೇವತೆಗಳ ವೈಭವವನ್ನೂ, ಆ ದೇವತೆಗಳನ್ನು ಒಲಿಸಿಕೊಳ್ಳುವ ಅಂದಿನ ಭಕ್ತರ ವಿಧಾನಗಳನ್ನೂ ನೆನೆದು ಈಗ ಆ ದೇವತೆಗಳೂ ನಮ್ಮಿಂದ ಮರೆಯಾಗಿವೆ ಎಂದು ಹೇಳಿದ್ದಾರೆ.

ಎರಡನೆಯ ಭಾಗದಲ್ಲಿ 'ಬೇರೆಯ ದೇವತೆಗಳು ನಮ್ಮ ಜನಮನದ ಮೇಲೆ ದಾಳಿಯಿಟ್ಟರು. ಬ್ರಹ್ಮ, ವಿಷ್ಣು, ಮಹೇಶ್ವರಾದಿಗಳು ಮುಂದೆ ಐದು ಸಾವಿರ ವರ್ಷ ಆಳಿದರು. ಇಂದು ಇವರ ಆಳ್ವಿಕೆಗೂ ಚ್ಯುತಿಬಂದಿದೆ' ಎಂದು ಹೇಳಿದ್ದಾರೆ. ಹಳೆಯ ಕಾಲದ ತಂದೆ ತಾತಂದಿರ ದೇವರುಗಳೆಲ್ಲ ಅಳಿದು ಹೋಗುವ ಕಡಿದು ಕಾಲ ಬರುತ್ತಿದೆ, ಎಂದು ಈ ವೈಜ್ಞಾನಿಕ ಯುಗದ ಮಾನವನ ಚಿತ್ತವೃತ್ತಿಗೆ ದೇವರ ಅಸ್ತಿತ್ವದಲ್ಲಿ ಇರುವ ಶ್ರದ್ಧಾಭಕ್ತಿಗಳ ಬಲಾಬಲಗಳನ್ನು ತೂಗಿಹೇಳಿದ್ದಾರೆ. ಕೊನೆಯಲ್ಲಿ ಬರುವ ಎರಡು ಪದ್ಯಗಳಲ್ಲಿ, ಅತ್ಯುತ್ತಮವಾದ, ಅರ್ಥಗರ್ಭಿತವಾದ, ಈ ವಿಷಯದಲ್ಲಿ ಇಷ್ಟು ಮಾತ್ರ ಹೇಳಬಹುದು ಎನ್ನುವಂತಹುದಾದ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ :

'ಪೋಪವರ ಪದವಿಗಳಿಗಿನ್ನಾರು ಬಂದಪರೊ
ಕೋಪಿಗಳೊ, ಕರುಣಿಗಳೊ, ತಿಳಿಪ ಕೋವಿದರೊ
ಆರನರಸುತೆ ಹೋಗಿ ಹವಿಸನೀಯಲುಬೇಕೊ
ಆವ ಶೀಲವನವರು ಜಗದಿ ಬಿತ್ತುವರೊ

ಇಲ್ಲದಿರೆ ಬೇರಾವ ದೇವರೇ ಬಾರರೊ
ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ
ಇಲ್ಲದಿರೆ ಮಾನವನ ಸುಗುಣವೇ ದೈವವೊ
ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ!'

ಇದು ಪ್ರಜಾಪ್ರಭುತ್ವದ ಯುಗ. ಪ್ರಜಾಸ್ವಾತಂತ್ರ್ಯದ ಯುಗ. ರಾಜಕೀಯ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಸರ್ವಸಮದೃಷ್ಟಿ ಹೃದಯವೈಶಾಲ್ಯ ಮುಂತಾದುವುಗಳು ವ್ಯಕ್ತವಾಗಿರುವಂತೆ ಧಾರ್ಮಿಕಕ್ಷೇತ್ರದಲ್ಲಿಯೂ ಇವೇ ಗುಣಗಳು

ವ್ಯಕ್ತವಾದರೆ ಆಶ್ಚರ್ಯವೇನಿಲ್ಲ. ಮಾನಸಿಕವ್ಯವಹಾರದಲ್ಲಿಯೂ ನಮಗೆ ಸ್ವಾತಂತ್ರ್ಯ ಬೇಕು. ವೇದ, ಧರ್ಮ, ಶಾಸ್ತ್ರ, ಮತ, ಪುರಾಣ ಮುಂತಾದ ಸಂಬಂಧಗಳಲ್ಲಿ ಕೂಡ ನಮಗೆ ತೋರುವ ಸಂಶಯವನ್ನು ನಾವು ಹೊರಗೆಡಹ ಬೇಕು. ಚರ್ಚೆಮಾಡಿ ಹೊಸ ಹೊಸ ತತ್ವಗಳನ್ನು ಕಂಡುಹಿಡಿಯಬೇಕು. ಇಂತಹ ಒಂದು ವೈಜ್ಞಾನಿಕವೂ ಚಾರಿತ್ರಿಕವೂ ಆದ ದೃಷ್ಟಿ ಈ ಕವಿತೆಯಲ್ಲಿ ವ್ಯಕ್ತವಾಗಿದೆ. ಆಲೋಚನಾಸ್ವಾತಂತ್ರ್ಯ ಇಂದಿಯ ಶತಮಾನದ ಉದ್ಘೋಷ. ಈ ಘೋಷದ ಒಂದು ಅಬ್ಬರ 'ಕಸ್ಮೈ ದೇವಾಯ'ದಲ್ಲಿ ತರಂಗತರಂಗವಾಗಿ ಮೊಳಗುವುದನ್ನು ನಾವು ಕೇಳುತ್ತೇವೆ. ಇಲ್ಲಿ ನಾಸ್ತಿಕತೆಯ ಮನೋಭಾವ ಖಂಡಿತ ಇಲ್ಲ; ಅಧಿಕಪ್ರಸಂಗದ ಸಂಗತಿ ಇದಲ್ಲ. ಆದರೆ ಅಂಧಶ್ರದ್ಧೆ ಗ್ರಂಥ ದಾಕ್ಷಿಣ್ಯ ವ್ಯಕ್ತಿಗೌರವಗಳಿಗೆ ಬಲಿಬೀಳದೆ ತನಗೆ ಸರಿಯೆಂದು ಕಾಣುವ ಸತ್ಯ ವನ್ನು ಸಾರುವ ಎದೆಗಾರಿಕೆ ಇಲ್ಲಿ ಕಾಣಬರುತ್ತದೆ. ದೇವರ ವಿಷಯವನ್ನು ಕೂಡ ಚಾರಿತ್ರಿಕ ದೃಷ್ಟಿಯಿಂದ ನೋಡಬೇಕು. ವಿಮರ್ಶೆಯ ದೃಷ್ಟಿಯಿಂದ ಬೆಲೆಕಟ್ಟಬೇಕು. ದೇವರಿಗೆ ದೇವತ್ವವನ್ನು ಕೊಡುವ, ಧರ್ಮಕ್ಕೆ ಧರ್ಮತ್ವವನ್ನು ಕೊಡುವ ತತ್ವವಾವುವೆಂಬುದನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು. ಇಂತಹ ಒಂದು ಧೋರಣೆಯನ್ನು ಈ ಕವಿತೆ ಸಾರುತ್ತದೆ. 'ಅಶುಚಿಯೆಂದು ಶವವನ್ನು ಸುಟ್ಟು ಬೂದಿಮಾಡುತ್ತಿದ್ದ ಜನಾಂಗವು ಮನೋರಾಜ್ಯದ ಶವ ಗಳನ್ನು ಕಾಪಾಡಿಡುವುದು ಶೌಚಸಾಧಕವಲ್ಲವೆಂಬುದನ್ನು ಮರೆಯಲಾಗದು' ಎಂದು ವಿ.ಸೀ. ಅವರು ಬೇರೊಂದು ಸಂದರ್ಭದಲ್ಲಿ ಕೊಟ್ಟ ಎಚ್ಚರಿಕೆಯನ್ನು ಇಲ್ಲಿ ನೆನೆಯಬೇಕು. ಮಾನವನ ಸುಗುಣವೇ ದೈವವೋ ಎಂಬ ಮಾತು ಸತ್ಯ. ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೋ ಎನ್ನುವುದು ಸತ್ಯಸ್ಯ ಸತ್ಯ.

'ಕಸ್ಮೈ ದೇವಾಯ' ಎನ್ನುವುದು ಪರತತ್ವಚಿಂತನೋದಧಿಯ ಒಂದು ದ್ವೀಪಖಂಡ. ಸಂಶಯಾಕುಲಿತಚಿತ್ತನಾದ ಕವಿ ಈ ದ್ವೀಪಖಂಡದಲ್ಲಿ ಕೆಲಕಾಲ ನಿಂತು ಏನೂ ಬಗೆಹರಿಯದೆ ಕೊನೆಗೆ ಮತ್ತೆ ಅಪಾರ ಪಾರಾವಾರದಲ್ಲಿ ಧುಮ್ಮಿ ಕ್ಕುತ್ತಾರೆ. ಕೆಲಕಾಲಾನಂತರ ಮತ್ತೊಂದು ದ್ವೀಪಖಂಡವನ್ನು ಸೇರುತ್ತಾರೆ. ನೈವೇದ್ಯ ಎನ್ನುವುದು ಆ ಇನ್ನೊಂದು ದ್ವೀಪಖಂಡವಾಗಿ ಪರಿಣಮಿಸಿದೆ. 'ಮುರುಕುಮನವಿದನೊಂದ ಹರಿವ ಹೃದಯವಿದೊಂದ ಪರಮಕರುಣಾಮೂರ್ತಿ ನಿನಗೆ ಅರ್ಪಿಸುವೆ' ಎಂದು ಕವಿ ಹಾಡುತ್ತಾರೆ. ಇದೇ ನೀನು ಉಳಿಸಿರುವ

ಸರ್ವಸಂಪದ, ಇದನ್ನೇ ನಿನಗೆ ನಿವೇದಿಸುತ್ತೇನೆ, ಕೊಂಡು ಸುಖಿಸು ಎಂದು ಕೇಳಿಕೊಳ್ಳುತ್ತಾರೆ. ನೀನು ಪ್ರೇಮಮಯನು ಎಂದುಕೊಂಡೆ. ಒಲಿಸಿ ಕೊಳ್ಳಲು ಯತ್ನಿಸಿದೆ........ಪ್ರೇಮಿಯೋ, ಕ್ರೂರಿಯೋ ನೋಳ್ಪಿಯೋ ನೋಡೆಯೋ ಸಾವಧಾನದೊಳೆಲ್ಲೊ ಮಲಗಿ ನಿದ್ರಿಪೆಯೋ ಎಂದು ಶಂಕಿಸುತ್ತಾರೆ. ಕೊನೆಗೆ ಇಳೆಯಲ್ಲಿ ಆಗುವುದು ಒಂದೂ ನಿನ್ನ ಗಮನಕ್ಕೆ ಬರುವುದಿಲ್ಲವೋ ಅಥವಾ ಇಲ್ಲಿನದೆಲ್ಲವೂ ನಿನ್ನ ಕೈಮೀರಿ ಹೋಗಿದೆಯೋ ಅಥವಾ ನಡೆಯುವುದೆಲ್ಲ ನಡೆಯಲಿ ಎಂದಿದ್ದೀಯೋ ಅಥವಾ ಎಲ್ಲಿಯಾದರೂ ಹಾಳಾಗಿ ಹೋಗಲಿ ಎಂದಿದ್ದೀಯೋ ಹೀಗೆ ಆಗಲೇಬೇಕೆಂಬ ನಿಯಮ ನಿನಗೆ ಇಲ್ಲವೋ ಇಂಥದೇ ಹೌದು ಎಂಬ ನಿಶ್ಚಯವೇ ಇಲ್ಲವೋ ಈ ಜಗತ್ತಿನ ಸಂಗಡ ನೀನೂ ಬಳಲುತ್ತಿದ್ದೀಯೋ, ಕೊಂಕುವಿಧಿ ನಿನ್ನನ್ನೂ ನಡಸುತ್ತಿದೆಯೋ ಎನ್ನುವ ಬಗೆಬಗೆಯ ಶಂಖಾಭೀತಿಗಳಿಂದ ತಲ್ಲಣಗೊಂಡ ಮನಸ್ಸಿನ ಚಿತ್ರ ಇಲ್ಲಿದೆ.

ಇಂತಹ ಯಾವ ಯಾವ ಚಿಂತೆ, ಶಂಕೆ, ಭಯ ಮುಂತಾದ ಚಿತ್ತವೃತ್ತಿ ಪರವಸ್ತುವಿನ ಶೀಲ ಸ್ವಭಾವ ವ್ಯಾಪಾರ ಸ್ವರೂಪಾದಿಗಳ ವಿಷಯದಲ್ಲಿ ಮೇಲಿಂದ ಮೇಲೆ ಪ್ರಕಟವಾಗುತ್ತಿದ್ದರೂ ಆ ಪರವಸ್ತುವಿನ ಅಸ್ತಿತ್ವದಲ್ಲಿ ಆಸ್ತಿಕ್ಯಮನೋಭಾವವೇ ಪ್ರಬಲವಾಗಿರುತ್ತದೆ. ಅಂತಹ ಕೆಲವು ಪದ್ಯಗಳನ್ನು ಇಲ್ಲಿ ನೋಡಬಹುದು. ಪ್ರಕೃತಿಯ ಪ್ರತಿಯೊಂದು ವ್ಯಾಪಾರದಲ್ಲಿಯೂ ಪರವಸ್ತುವಿನ ಸರ್ವವ್ಯಾಪಕವಾದ ಚೈತನ್ಯ ಅನುಭವಗೋಚರವಾಗುತ್ತದೆ. ತಿಳಿಗಾಳಿಯ ತೀಟ, ಮಳೆಗಾಳಿಯ ಬಿರುಸು, ಬಿರುಗಾಳಿಯ ಬೀಸು, ಸರದ ಕಲ್ಲೋಲ, ನದಿಯ ತರಂಗ, ಕಡಲ ನೊರೆದೆರೆ, ಚಿಗುರು ಗೊಂಚಲು, ಅರಳುವ ಹೂದಳ, ಬಿರಿವ ಹಣ್ಬೆಡಗು, ಹಕ್ಕಿಯಿಂಚರ, ಮಗುವ ತೊದಲುಲಿ, ಕೆಳೆಯ ನಗೆನುಡಿ, ಗುಡುಗು-ಸಿಡಿಲು—ಈ ಮುಂತಾದ ಪ್ರಕೃತಿಯ ಬಗೆ ಬಗೆಯ ವ್ಯಾಪಾರಗಳಲ್ಲಿ ಆ ಪರವಸ್ತುವಿನ ಚೇತನಸ್ವರೂಪ ಪ್ರಕಟವಾಗುತ್ತದೆ. ಇಂತಹ ಪರವಸ್ತು ನಮಗೂ ಸುಖಸಂತೋಷಗಳನ್ನು ಕೊಡಲಿ ಎಂದು ಕವಿ ಪ್ರಾರ್ಥಿಸುತ್ತಾರೆ.

ಶಿವರಾತ್ರಿ, ಅರ್ಧನಾರೀಶ್ವರ, ಶಿವ ಈ ಮುಂತಾದ ಗೀತಗಳಲ್ಲಿ ಆ ಪರತತ್ವವನ್ನು ಶಿವರೂಪಿಯಾಗಿ ಗುರುತಿಸಿ ಹಾಡಿದ್ದಾರೆ. ತ್ಯಾಗವೇ ಭೋಗವೆಂದು ಈತ ಸಾರಿದ್ದಾನೆ. ಇವನು ವರತಪೋನಿಷ್ಠನು, ಅಖಿಲ

ಲಯಕಾರಕನು, ನರರ ಎಣಿಕೆ, ಗುಣದ ಎಣಿಕೆ ಯಾವುದಕ್ಕೂ ಬಾಗದೆ ಒಂದು ರೀತಿಯ ನಿಯಮಕ್ಕೆ ಒಪ್ಪಿ ಸಿಲುಕದೆ ಒಂದು ರೀತಿ ಚಿಂತಿಸಿದರೆ ಮತ್ತೊಂದು ರೀತಿ ತೋರುತ್ತ ಅರಸುವವರ ಕೌತುಕವನ್ನು ಈತ ಹೆಚ್ಚಿಸುತ್ತಾನೆ ಎಂದು ಮುಂತಾಗಿ ಶಿವನನ್ನು ಕುರಿತು ಹಾಡಿದ್ದಾರೆ. 'ಅರ್ಧನಾರೀಶ್ವರ'ದಲ್ಲಿ ಒಂದು ಮುಖದಲ್ಲಿ ಗಂಡು, ನಿಯಮ, ನಿಷ್ಠುರ, ಉರಿಗಣ್ಣು, ಕೈಶೂಲ, ವಿಷವ ಕಾರುವ ಸರ್ಪ, ಉಕ್ಕಿನಲ್ಲಿ ಸಮೆದಂತೆ ಇರುವ ಒಡಲನ್ನು ಕಂಡು ಜನ ಪೂಜಿಸುವರು ಎಂದೂ ಇನ್ನೊಂದು ಮುಖದಲ್ಲಿ ಜನ ತಾಯನ್ನು, ಉಕ್ಕಿ ಹರಿಯುವ ಕರುಣೆಯ ಒರತೆಯನ್ನು, ಅಕ್ಕರನ್ನು, ಸ್ನೇಹವನ್ನು, ಅರಳಿದ ಎಳೆನಗೆಯನ್ನು ತೆಗೆಗೈಯಿಂದ ಕೊಡುವ ಔದಾರ್ಯವನ್ನು ಕಂಡು ಅರ್ಚಿಸುತ್ತಾರೆ. ತಾಯಿ ತಂದೆಯರ ಗುಣ ನಿನ್ನಲ್ಲಿ ಸೇರಿವೆ. ಒಂದು ಕೈಯಿಂದ ದಂಡಿಸುತ್ತೀಯೆ, ಒಂದು ಕೈಯಿಂದ ಕಾಪಿಡುತ್ತೀಯೆ. ಎಲ್ಲ ತಾಯ್ತಂದೆಗಳ ತಂದೆ ನೀನು' ಎಂದು ಆ ಪರತತ್ವವನ್ನು ನೆನೆದಿದ್ದಾರೆ.

'ದೀಪಗಳು', 'ಗಂಗಾಪೂಜೆ'ಗಳಲ್ಲಿ ಸಂಪ್ರದಾಯಾನುಸಾರವಾಗಿ ನಡೆದುಬಂದ ನಮ್ಮ ಜನರ ಆಸ್ತಿಕ್ಯಮನೋಧರ್ಮದ ಒಂದು ಸುಂದರವಾದ ಚಿತ್ರವನ್ನು ಕವಿ ಕೊಟ್ಟಿದ್ದಾರೆ. 'ಊರಿನ ತಾಯ್ಗಳ ತಾಯಿಯ ಸೇವೆಗೆ ಮಕ್ಕಳು ಹರಕೆಯ ತರುತಿಹರು; ಊರಿನ ಮಕ್ಕಳ ಮರಿಗಳ ಮನೆಗಳ ರಕ್ಷೆಯ ಕಾಣಿಕೆ ಸಲಿಸುವರು' ಎಂದೂ 'ಹಿರಿಕಾಣಿಕೆಗಳನೀಯಲಾರೆವು. ತಾಯಿ, ಬಡವರಿಗೊಲಿಯಮ್ಮ. ಇಲ್ಲಿಂ ಬೇಗನೆ ಬಾರೆಮ್ಮೂರಿಗೆ ಮಕ್ಕಳ ಮನೆಗಳ ಪೊರೆಯಲಿಕೆ' ಎಂದೂ ಕವಿ ಹಾಡಿದ್ದಾರೆ.

'ಕನಸು' ಎನ್ನುವ ಒಂದು ಪದ್ಯ ಈ ಪರತತ್ವಚಿಂತನೋದಧಿಯ ದೀಪಸ್ತಂಭದಂತೆ ರಾರಾಜಿಸುತ್ತದೆ. ಋತಚಿನ್ಮಯಿ ಜಗನ್ಮಾತೆಯ ಮತ್ತು ವಿರಾಟ್‌ಪುರುಷನ ಲೀಲಾವಿನೋದದಿಂದೊಗೆದ ಬ್ರಹ್ಮ, ಹರಿ, ಶಿವರ ಪರಿಯನ್ನೂ ಅವರವರ ಕರ್ತವ್ಯನಿಷ್ಠೆಗಳನ್ನೂ ಅವರಿಂದ ಒಗೆದ ಸೃಷ್ಟಿಯನ್ನೂ, ಮಾನವಕುಲವನ್ನೂ, ಅದರ ಪರಿಯನ್ನೂ ವಿಶ್ವಧರ್ಮದ ನಿಯಮ ನಿಯತಿಗಳ ರಹಸ್ಯವನ್ನೂ ಕವಿ ಇಲ್ಲಿ ಅತ್ಯದ್ಭುತವಾದ ರೀತಿಯಲ್ಲಿ ವರ್ಣಿಸಿದ್ದಾರೆ. ಕವಿಯ ಒಂದು ಭವ್ಯದೃಷ್ಟಿಗೆ ಹೊಳೆದ ದಿವ್ಯ ದರ್ಶನ, ಈ ಕವಿತೆ.

ಪರದೈವದ ಬರವಿಗಾಗಿ ಜನ ತಪಗೈದು ಜಪಗೈದು ನುಡಿಸೋತ

ಮೂಕಪ್ರೇಮವನ್ನು ಹೇಗೆ ಪ್ರಕಟಿಸುತ್ತಿರುವರೆಂಬುದರ ಆರ್ದ್ರಚಿತ್ರವೊಂದನ್ನು 'ಶಬರಿ' ಎನ್ನುವ ಕವಿತೆಯಲ್ಲಿ ಕವಿ ಕಂಡರಸಿದ್ದಾರೆ. ಹೀಗೆ ಶುಚಿ ಜೀವನ ದರ್ಶನದ ಒಂದು ಮುಖವಾದ ಪರತತ್ವಚಿಂತನದಲ್ಲಿ ಪರದೈವ ಎನ್ನುವುದು ಒಂದಿದೆ, ಅದರ ಸ್ವರೂಪನಿರ್ಣಯ ಅಸಾಧ್ಯ, ಶುಚಿಜೀವನದಿಂದ ಮಾನವನು ಆ ದೈವವನ್ನು ನೆನೆಯುತ್ತಾ ಬಂದಲ್ಲಿ ತನ್ನ ಮತ್ತು ಲೋಕದ ಕಲ್ಯಾಣ ಸಾಧ್ಯವಾಗುತ್ತದೆ ಎಂಬ ಅಭಿಪ್ರಾಯವನ್ನು ಕವಿ ತಮ್ಮ ವೈಯಕ್ತಿಕವಾದ ಅನುಭವಗಳ ತಳಹದಿಯ ಮೇಲೆ ಕಟ್ಟಿ ಹಾಡಿದ್ದಾರೆ.

೨

ಜೀವನದ ಕಷ್ಟನಷ್ಟಗಳನ್ನು ಎದುರಿಸಲಾರದೆ ಮನಸ್ಸು ತಳಮಳಗೊಳ್ಳುವುದು ನಮ್ಮೆಲ್ಲರ ಅನುಭವಕ್ಕೂ ಬಂದದ್ದು. ದುರ್ಭರವಾದ ಬದುಕಿನ ಕಠೋರ ಸತ್ಯಗಳನ್ನು ಕಂಡು ಮನಸ್ಸು ಅಳುಕಿದಾಗ ನಾವು ಅಸಹಾಯರೆಂಬಂತೆ ಕಂಬನಿದುಂಬಿ ನಿಟ್ಟುಸಿರೆಳೆದು ಕೈಕಟ್ಟಿ ಕುಳಿತುಬಿಡುತ್ತೇವೆ. ಇಂತಹ ಸಂದರ್ಭಗಳಲ್ಲಿ ನಮಗೆ ನಾವೇ ಸಮಾಧಾನವನ್ನು ತಂದುಕೊಂಡು ನಮ್ಮನ್ನು ನಾವೇ ಸಂತೈಸಿಕೊಂಡು ಒಂದು ಒಳ ಎಚ್ಚರಿಕೆಯನ್ನೋ ಒಂದು ಹೊಸ ಅರಿವನ್ನೋ ನಮ್ಮ ಮನಸ್ಸಿಗೆ ನಾವೇ ಬೋಧಿಸಿಕೊಂಡು ಮತ್ತೆ ಕಾರ್ಯೋನ್ಮುಖರಾಗುವುದು ಸಾಮಾನ್ಯರಿಗೆ ಸಾಧ್ಯವಾಗುವುದಿಲ್ಲ. ಆದರೆ ಕವಿಚೇತನ ಅಸಾಮಾನ್ಯವಾದದ್ದು. ಸಮಾಧಾನ, ತಾಳ್ಮೆ, ಧೈರ್ಯ, ಸ್ಥೈರ್ಯ, ಮುಂದಾಲೋಚನೆ, ದೂರಾಲೋಚನೆ, ಪೂರ್ವಾಪರವಿವೇಚನೆ ಈ ಮುಂತಾದ ಗುಣವಿಶೇಷಗಳಿಂದ ಪರಿಪೋಷಿತವಾದ ಆ ಚೇತನ ಕಷ್ಟದಲ್ಲಿ ಎದೆಗೆಡದೆ ಮುನ್ನುಗ್ಗುವುದಕ್ಕೆ ಬೇಕಾದ ಸಿದ್ಧತೆಯಲ್ಲಿ ತೊಡಗುತ್ತದೆ. ತನಗೆ ತಾನೇ ತಿಳಿವನ್ನು ಹೇಳಿಕೊಂಡು ತನ್ನನ್ನು ತಾನೇ ಸಮಾಧಾನಮಾಡಿಕೊಂಡು ಪರಿಸ್ಥಿತಿಯನ್ನು ಎದುರಿಸುವ ಶಕ್ತಿಯನ್ನು ತಂದುಕೊಳ್ಳುತ್ತದೆ. ಇಂತಹ ಗುಣವನ್ನು 'ಆತ್ಮಸಾಂತ್ವನ' ಎಂದು ಕರೆಯಬಹುದು. ನಮ್ಮ ಬಾಳು ಹಸನಾಗುವುದಕ್ಕೂ ನಾವು ಲೇಸನ್ನೇ ಕುರಿಯುವುದಕ್ಕೂ ಲೋಕಕಲ್ಯಾಣ ಆತ್ಮಕಲ್ಯಾಣಗಳ ಹಾದಿಯಲ್ಲಿ ಹೆಜ್ಜೆಯಿಡುವ ಸಾಮರ್ಥ್ಯ ಯತ್ಕಿಂಚಿತ್ತಾದರೂ ನಮ್ಮಲ್ಲಿ ಉದಯಿಸುವುದಕ್ಕೂ ಈ 'ಆತ್ಮಸಾಂತ್ವನ' ಎನ್ನುವ ಗುಣವನ್ನು ನಾವು ಪಡೆದಿರಬೇಕಾಗುತ್ತದೆ. ವಿ.ಸೀ. ಅವರ ಕೃತಿಗಳಲ್ಲಿ 'ಆತ್ಮಸಾಂತ್ವನ'

ಪ್ರಕಟವಾಗಿರುವ ಕೆಲವು ಗೀತಗಳನ್ನು ಇಲ್ಲಿ ನೆನೆಯಬಹುದು. 'ಇನಿತು ಮರೆಯೇಕೆ ಎನ್ನಿದಿರೊಳು—ಮನ್ಮಾನಸಮೆ, ಇನಿತು ಚಿಂತೆಯಿದೇಕೆ, ಕಳವಳ ವೇಕೆ?' ಎಂದು ಆರಂಭವಾಗುವ ಕವಿತೆಯೊಂದರಲ್ಲಿ ಹೊರಗಿನ ಸೃಷ್ಟಿ ಸೌಂದರ್ಯ ನಿನಗೆ ಸಂತೋಷವನ್ನು ಕೊಡುವುದಿಲ್ಲವೆ? ಹೂಬಳ್ಳಿ, ಎಳಗಾಳಿ, ನೀಲಮೇಘ, ವಿಶಾಲಗಗನದ ರಾಗದೊಯ್ಯಾರ ಮುಂತಾದವುಗಳು ನಿನ್ನನ್ನು ಮೋಹಿಸವೆ? ನಾನು ನಿನಗೆ ಎಂದೂ ಆಯಾಸ ಕೊಟ್ಟವನಲ್ಲ. ಮಾಯೆ ಮೋಸಗಳಿಂದ ನಿನ್ನನ್ನು ನಾನು ಬಂಧಿಸಿದವನಲ್ಲ. ಕಾಯಸುಖ ಬೇಕೆಂದು ಬಳಲಿಸಿದವನಲ್ಲ ಎಂದು ಮನಸ್ಸನ್ನು ಸಂಬೋಧಿಸಿ ಹೀಗೆ ಚಿಂತೆ ತಾಳುವುದು ಸಾಧುವಲ್ಲ ಎಂದಿದ್ದಾರೆ:

'ಅಂತರಂಗದೊಳೇನಿಹುದು ಪೇಳೆನ್ನ ಮಾನಸಮೆ
ಸಂತಸವ ತಾಳು ಬೇಡುವೆನು ಕೊರಗಬೇಡೆಂತು
ಸ್ವಾಂತದಾಯಸವ ನೀಗಿ ಹಾಸವನು ಬೀರು ದಳದಿ-
ಗಂತರಾಳಗಳ ಛೇದಿಸುವೆ ಜಯಸಿರಿಯು ಗೆಲುವೆ.
ಇನಿತು ತಾಮಸವೇಕೆ? ಇನಿತಸಂತುಷ್ಟಿಯೇಕೆ?'

ಎಂದು ಕೊನೆಯಾಗುವ ಈ ಕವನದಲ್ಲಿ ಮನಸ್ಸಿನ ಸಂತೋಷವೇ ಸರ್ವ ಸುಖಕ್ಕೂ ಮೂಲ, ಸರ್ವ ಜಯಕ್ಕೂ ಕಾರಣ. ಆದ್ದರಿಂದ ಮನಸ್ಸಿನ ಪ್ರಫುಲ್ಲತೆ ಯನ್ನು ನಾವು ಕಳೆದುಕೊಳ್ಳಬಾರದು ಎಂಬ ಅಂಶ ಸೂಚ್ಯವಾಗಿ ಪ್ರಕಟವಾಗಿದೆ.

'ಶಾಂತಿ' ಸುಸಂಸ್ಕೃತ ಚೇತನದ ಒಂದು ಮುಖ್ಯ ಲಕ್ಷಣ. ಏಳಿಗೆ ಯಲ್ಲಿಯೂ ಬೀಳಿನಲ್ಲಿಯೂ ನಾಲ್ದೆಸೆಯ ಕಷ್ಟದಲ್ಲಿಯೂ ಆಳುವ ಅರಸುವ ಆಳುತನಗಳಲ್ಲಿಯೂ ಕೀಳು ಜನಗಳು ಸೇರಿ ದೂಷಿಸುವ ಕಾಲದಲ್ಲಿಯೂ ಮೇಲ್ಮತಿಯ ಭಾವದಲ್ಲಿ ಮನವು ನಿಂತಾಗ 'ಶಾಂತಿ' ನಮಗೆ ದೊರೆಯುತ್ತದೆ ಎಂದು ಕವಿ ಇನ್ನೊಂದು ಕವನದಲ್ಲಿ ಹಾಡಿದ್ದಾರೆ. ಹೆಂಗಸರಲ್ಲಿ ಅನ್ಯೋನ್ಯ ವಾದ ಸಹನೆ ತೋರಬೇಕು. ಹೊನ್ನು ಹೆಣ್ಣುಗಳ ಆಸೆ ನಮ್ಮಿಂದ ದೂರವಾಗ ಬೇಕು. ಮಂಗಳಾಮಂಗಳಗಳಲ್ಲಿ ಸಮಭಾವ ಬರಬೇಕು. ಸಂಗಸೌಖ್ಯದ ದಾಹ ಅಡಗಬೇಕು. ಆಗ 'ಶಾಂತಿ' ಲಭಿಸುತ್ತದೆ. ಜಗವು ಇತ್ತುದ್ದನ್ನು ಕೊಂಡು ತುಷ್ಟಿಪಡಬೇಕು. ಹಗೆಯ ಉತ್ಕರ್ಷದಲ್ಲಿ ನಲಿಯಬೇಕು. ಜಗದ ವೈರಗಳೂ ಪ್ರತಿಚಿಂತನಗಳೂ ಮನಸ್ಸಿನ ಪಟದಿಂದ ತೊಡೆದುಹೋಗಬೇಕು;

ಆಗ ಶಾಂತಿ ಬರುತ್ತದೆ. ದುರ್ಮದದ ಹೆಮ್ಮೆಯಲ್ಲಿ ನಾವು ಈಶ್ವರರು ಎಂಬ, ಧರ್ಮ ಮರ್ಮಗಳೆಲ್ಲ ನಮ್ಮ ಸುಖ ಎಂಬ, ಬ್ರಹ್ಮಸೃಷ್ಟಿಯಲ್ಲಿ ನಾವು ಕೊನೆ ಮೆಟ್ಟಲವರು ಎಂಬ, ಬ್ರಹ್ಮನ ಇಚ್ಛೆಯನ್ನು ನಾವು ಬಲ್ಲೆವು ಎಂಬ, ನಮ್ಮ ಶಕ್ತಿಗೆ ಅಭ್ಯುದಯ ಪತನಗಳು ಅಧೀನವಾಗಿವೆ ಎಂಬ, ಪ್ರಕೃತಿ ನಮ್ಮ ಅಧೀನದ ದಾಸಿ ಎಂಬ, ನಮ್ಮ ಸಿದ್ಧಾಂತಗಳೆ ನಿತ್ಯಸತ್ಯಗಳು ಎಂಬ, ನಮ್ಮ ನೆಚ್ಚಿನ ತರ್ಕ ಉರುಳಿಬೀಳುವಾಗ ಶಾಂತಿ ನಮಗೆ ಲಭಿಸುತ್ತದೆ. 'ಶಾಂತಿ' ಎನ್ನುವ ಈ ಕವನದಲ್ಲಿ ಪ್ರಕಟವಾಗಿರುವ ಕವಿಚೇತನ ಎಷ್ಟು ಉದಾರವಾದದ್ದು!

ಮನುಷ್ಯನ ಜೀವನದಲ್ಲಿ ನಡೆಯುವ ಒಂದೊಂದು ಘಟನೆಯೂ ಅರ್ಥ ಪೂರ್ಣವಾದದ್ದು. ನಮ್ಮ ಖಂಡದೃಷ್ಟಿಗೂ ಅಲ್ಪಮತಿಗೂ ಈ ಘಟನೆಗಳು ಅರ್ಥಹೀನವೋ ಅನರ್ಥಕಾರಕವೋ ಎನಿಸಿದರೆ ಆಶ್ಚರ್ಯವಿಲ್ಲ. ಆದರೆ ದೂರಾಲೋಚನೆಯ ಕವಿಚೇತನವು, ಒಂದಾದ ಮೇಲೆ ಒಂದರಂತೆ ದುರ್ಭರ ಶೋಕವು ಬಂದು ಹೃದಯವನ್ನು ತಿನ್ನುತ್ತಿರುವಾಗ, 'ಹಿಂದೆ ಆದುದು ಎಲ್ಲ ಬಂದು ಹೋದುವುವೆಲ್ಲ ಇಂದು ಯೋಚಿಸಲೊಂದು ಕ್ರಮದೊಳಾಗಿಹವು' ಎಂಬ ತೀರ್ಮಾನಕ್ಕೆ ಬಂದು ನಿಲ್ಲುತ್ತದೆ. ಹಿಂದಣದರ ಅರಿವು ನಮ್ಮನ್ನು ಯಾವಾಗಲೂ ಕಾಯುತ್ತದೆ. ಆ ಅರಿವು 'ನಡೆ, ನಿಲ್ಲಬೇಡ ಪೊಡವಿಗತಿಗೆ ಈ ನಿನ್ನ ಅಡಿಯು ಗತಿಯನುವಡಿಸು ತಡೆಮಾಡದಿರು ಸಾಗು ಎಲ್ಲ ಸರಿಯಹುದು' ಎಂದು ಧೈರ್ಯವನ್ನು ತುಂಬುತ್ತದೆ.

'ವಿಶ್ವಸಂಸಾರದೊಳು ನಿನ್ನಂಶವೆನಿಸಿರದು
ನಿಶ್ಚಯವು ನಿನ್ನಿನಿಸನಂತವಹುದು,
ಸತ್ಸೇವೆಯಿಂದವನನೊಲಿಪ ಯತ್ನಗಳೆಲ್ಲ
ವಿಶ್ವಸಂಕಲ್ಪದಲಿ ಪೂರ್ಣಗೊಳ್ಳುವುವು.

ಇಂದು ಕಾಣದ ದಾರಿ ಮುಂದೆ ಕಾಣುವುದೇನೊ
ಅಂದು ಕರುಣೆಗಳನ್ನು ಅಳೆಯಬಹುದೇನೊ
ಇಂದಿನಂತೆಯೆ ಮುಂದು ಕ್ರಮವು ತೋರುವುದೇನೊ
ಇಂದಿನದೆ ಹಿರಿದೇನು?—ನಾಳೆ ತಿಳಿಸುವುದು'

—ಈ ಸಾಂತ್ವನ ನೊಂದ ಜೀವಕ್ಕೆ ಎಂತಹ ಭರವಸೆ!

ಇಲ್ಲದಿರುವ ಬೇರೆ ಯಾವುದೋ ಒಂದನ್ನು ಅರಸುತ್ತ ಅನವರತವೂ ತೆರತೆರನಾಗಿ ಹೊಯ್ದಾಡಿ ಭಂಗವಡೆಯುತ್ತೇವೆ. ಆದರೆ ಮರಳಿ ಸನ್ನಾಹ ಗೈಸುವುದೂ ಮೋಹಿಸುವುದೂ ಬರಿ ಮಾಯೆ ಎಂದು ಇಹವನ್ನು ದೂಡಬೇಡ ಮನವೇ ಎಂದು ಕವಿ ಇನ್ನೊಂದು ಸಂದರ್ಭದಲ್ಲಿ ಎಚ್ಚರಿಕೆಯ ಮಾತು ಆಡಿದ್ದಾರೆ. ಮಾಯೆಯೇ ಸತ್ಯ, ಮಾಯೆಯೇ ಸೌಂದರ್ಯ, ಮಾಯೆಯೇ ಸಂಸಾರಸಾರಸರ್ವಸ್ವ, ಮಾಯೆಯೇ ಅಖಿಳತಳಧರ್ಮದ ಆಧಾರ, ಮಾಯೆಯೇ ಮಾನವನ ಮೂಲಬಲ. ಈ ಮಾಯೆಯ ಬಯಲಿನಲ್ಲಿ ಸಿಂಗರದ ಖನಿಯಿದೆ. ಬಳ್ಳಿಗಳೂ, ಹೂವುಗಳೂ, ಹಣ್ಣುಗಳೂ, ಪರಿಮಳಗಳೂ ಇವೆ. ಈ ಎಲ್ಲ ಹೂ ಹಣ್ಣು ಸವಿಕಾಂತಿಗಳ ಮೀರಿ ಎಲ್ಲವನ್ನೂ ಬೆಳಗುತ್ತಿದೆ, ಸ್ನೇಹವೆಂಬ ಹೂವು. ಹೀಗೆಂದು ಮಿತ್ರಸ್ನೇಹದ ಕಟ್ಟಕ್ಕರೆಯ ಮಮತೆ ಮನಸ್ಸಿಗೆ ಆಪ್ಯಾಯಮಾನ ವಾಗಿ ಒದಗಿಬರುವ ಸಂಗತಿಯನ್ನು ಕವಿ ಹಾಡಿದ್ದಾರೆ.

ಎಷ್ಟು ಮನಸ್ಸನ್ನು ಸಮಾಧಾನಕ್ಕೆ ತಂದುಕೊಂಡರೂ ಜೀವನ ಒಂದೊಂದು ಸಲ 'ಒಣಗಿದ ಎಳೆಗಾಯಿ'ಯ ಹಾಗೆ, 'ಅಳಿದನ ಎದೆಗೂಡಿನ' ಹಾಗೆ, 'ಹಾಳು ತೋಟದ ತರುಗಳ ಆಲವಾಲ'ದ ಹಾಗೆ ರಸರಹಿತವಾಗು ತ್ತದೆ. ಗಾಳಿಗೆ ಅಲುಗುವ ಅರಳಿಯ ಎಲೆಯ ಹಾಗೆ ಕೆಂಪಗೆ ಕೋಮಲವಾಗಿ ನಳನಳಿಸುತ್ತಿದ್ದ ಹೃತ್ಪಲ್ಲವ ಬಾಡಿಹೋಗುತ್ತದೆ. ಹೋದ ಭಾಗ್ಯದ ನೆನಪು ಮನಸ್ಸನ್ನು ತಿನ್ನುತ್ತದೆ. ಅಂತರಂಗ ಕೊರಗುತ್ತದೆ. ಯಾತನೆಯನ್ನು ಅನು ಭವಿಸಿ ಅನುಭವಿಸಿ, ಚಿಂದಿಬಟ್ಟೆಯ ಹಾಗೆ ಛಿದ್ರಛಿದ್ರವಾಗುತ್ತದೆ. ಮನ ಪಾಳುಬೀಳುತ್ತದೆ, ಮರುಭೂಮಿಯಾಗುತ್ತದೆ. ರೆಂಬೆಕೊಂಬೆಗಳೊಣಗಿ ನಿಂತ ಮೊಂಡು ಮರವಾಗುತ್ತದೆ. 'ಇಂದು' ಎಂಬ ಕವಿತೆಯಲ್ಲಿ ಮನಸ್ಸಿನ ಈ ತುಯ್ತನವನ್ನು ಕವಿ ಎದೆಗರಗುವಂತೆ ಚಿತ್ರಿಸಿದ್ದಾರೆ. ಇಂತಹ ಸಂದರ್ಭ ದಲ್ಲಿ 'ಓಡಿಹೋಗು ಜಗವು ಬೇಡವೆಂದು ನುಡಿದು ಮನವು ಮತ್ತೆ ಬೇಡ ನಿಲ್ಲು ಹೇಡಿತನವು ಎಂಬುದೊಡನೆಯೆ.' 'ಎರಡು ದನಿಗಳು' ಹೀಗೆ ಹೃದಯ ಗಹ್ವರದಲ್ಲಿ ಮೊಳಗಿದಾಗ ಕೊನೆಯ ತೀರ್ಮಾನವೊಂದು ರೂಪುಗೊಳ್ಳುತ್ತದೆ: 'ಚೆಲುವು ನಿಲ್ಲದಿದ್ದರೇನು ಬಲವು ಕುಗ್ಗುತಿದ್ದರೇನು ಪ್ರಿಯರ ಸಖರ ಒಲವು ನೇಹ ಕುಂದುತಿದ್ದರೇನು? ಚೆಲುವು ಒಲವು ಬಲವು ನೇಹ ಇರುವವರೆಗು ಸವಿಯೆ ಅಲ್ತೆ! ಬರುವುದೆಲ್ಲ ಬರಲಿಯೆಂದು ಕೊಡುವ ಕಾಲ ಕೊಂಡು ಪೋಪು

ದೆಂದು ನಂಬುತೆ ವಿಧಿಯು ಕೆರಳು ಕೋಪವೆಂದು ಅಳುಕದಂತಿರು. ಎಡರ ಶರದ ಘಾತವೆಂದು ಮಣಿಯದಂತಿರು....' ಈ ವಿವೇಕೋದಯ, ಈ ಸ್ಥಿತಪ್ರಜ್ಞೆ ಕತ್ತಲ ಮನೆಗೆ ಮಣಿದೀಪ ತಾನೆ!

ನಚ್ಚು ಅಥವಾ ಭರವಸೆ ಒಂದು ದೊಡ್ಡ ಊರೆಗೋಲು. ಮುಂದೆ ಒಳ್ಳೆಯದಾಗುತ್ತದೆ ಎನ್ನುವ ಒಂದು ನಂಬಿಕೆಯೇ ಮನಸ್ಸಿಗೆ ಎಷ್ಟೋ ನೆಮ್ಮದಿಯನ್ನು ತರುತ್ತದೆ.

'ಎನಿತು ಬಡತನವಿರಲಿ ಎಡರು ಕವಿದಿರಲಿ
ಎನಿತಠಾಯಸ ತೋರಿ ಬೇಸರಾಗಿರಲಿ
ಎನಿತು ಮಹದಾಸೆಗಳು ಭಂಗವಡೆದಿರಲಿ
ಮರುಳು ಹೃದಯವು ಸುಖವ ಬಯಸಿ ಬಯಸುವುದು.

ಕಣ್ಣು ಕಾಣದ ಬಯಕೆ ಕಾಳ್ಕಿಚ್ಚಿನಂದದಲಿ
ಸಂತತವು ಉರಿದಿಂದು ಜ್ವಲಿಸುತಿಹುದು
ಉಡುಗಿರುವ ನೃಗೆ ಹೊಸ ಚೇತನವನೀಯುತ್ತೆ
ಮರಣದಿಂದಲೆ ಉಳಿವ ಹೀರಿ ಬೆಳೆಯುವುದು.'

ಈ ನಚ್ಚಿನ ಇನ್ನೊಂದು ಮುಖ 'ವಿಶ್ವಾಸ' ಎನ್ನುವ ಕವನದಲ್ಲಿ ಕಾಣ ಸಿಗುತ್ತದೆ:

'ಮಾನವನೆತ್ತರ ಆಗಸದೇರಿಗೆ
  ಏರುವವರೆಗೂ ಬೆಳೆದೇವು;
ಮಾನವಹೃದಯಕೆ ವಿಶ್ವವಿಶಾಲತೆ
  ಹಾಯುವವರೆಗೂ ಹಾಡೇವು.'

ಸಮಾಧಾನ, ಪೂರ್ವಾಪರವಿವೇಚನೆ, ಧೈರ್ಯಸ್ಥೈರ್ಯ, ವಿಶ್ವಾಸ ಈ ಮುಂತಾದ ಗುಣಗಳನ್ನು ಪೋಷಿಸಿಕೊಂಡು ಮನಸ್ಸನ್ನು ಒಂದು 'ಹದ'ಕ್ಕೆ 'ಪಾಕ'ಕ್ಕೆ 'ಶುಚಿ'ಗೆ ತಿದ್ದಿ ಪಳಗಿಸಿ ಆ ಮೂಲಕ ಇಹಪರಗಳ ಪ್ರೇಮ ಶ್ರೇಯಗಳನ್ನೂ ಸುಖಶಾಂತಿಗಳನ್ನೂ ಗಳಿಸಲು ಪ್ರಯತ್ನಿಸಬೇಕು ಎನ್ನುವ ತತ್ವ ಈ 'ಆತ್ಮಸಾಂತ್ವನ'ದ ಗುಂಪಿನ ಕೃತಿಗಳಲ್ಲಿ ಎದ್ದು ಕಾಣುತ್ತದೆ.

೩

ಪ್ರಣಯಜನರ ಚಿತ್ತವೃತ್ತಿಯ ಬಗೆಬಗೆಯ ವ್ಯಾಪಾರಗಳನ್ನು ಕುರಿತು ಬರೆದ ಕವನಗಳಲ್ಲಿ ಶುಚಿಜೀವನದ ವಿಶಿಷ್ಟವಾದ ಕಾಣ್ಕೆಯೊಂದು ವ್ಯಕ್ತವಾಗುತ್ತದೆ. ಮೊದಲು ಇಲ್ಲಿ 'ಸಪ್ತಪದಿ' ಎಂಬ ಕವನವನ್ನು ನೆನೆಯಬಹುದು. ಯಾರೋ ಎಲ್ಲೋ ಇದ್ದವರಿಬ್ಬರನ್ನು ತಂದು ಸತಿಪತಿಗಳನ್ನಾಗಿ ಮಾಡಿದರು. ಹೋಮವನ್ನು ಹುಯ್ಯಿಸಿ ಹರಕೆಯನ್ನು ಇಕ್ಕುತ್ತ ನೀವು ದಂಪತಿಗಳು ಎಂದರು. ಗುರುಹಿರಿಯರ ಪ್ರೇರಣೆ ಅನುಗ್ರಹಗಳ ಫಲವಾಗಿ ವಿಧಿವತ್ತಾಗಿ ಮದುವೆಯಾದ ಈ ಸತಿಪತಿಯರ ಬಾಳಿನಲ್ಲಿ ಆ ಕಾಲಕ್ಕೆ ಎಂತಹ ಶುಭದ ಆದರ್ಶ ಮನಸ್ಸಿನಲ್ಲಿ ಮೂಡಬೇಕು ಎಂಬುದನ್ನು ಕವಿ ಹೀಗೆ ವರ್ಣಿಸಿದ್ದಾರೆ :

'ಮನಗೆಳನರಿಯೆವು ನಡೆಗಳ ಕಾಣೆವು
ಹಿರಿಯರ ಬಯಕೆಗೆ ಬಾಗಿಹೆವು
ಮುಂದಿನ ಬಾಳಿನ ಪಯಣವಲಿಬ್ಬರು
ತೆರಳುತೆ ದಾರಿಯ ನಡೆಯುವೆವು.

ಒಂದೇ ದೋಣಿಗೆ ಹುಟ್ಟನು ಹಾಕುತ
ಕಡಲಿನ ಅಲೆಗಳ ದಾಟುವೆವು
ಒಂದೇ ಗುರಿಯಲಿ ಮುಂದಕೆ ಸಾಗುತೆ
ಆಚೆಯ ಬಂದರ ಮುಟ್ಟುವೆವು.

ಮೂರನೆಯವರನು ಬಯಸದಂಪವಲಿ
ಒಬ್ಬರನೊಬ್ಬರು ಹೊರೆಯುವೆವು
ಎನಗೇ ನೀ ಸತಿ ನಿನಗೇ ನಾ ಪತಿ
ಯೆಂಬ ವ್ರತವನೇ ಕಾಯುವೆವು.

ಚೆಲುವರು ನೂರ್ವರು ಗುಣಗಳು ಸಾವಿರ
ವೆಮ್ಮಯ ದಾರಿಗೆ ಸುಳಿದಾರು
ಚೆಲುವನು ಗುಣವನು ಎಲ್ಲಾ ಹಾಯಿಸೆ
ಎಮ್ಮ ಪ್ರೇಮವನು ತುಂಬೇವು.'

ವಿಶುದ್ಧವೂ ಸಾತ್ವಿಕವೂ ಅನ್ಯೋನ್ಯಾವಲಂಬಿಯೂ ಆದ ಈ ಮಧುರಪ್ರೇಮ ದಂಪತಿಗಳಲ್ಲಿ ಕುದುರಿದರೆ ಆ ಸಂಸಾರ ಸ್ವರ್ಗಸದೃಶವಲ್ಲದೆ ಮತ್ತೇನು ?

ಗಂಡಹೆಂಡಿರಲ್ಲಿ ಪ್ರೀತಿ, ವಿಶ್ವಾಸ ಎನ್ನುವುದು ಎಷ್ಟು ಗಾಢವಾಗಿ ರೂಢಮೂಲವಾಗಿ ಇರಬೇಕು, ಇದ್ದರೆ ಚೆನ್ನ ಎನ್ನುವುದನ್ನೂ ಕವಿ ಇಲ್ಲಿ ಕಾಣಿಸಿದ್ದಾರೆ:

'ಒಬ್ಬರ ಗುಣಕಿನ್ನೊಬ್ಬರು ಸೋಲುತೆ
ಕುಂದನು ಲೆಕ್ಕಿಸದಿದ್ದೇವು
ಕುಂದಿಗೆ ಕೊರತೆಗೆ ಕೆರಳದ ತೆರದಲಿ
ದಿನವೂ ಸಹನೆಯ ಕಲಿತೇವು.

ಬೇನೆಯುಲಿಡರಲಿ ಗೆಲವಲಿ ಸೋಲಲಿ
ಹಿಂದೆಗೆಯದೆ ಗಡೆ ನಿಂತೇವು
ಬಡತನ ಭಾಗ್ಯವನೊಂದೇ ಬಿನದದಿ
ಒಂದೇ ಸಮುತೆಯಲುಂಡೇವು.'

ಉರಿ ಬರಲಿ, ಸಿರಿ ಬರಲಿ, ಈ ಪ್ರೇಮುಕ್ಕೆ ಚ್ಯುತಿಯಿಲ್ಲ ಚ್ಯುತಿ ಬಾರದು ಎಂಬ ನೆಚ್ಚು ಸತಿಪತಿಗಳಲ್ಲಿ ಮೂಡಬೇಕು. ಈ ಜನ್ಮದಲ್ಲಿ ಮಾತ್ರ ಈ ಪ್ರೇಮ ಸತಿಪತಿಯರನ್ನು ಬೆಸೆಯುವುದೆಂದಲ್ಲ. ಪ್ರೇಮ ಶಾಶ್ವತವಾದದ್ದು. ಜನ್ಮಾಂತರ ಸಂಸ್ಕಾರರೂಪಿಯಾದದ್ದು. 'ಹೆಜ್ಜೆಗಳೇಳನು ಈಗಿಡುವಂತೆಯೆ ತಲೆಗಳನೇಳನು ನಡೆದೇವು!' ಎಂದು ಸತಿಪತಿಯರ ಮನಸ್ಸು ನುಡಿಯುತ್ತದೆ. ಇಂತಹ ಸತಿಪತಿಯರ ಸುಂದರ ಸಂಸಾರದಿಂದ ಅವರ ಮನೆ ಮಾತ್ರವಲ್ಲ, ನೆರೆ, ಹೊರೆ, ಊರು, ಕೇರಿ, ಜನ, ಜನಪದ ಎಲ್ಲವೂ ನಲಿಯುವಂತಾಗುತ್ತದೆ. ಈ ಪ್ರೇಮಿಗಳ ಬಾಳಿನ ಒಂದು ಸಂತಸ, ಲೋಕವನ್ನೇ ತೊಳೆದು ಬೆಳಗುವಂತಹ ಮಹಾಪೂರವಾದೀತು ಎಂದು ಕವಿ ಹಾಡಿದ್ದಾರೆ.

'ಸಪ್ತಪದಿ'ಯ ತರುವಾಯ 'ಮನೆತುಂಬಿಸುವುದು' ಎನ್ನುವ ಕವನದ ಭಾವವನ್ನು ನೆನೆಯುವುದು ಅವಶ್ಯ. ಹೆತ್ತ ತಾಯಿತಂದೆ ತಮ್ಮ ಮಗಳನ್ನು ಮದುವೆ ಮಾಡಿಕೊಟ್ಟು ಗಂಡನೊಡನೆ ಅವಳನ್ನು ಅವಳ ಅತ್ತೆ ಮಾವಂದಿರ ಮನೆಗೆ ಕಳುಹಿಸಿಕೊಡುವಾಗ ತಮ್ಮ ಮಗುವನ್ನು ಕುರಿತು ಅವರು ಆಡುವ ಮಾತು ತುಂಬ ಹೃದ್ಯವಾದದ್ದು, ಭಾವಪೂರ್ಣವಾದದ್ದು. 'ಎಮ್ಮ ಮನೆಯಂಗಳದಿ ಬೆಳದೊಂದು ಹೂವು', 'ಎಮ್ಮ ಮನೆಬೆಳಕು' ಎಂದು ಈ ಮುದ್ದುಮಗಳನ್ನು ಪ್ರೀತಿಯಿಂದ ಕರೆದು ಹೆಣ್ಣೊಪ್ಪಿಸುತ್ತಾರೆ ಹೆತ್ತವರು:

'ಮರೆ ಮೋಸ ಕೊಂಕುಗಳನರಿಯಳಿವಳು ;
ಇನಿಸವಿಶ್ವಾಸವನು ಕಂಡರಿಯಳು ;
ಕಷ್ಟಗಳ ಸೈಸದೆಯೆ ಕಾಣದೆಯೆ ಬೆಳೆದವಳು
ಸಲಹಿಕೊಳಿರೀ ಮಗಳನೊಪ್ಪಿಸುವೆವು.

ಕಠಿಣಗಳ ನೆಳಲ್ ಸುಳಿಯಲಮರಿ ಬಾಡುವಳು
ಹಿರಿಮಂಜು ಬಳಲಿಸಿದ ಹೂವಿನಂತೆ
ಸುಖದಲ್ಲಿ ದುಃಖದಲಿ ಎಲ್ಲದೆಸೆಯಿರವಿನಲಿ
ನಿಮ್ಮ ಪಾಲಿಗೆ ನಿಲುವ ಕುವರಿಯಿವಳು.'

ಈ ಮುಂತಾದ ಮಾತುಗಳಲ್ಲಿ ಗಂಡು ಮದುವೆಯಾಗುವ ಹೆಣ್ಣು ಎಷ್ಟು ಕೋಮಲಳು, ಅವಳ ತಾಯಿತಂದೆಯರಿಗೆ ಅವಳು ಎಷ್ಟು ಅಕ್ಕರೆಯವಳು ಎನ್ನುವ ಕಲ್ಪನೆ ಗಂಡಿನ ಬಗೆಗೆ ಬರುತ್ತದೆ. ಆ ಗಂಡಹೆಂಡಿರಲ್ಲಿ ಅನ್ಯೋನ್ಯ ಪ್ರೇಮ ಅಂಕುರಿಸಿ ಪಲ್ಲವಿಸುವುದಕ್ಕೆ ಹೆಣ್ಣಿನ ವಿಷಯವಾಗಿ ಗಂಡಿನಲ್ಲಿ ಈ ಭಾವನೆ ಬಲಿಯಬೇಕಾಗುತ್ತದೆ.

ತನಗೆ ಅನುರೂಪಳಾದ ಹೆಣ್ಣನ್ನು ಗಂಡು, ತಂದು ಮನೆತುಂಬಿಸಿಕೊಳ್ಳುತ್ತಾನೆ. ಗಂಡಹೆಂಡಿರು ಪ್ರಿಯ ಪ್ರೇಯಸಿಯರಾಗುತ್ತಾರೆ. ಸಂಸಾರದ ಸುಖದ ದಿನಗಳು ಪ್ರಾರಂಭವಾಗುತ್ತವೆ. ತನ್ನ ಪ್ರಿಯೆಯ ಉಂಗುರರವಕೇಳಿಯೆ ಪ್ರಿಯನ ಸಂತಸವಾಂತ ಎದೆ ಮೊರೆಯುತ್ತದೆ. ತರುಗಳ ನೆಳಲಲ್ಲಿ ತಿಳಿನೀರಿನ ಕೊಳದಲ್ಲಿ ಅರಳುವ ಹೊನ್ನೈದಿಲೆಯಂತೆ ನೀನು ನನ್ನ ಮನೆಯಲ್ಲಿ ಬಿರಿದರಳುತ್ತ ಬೆಳಗಿ ಸಂತಸವನ್ನು ಬೀರುತ್ತಿದ್ದೀಯೆ ಎಂದು ಪ್ರಿಯನು ನುಡಿಯುತ್ತಾನೆ. ಕಾಲುಂಗುರದ ಮೃದು ನಿನದ, ಕೈಬಳೆಗಳ ಘಲು ಘಲು ನಾದ, ಮುಡಿಯ ಮಲ್ಲಿಗೆ ಜಾಜಿ ಗುಲಾಬಿಗಳ ಪರಿಮಳ, ಆ ಮೊಗದ ನಗುನಗುವ ಕಣ್ಣುಗಳು —ಇವೆಲ್ಲವೂ ಪ್ರಿಯನ ಬಗೆಗೆ ನಲಿವನ್ನೀಯುತ್ತವೆ.

ಈಗ ಪ್ರಿಯನು ಪ್ರೇಮಾರಾಧಕನಾಗುತ್ತಾನೆ: 'ಬಾ ಬಾ ಬಾ ಚೆಲುವೆ ಬಾ ಕಮಲೆ ಮರೆಯುವ ಭವಭಯದಾಯಸವ, ಬರುವುದು ಬರಲೇಳಾಲಬ್ಬರಿಸಲಿ ತೊರೆವುದು ತೊರೆಯಲೇಳುರಿದುಬೀಳಲಿ' ಎಂದು ಚೆನ್ನನು ಚೆನ್ನೆಯನ್ನು ಆಹ್ವಾನಿಸುತ್ತಾನೆ.

'ಒಡಲೆರಡಾದರು ಒಂದು ಮನದಲಿ
ಒಂದು ಹೃದಯದಲ್ಲಂತರಂಗದಲಿ
ಹೊಂದಿ ಬಲಿದ ಮನದೊಂದು ದೃಢದಲಿ –
ಒಂದೇ ಒಲವಿನ ವೀರದಲಿ.'

ಬಳಿಗೆ ಬಾ ಬಾ ಬಾ ಚೆಲುವೆ ಎಂದು ಕರೆಯುತ್ತಾನೆ.

ಮುಂದೆ ಈ ಪ್ರಿಯನು ತನ್ನ ಪ್ರಿಯೆಯನ್ನು ಕುರಿತು ಬಗೆಬಗೆಯ ಪ್ರೇಮಾಲಾಪಗಳನ್ನು ಬಿತ್ತರಿಸುತ್ತಾನೆ :

'ಎಲೆವೊಲಾನಿದ್ದಂದು
ಹೂವಿನೊಳು ನೀನಿದ್ದೆ
ಸುಮದೊಲಾನಿರುತಿರಲು
ನೀನು ಪರಿಮಳವು ;

ಫಲದೊಲಾನಿರುವಂದು
ಸವಿಯವೊಲು ನೀನಿರುವೆ
ಎನ್ನ ಹೃದಯವು ನೀನು
ನಿನ್ನ ನಲ್ಮನೆಯು ನಾನು.'

ಹೀಗೆ ಈ ಕಾದಲ ಕಾದಲೆಯರಲ್ಲಿ ಪ್ರೇಮ ಬಲಿಯುತ್ತದೆ. ಬಗೆಬಗೆಯ ಆಮೋದಪ್ರಮೋದಗಳನ್ನು ಸುಖಸಂಕಥಾವಿನೋದದಿಂದ ಈ ಪ್ರಿಯರು ಕಾಲಕಳೆಯುತ್ತಾರೆ. ಹೀಗೆ ಕೂಡಿ ಕಳೆದ ಕಾಲ ಮನಸ್ಸಿನ ಫಲಕದ ಮೇಲೆ 'ಅಳಿಸದ ನೆನಪು' ಎಂಬಂತೆ ಅಚ್ಚೊತ್ತಿ ನಿಲ್ಲುತ್ತದೆ. 'ನಿನ್ನೆ ನಡೆದಂತಿಹುದ ಮರೆವೆನೆಂತು? ಎನ್ನ ಕಂಗಳ ಮುಂದೆ ಚಿತ್ರ ಕಟ್ಟಿದೊಲಿಹುದು, ಚಕ್ರವಾಕಗಳಂತೆ ಕೂಡಿ ಮೆಲ್ಲುಲಿದೆವೇ ಮಿಕ್ಕ ಲೋಕವ ಮರೆತು ಒರ್ವರೊರ್ವರೊಳು' ಎಂದು ತಮ್ಮ ದಿನಾಂತದ, ವನಾಂತದ ಬಗೆಬಗೆಯ ವಿನೋದಗಳನ್ನು, ಕೇಳಿಗಳನ್ನು, ಹಾಡುಹರಟೆಗಳನ್ನು ನೆನೆನೆನೆದು ಪ್ರಕೃತಿಯ ಪ್ರಶಾಂತವೂ ರಮಣೀಯವೂ ಆದ ಆವರಣದಲ್ಲಿ ತಾವು ಸುಖಪಟ್ಟ ಕ್ಷಣಗಳನ್ನು ಸ್ಮರಿಸಿ ಸ್ಮರಿಸಿ ಸ್ಮರಣೆಯಲ್ಲಿಯೇ ಒಂದು ತೆರನಾದ ಪರಿಣಾಮಸುಖವನ್ನು ಈ ನಲ್ಲನು ಕಾಣುತ್ತಾನೆ.

ಇಂತಹ ಕಾದಲನು ತನ್ನ ಸತಿಯ ಚೆಲುವನ್ನು ಬಗೆಬಗೆಯಾಗಿ ಬಣ್ಣಿಸುತ್ತಾನೆ. 'ಸಿರಿ' ಎನ್ನುವ ಒಂದು ಕವಿತೆಯಲ್ಲಿ ಈ ಚೆಲುವಿನ ಸುಂದರವಾದ ಚಿತ್ರ ಕಾಣಬರುತ್ತದೆ. ತನ್ನ ಕಣ್ಣಿಗೂ ತನ್ನ ಬಗೆಗೂ ತನ್ನ ಕಿವಿಗೂ ಯಾವ ಯಾವ ಅಲಂಕಾರ ಸೊಬಗು ನಿನದ ಪ್ರಿಯವಾದದ್ದು ಎಂದು ಪ್ರಿಯನು ಬಣ್ಣಿಸುತ್ತಾನೆ. ಈ ಬಣ್ಣನೆಯ ಎರಡು ಚಿತ್ರಗಳನ್ನು ಇಲ್ಲಿ ಕೊಡಬಹುದು:

'ಮುಂಗುರುಲು ಮುಂದುಗಡೆ ತೊಂಡಲೆದು ಹಾರುತಿರೆ
ಹಿಂದುಗಡೆ ಭುಜಕಿಳಿದು ತುಂಬುಮುಡಿ ತೂಗುತಿರೆ
ಕುಂಕುಮದ ಪುಡಿ ನೊಸಲ ನಡುವೆ ತಾ ರಂಜಿಸಿರೆ
—ಅದುವೆ ಸಿಂಗರವೆನ್ನ ಕಣ್ಣೆಚೆಲುವು.

ಒಂದು ಅಂಗುಲದಂಚ ಬಣ್ಣದೊಡಲಿನ ಸೀರೆ,
ಬಿಳಿಯ ಕುಪ್ಪಸ, ತುರುಬು ಗುಂಡು_ಸೆಕ್ಕು;
ಚಪ್ಪರದ ಮಲ್ಲಿಗೆಗೆ ತೋಳೆತ್ತಿ ಆಡುತಿರೆ
ಕೈಬಳೆಯು ಘಲ್ಲೆಂದು ಘಲುಕೆಂದು ಉಲುಕುತಿರೆ
—ಅದುವೆ ಸಿಂಗರವೆನ್ನ ಕಿವಿಗಳಿಂಪು.'

ಹೀಗೆ ಕೇವಲ ಬಾಹ್ಯಸೌಂದರ್ಯ ಮಾತ್ರವೇ ನಲ್ಲನಿಗೆ ಆಪ್ಯಾಯಮಾನವಾಗುತ್ತದೆ ಎಂದಲ್ಲ; ಈ ಸೌಂದರ್ಯಗಳ ಜೊತೆಗೆ ಇದನ್ನೂ ಮೀರಿಸುವ ಅಂತರಂಗದ ಎದೆಯೊಲುಮೆಯನ್ನೇ ಅವನು ಹಾಡುತ್ತಾನೆ. ಹೊರಗಿನ ಜಗತ್ತಿನ ಕುಟಿಲ ನಿಷ್ಕರುಣೆಗಳನ್ನೂ ಕರುಬು ಉಪೇಕ್ಷೆಗಳನ್ನೂ ಕಂಡು ನೊಂದ ಮನಸ್ಸಿಗೆ ಮನೆಗೆ ಬಂದಾಗ ಸತಿಯ ಈ ವೈಮನಗಳ ಚೆಲುವು ಒಲವುಗಳು ಅವನ ಚೇತನಕ್ಕೆ ವಿಶೇಷ ಸ್ಫೂರ್ತಿಯನ್ನು ಕೊಡುತ್ತವೆ.

ಇಲ್ಲಿಯ ವರೆಗೆ ಗಂಡು, ಹೆಣ್ಣಿನ ವಿಷಯದಲ್ಲಿ ತಾಳುವ ಮನೋಭಾವವನ್ನು ಕಂಡದ್ದಾಗಿದೆ. ಮುಂದಿನ ಪದ್ಯದಲ್ಲಿ ಹೆಣ್ಣು, ಗಂಡಿನ ವಿಷಯದಲ್ಲಿ ಯಾವ ಮನೋಭಾವವನ್ನು ತಾಳಬಲ್ಲುದು ಎಂಬುದನ್ನು 'ಮಡದಿ' ಎನ್ನುವ ಕವಿತೆಯಲ್ಲಿ ಕವಿ ಕಾಣಿಸಿದ್ದಾರೆ. ಗೃಹಿಣಿಯಾಪವಳ ನಿಶ್ಚಲವೂ, ನಿರ್ಮಲವೂ ಆದ ಪತಿಪ್ರೇಮ ಇಲ್ಲಿ ವ್ಯಕ್ತವಾಗಿದೆ. 'ನೀವಿಲ್ಲದ ಮನೆ ಬರಿದಾಗಿ ಕಾಂಬುದು, ನೀವಿದ್ದರೆ ಮನ ತುಂಬಿಹುದು; ನೀವಿಲ್ಲದೆ ಮನೆ ಕೆಲಸಗಳಾಗವು; ನೀವಿಲ್ಲದೆ ಬಾಳು ಬೇಸರವು' ಎಂದು ಪ್ರಾರಂಭವಾಗುವ ಈ ಕವಿತೆ

ಯಲ್ಲಿ ಗರತಿಯ ಸ್ವಚ್ಛವಾದ ಪ್ರೇಮದ ಹೃದಯ ತೆರೆದು ತೋರುತ್ತದೆ. ಪತಿ ಊರಿನಲ್ಲಿ ಇಲ್ಲದೇ ಇದ್ದಾಗ 'ಮನೆಯಾಚೆ, ಊರಾಚೆ ಮನಪೋಡಿ ದಣಿವುದು; ಗಿಡಕೆ ದಿನದ ನೀರು ನಿಲ್ಲುವುದು' ಎಂದು ಈ ಗರತಿ ಪತಿಯ ಕಾತರದಲ್ಲಿ ಮನೆಯ ಕೆಲಸಗಳಲ್ಲಿಯೂ ಆಲಸಿಕೆಯನ್ನು ತೋರುತ್ತಾಳೆ. 'ಇಂತಹ ತನ್ನ ಮನಸ್ಸಿನ ಬೇಗೆಯನ್ನು ಹೇಳಿದರೆ ಜನ ಪರಿಹಾಸಗೆಯ್ಯುತ್ತಾರೆ. ಹೇಳದೆ ಇದ್ದರೆ ಬೇನೆ ಇನ್ನೂ ಮೊನಚಾಗುತ್ತದೆ, ಇನ್ನೂ ಮೊಸೆಯಾಗುತ್ತದೆ. ಬೆದರ ಹೆಣ್ಣು ಎಂದು ನೀವು ಆಡಿಕೊಂಡು ನಗುತ್ತೀರಿ. ನಾನು ನಿಮ್ಮನ್ನಗಲಿ ಒಂಟಿಯಾಗಿ ಇರಲಾರೆ' ಎಂದು ಈ ಹೆಣ್ಣು ಪತಿಯ ಪ್ರೇಮವನ್ನೂ, ಸ್ನೇಹವನ್ನೂ, ಸಾಮೀಪ್ಯಸುಖವನ್ನೂ ಬಯಸಿ ಬಯಸಿ ಅವನ ಅಗಲಿಕೆಯನ್ನು ಸಹಿಸಲಾರದೆ ಕೊರಗುತ್ತಾಳೆ.

'ಅಪಾತ್ರ' ಎನ್ನುವ ಇನ್ನೊಂದು ಕವಿತೆಯಲ್ಲಿ ಪ್ರಿಯನು ತನ್ನ ಪ್ರಿಯೆಯನ್ನು ಕುರಿತು ನೀನು ನನ್ನನ್ನು ಇಷ್ಟೊಂದು ಪ್ರೀತಿಸಿದ್ದೀಯೆ; ನಿನ್ನ ಪ್ರೀತಿಗೆ ನಾನು ಪಾತ್ರನೆ ಎಂಬ ಶಂಕೆ ನನ್ನನ್ನು ಬಾಧಿಸುತ್ತಿದೆ ಎಂದುಕೊಳ್ಳುತ್ತಾನೆ. ಸುಖದಲ್ಲಿಯೂ ದುಃಖದಲ್ಲಿಯೂ ಸ್ನೇಹಮಯಿಯಾಗಿ ನೀನು ನನ್ನೊಡನೆ ಇದ್ದೀಯೆ, ನನಗೋಸ್ಕರ ಜನರ ನಿಂದೆ ಅಪವಾದಗಳನ್ನು ಹೊತ್ತುಕೊಂಡೆ; ನಿನ್ನ ಕಷ್ಟವನ್ನು ಮರೆತು ನನ್ನ ಕಷ್ಟಗಳನ್ನು ಹಗುರಗೈದೆ. ನಿನ್ನ 'ಒಲುಮೆ ತುಂಬಿದ ಕಣ್ಣು ನಂದನದ ಹಣ್ಣು.' ಪ್ರೀತಿ ತುಂಬಿದ ನಿನ್ನ ಹೃದಯದಲ್ಲಿ ಸೃಷ್ಟಿಯ ಸೌಭಾಗ್ಯವೆಲ್ಲವನ್ನೂ ನಾನು ಕಾಣುತ್ತೇನೆ. ನನಗೆ ಆ ಹೃದಯದಲ್ಲಿ ಸಕಲ ವಾದ್ಯದ ಮೇಳವೂ ದಿವ್ಯಕಿನ್ನರರ ಗಾನವೂ ಪುಣ್ಯದ ಅಮೃತದ ಪಾನವೂ ದೊರೆಯುತ್ತದೆ. ಇಂತೆಲ್ಲ ಚಿತ್ತರಿಸಿ ಕೊನೆಗೆ 'ಏನನೀವೆನು ಹೇಳು ಕೆಳೆಗೆ ಪ್ರೇಮಕೆ ನಾನು ನಿನ್ನ ಪ್ರಣಯದ ಪುಣ್ಯ ದಾನಕೊಂಡವನು; ಋಣವ ಹೊರಿಸುತ್ತಿರುವೆ ತೀರಿಸುವೆ ನಾನೆಂತು ಎಂದಿಗಾ ಸೌಭಾಗ್ಯ ದೊರೆವುದೆನಗೆ; ಧನ್ಯೆ ತ್ಯಾಗವ ಗೈವೆ ನಿನ್ನಾತ್ಮವರ್ಪಿಸುವೆ ಇನಿತು ಹಿರಿದಾನಕ್ಕೆ ಪಾತ್ರನಹೆನೆಂತು?' ಎಂದು ಗಂಡು ಕೇಳುತ್ತಾನೆ. ಈ ಮಾತುಗಳಲ್ಲಿ ಪ್ರೇಮದ ಋಣವನ್ನು ಏನು ಮಾಡಿದರೂ ತೀರಿಸುವುದು ಅಸಾಧ್ಯ. ಅದು ಅಷ್ಟು ಗುರುತರವಾದದ್ದು; ಪವಿತ್ರವಾದದ್ದು ಎಂದು ಕವಿ ಸಾರಿದ್ದಾರೆ. ಹೆಣ್ಣಿನ ಪ್ರೇಮದ ನೆಲೆ ಬೆಲೆಗಳನ್ನು ಯತ್ಕಿಂಚಿತ್ತಾದರೂ ಅರಿತು ಅವಳ ಆ ತ್ಯಾಗದ

ಮಹಿಮೆಯನ್ನು ಗಂಡು ಕೊಂಡಾಡುವುದಾದರೆ ಅದೇ ಹೆಣ್ಣಿನ ತ್ಯಾಗಕ್ಕೆ ಪ್ರತಿಫಲವಾದೀತು.

ಇಷ್ಟು ಅಪೂರ್ವವಾದ ಹೆಣ್ಣಿನ ಪ್ರೇಮಕ್ಕೆ ತಾನು ಅಪಾತ್ರ ಎಂದು ಗಂಡು ನುಡಿದರೆ ಅದಕ್ಕೆ ಪ್ರತಿಯಾಗಿ ನೀವೇ ನನಗೆ ಸರಿಯಾದ ದಾನಪಾತ್ರ ಎಂದು ಹೆಣ್ಣು ನುಡಿಯಬೇಕು. ಇಂತಹ ಭಾವನೆಯ ಒಂದು ಪದ್ಯ 'ದಾನ ಪಾತ್ರ'. 'ನೀವಿತ್ತರೆನಗುಂಟು, ಇಲ್ಲದಿರಲೇನಿಲ್ಲ. ಬೇಡಿ ಗಳಿಸಲುಬಹುದೆ ಕೆಳೆಯ, ಒಲವ?' ಎಂದು ಹೆಣ್ಣು ಕೇಳುತ್ತಾಳೆ. 'ನಿಮ್ಮ ಕರುಣೆಯ ಕುಡಿಯ ಒಂದೆಳೆಯು ಬೀರಿರಲು ಅದುವೆ ಹಗಲೆಂದೆಣಿಸಿ ನಾ ನಲಿವೆನು' ಎಂದು ಆಕೆ ಹೇಳುತ್ತಾಳೆ. 'ನಿಮಗೆ ಬೇಕೆಂದಿರಲಿ ಬೇಡವಾಗುತಲಿರಲಿ ನಿಮ್ಮೆಣಿಕೆ ತೂಕಕ್ಕೆ ನಾನೇರದಿರಲಿ. ಎನ್ನ ಬಾಳ್ ದಿನದಿನಕೆ ಸವಿಯಾಗುವಂದದಲಿ ರಸವಿಟ್ಟು ಬಲಗೊಳುವ ಹರಕೆ ನೀಡಿ' ಎಂದು ಹೆಣ್ಣು ಬೇಡುತ್ತಾಳೆ. ಹೀಗೆ 'ಅಪಾತ್ರ', 'ದಾನಪಾತ್ರ' ಎರಡೂ ಮನದನ್ನ ಮನದನ್ನೆಯರ ಪರೇಂಗಿತ ಜ್ಞಾನದ ಪ್ರಣತೆಯಲ್ಲಿ ಹೊತ್ತಿಸಿದ ಎರಡು ಕುಡಿವೆಳಗುಗಳು.

ಹೀಗೆ ನಲ್ಲನಲ್ಲೆಯರ, ಮನದನ್ನ ಮನದನ್ನೆಯರ ಪ್ರೀತಿಯ ಸಂಸಾರ ಮುಂದುವರಿಯುತ್ತದೆ. ಆಗೀಗ ವಿನೋದಕ್ಕಾಗಿ ಸರಸಕ್ಕಾಗಿ ಗಂಡು, ಹೆಣ್ಣನ್ನು ಕುರಿತು ಚೆಲ್ಲಾಟವಾಡುತ್ತಾನೆ. ಆ ಚೆಲ್ಲಾಟದ ಒಂದು ರಮ್ಯವಾದ ಪ್ರಣಯ ಚೇಷ್ಟೆಯ ಚಿತ್ರ 'ಕೊಂಕು' ಎಂಬ ಕವಿತೆಯಲ್ಲಿ ರೂಪುಗೊಂಡಿದೆ. 'ಹುಬ್ಬು, ನುಡಿ, ಕಣ್ಣ ಕುಡಿನೋಟ ಒಂದು ಒಂದನು ಮೀರಿ ಕೊಂಕು ಕಡು ಕೊಂಕು' ಎಂದು ಪ್ರಾರಂಭವಾಗುವ ಈ ಪದ್ಯದಲ್ಲಿ ನಲ್ಲನಲ್ಲೆಯರ ಚೆಲ್ಲಾಟ ಹೃದ್ಯವಾಗಿ ನಿರೂಪಿತವಾಗಿದೆ. 'ನಿಡುಬಯಕೆಯನ್ನು ಸಲ್ಲಿಸುತ್ತಿದ್ದರೆ ಒಲ್ಲೆ ಬೇಡವೆನ್ನುತ್ತೀರಿ. ಮನಕ್ಕೆ ಬೇಡಾದ್ದನ್ನೇ ಒಪ್ಪುತ್ತೀರಿ. ತೆರೆದ ಕಣ್ಣಿನಲ್ಲಿ ಇತ್ತ ನೋಡುತ್ತಿದ್ದೀರಿ ಎನ್ನಲು ಎಲ್ಲಿಯದನ್ನೋ ಯಾವುದನ್ನೋ ಕಾಣುತ್ತಿರುವಿರಿ. ಕಣ್ಣು ಮುಚ್ಚಿದ್ದಾರೆ ಎಂದು ಬೇರೆ ಕಡೆ ತಿರುಗಿದರೆ ಕೆಳಗಣ್ಣನೋಟದಲ್ಲಿ ಹೊಂಚುಕಾಯುತ್ತಿರುವಿರಿ. ಇದೇ ಸರಿ ನಿಶ್ಚಯ ಎಂದು ನಂಬಿದರೆ ಅಲ್ಲ ಅಲ್ಲ ಎಂದು ತಲೆಯಲ್ಲಾಡಿಸುತ್ತೀರಿ' ಹೀಗೆ ಪದ್ಯ ಮುಂದುವರಿಯುತ್ತದೆ. ಕೇವಲ ಹುಡುಗಾಟಿಕೆಗಾಗಿ, ವಿನೋದಕ್ಕಾಗಿ ಇಂತಹ ಸೋಗು ನಲ್ಲನಲ್ಲೆಯರಲ್ಲಿ ನಡೆಯುವುದು ಸರ್ವಸಾಮಾನ್ಯ.

'ನೀವು ಇಲ್ಲದ ಬಾಳ್ಗೆ ಶುಚಿಯುಂಟೆ ರುಚಿಯುಂಟೆ?
ನಿಮ್ಮೊಡ್ಡು ಜಾಲದಿಂ ಬಿಡುಗಡೆಗಳುಂಟೆ?'

ಈ ಕೊನೆಯೆರಡು ಪಾದಗಳಲ್ಲಿ ಈ ಪ್ರೇಮಕೇಳಿಯ ಸೋಗಿಗೆ ಕೊನೆ ಮೊದಲಿಲ್ಲವೆಂದೂ ಈ ಆಟದಲ್ಲಿ ಸೋತವರೇ ಗೆದ್ದಂತೆ ಎಂದೂ, ಗೆದ್ದವರೇ ಸೋತಂತೆ ಎಂದೂ ಇಂತಹ ಲೀಲಾವಿನೋದಗಳಿಂದ ಒಬ್ಬರನ್ನೊಬ್ಬರು ಅರಿಯುವುದೂ, ಕಷ್ಟಕಿಲ್ಬಿಷಗಳನ್ನು ಮರೆಯುವುದು ಸಾಧ್ಯ ಎನ್ನುವುದೂ ಧ್ವನಿತವಾಗುತ್ತಿದೆ.

ಸತಿಪತಿಯರ ದಾಂಪತ್ಯಜೀವನ ಎಲ್ಲ ಕಾಲಕ್ಕೂ ಸುಖವಾಗಿರುತ್ತದೆ ಎಂದು ಹೇಳುವುದಕ್ಕಿಲ್ಲ—ಬಗೆಬಗೆಯ ಕಷ್ಟನಷ್ಟಗಳಿಂದ ಆಗಾಗ ವಿರಸದ ಸಂದರ್ಭಗಳು ಒದಗಿಬರುತ್ತವೆ. ಇಂತಹ ಒಂದು ವಿರಸದ ಚಿತ್ರವನ್ನು 'ಸವೆದ ಹರುಷ'ದಲ್ಲಿ ನಾವು ಕಾಣುತ್ತೇವೆ. ಸೃಷ್ಟಿ ಮೋಹಕವಾಗಿದೆ; ನಕ್ಷತ್ರಗಳು ಆಗಸದಲ್ಲಿ ಹೊಳೆಯುತ್ತಿವೆ; ಚಂದ್ರನು ಬೆಳಗುತ್ತಿದ್ದಾನೆ. ಗಂಡಿನ ಹೃದಯದಲ್ಲಿ ಪ್ರೇಮ ಉಕ್ಕೇರಿದೆ ಆದರೂ ಹೆಣ್ಣು ಯಾವುದೋ ದುಃಖದಲ್ಲಿ ಮುಖವನ್ನು ಗಂಟಿಕ್ಕಿದ್ದಾಳೆ. ಕೆಟ್ಟ ಮಾತುಗಳನ್ನು ಆಡುತ್ತಾಳೆ. 'ಬಯಕೆ ನೈತೆರೆದಿರುವ ಕಾಲಕೆ ನುಡಿಯು ಗರಗಸ ಕುಯ್ಯುತಿದೆ; ಹಾಡ ಹೊಮ್ಮಿಸಿ ಕೊರಲು ತೆರೆಯಲು ಬಿರುಬಿನುಬ್ಬಸ ತೊಡಕಿದೆ; ಚಿಮ್ಮಿ ಚಿಗಿಯುವ ಒಲುಮೆ ಒರತೆಯ ಕಟ್ಟಿ ಗರಳವು ಉಕ್ಕಿದೆ' ಎಂದು ಮುಂತಾಗಿ ಕವಿ ವರ್ಣಿಸಿದ್ದಾರೆ.

'ನಗುವ ಚಂದ್ರ' ಎನ್ನುವ ಕವಿತೆಯಲ್ಲಿಯೂ ಮುನಿದ ಮಡದಿಯನ್ನೇ ಕುರಿತು ನುಡಿಯುವ ಗಂಡಿನ ಒಂದು ಚಿತ್ರವಿದೆ. 'ನೀರೆ, ನಮ್ಮ ಸಿಟ್ಟು ನೋಡಿ ಬೆಳ್ಳಿಚಂದ್ರನು ನಗುತ್ತಾನೆ ಇನ್ನು ನಿಮಿಷದ ಅರ್ಧದಲ್ಲಿ ನೀನು ಕರಗುತ್ತೀಯೆ' ಎನ್ನುತ್ತಾನೆ. ನಲ್ಲನು ತಮ್ಮ ಮುನಿಸನ್ನು ನೋಡಿ ಚಂದ್ರನು ನಗುವನೆಂದು ವರ್ಣಿಸಿರುವುದು ತೀರ ನೂತನವಾಗಿದೆ. ಜೊತೆಗೆ ನಲ್ಲನಿಗೆ ಒಪ್ಪಿಗೆಯಾದ ಉಡಿಗೆತೊಡಿಗೆಗಳನ್ನೇ ನಲ್ಲೆ ತೊಟ್ಟುಕೊಳ್ಳುತ್ತಿದ್ದಾಳೆಂದು ಚಂದ್ರ ಹೇಳುತ್ತಿದ್ದಾನೆ ಎನ್ನುವ ರೀತಿಯಲ್ಲಿ ನಲ್ಲನು ನಲ್ಲೆಯನ್ನು ಸಮಾಧಾನಪಡಿಸುತ್ತಿದ್ದಾನೆ. ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಈ ಕವಿಕಲ್ಪನೆಯ ಸೊಬಗು ನಮಗೆ ವೇದ್ಯವಾಗುತ್ತದೆ. 'ನೀರನೀರೆಯರೊಲಿದು ಸೇರಲು ಮೂರು ಲೋಕವು ನಲಿಯದೆ; ಎರಡು ಬಾಳ್ಗಳು ಬೆರೆವ ಹರುಷದಿ ಇಳೆಯ ಹರುಷವು

ಬೆಳೆಯದೆ' ಎಂದು ಕವಿ ಹೇಳಿದ್ದಾರೆ. ಎರಡು ಜೀವಿಗಳು ಕೂಡಿ ಬಾಳುವುದಕ್ಕಿಂತ, ಒಲಿದು ಬಾಳುವುದಕ್ಕಿಂತ ದೊಡ್ಡದು ಯಾವುದಿದೆ—ಜಗದಲ್ಲಿ?

'ಅಗಲಿಕೆ', 'ವಿರಹಿ' ಎಂಬೆರಡು ಕವನಗಳಲ್ಲಿ ಇಂತಹ ಅನ್ಯೋನ್ಯಾಶ್ರಯಿಗಳಾದ ಸತಿಪತಿಗಳ ವಿರಹಕಾಲದ ಮನೋಧರ್ಮದ ಚಿತ್ರವನ್ನು ಕೊಡಲಾಗಿದೆ. ಹೆಣ್ಣಿಗಾಗಲಿ, ಗಂಡಿಗಾಗಲಿ ಅಗಲಿಕೆಯೆನ್ನುವುದು ಸಹಿಸಲು ಸಾಧ್ಯವಿಲ್ಲದಷ್ಟು ನೋವಾಗುವುದು ಸಹಜ. 'ಮೇಘದೂತ'ದಲ್ಲಿ ಬರುವ ವಿರಹಿ ವಿರಹಿಣಿಯರ ಚಿತ್ರ ಜಗತ್ಪ್ರಸಿದ್ಧವಾದ್ದಷ್ಟೆ? ಅವಕ್ಕೆ ಕಡಿಮೆಯಿಲ್ಲದ ಬಣ್ಣದಲ್ಲಿ ನಮ್ಮ ಕಾಲಕ್ಕೆ ವಿಶಿಷ್ಟವಾದ ರುಚಿಯಲ್ಲಿ ಇಲ್ಲಿಯ ಚಿತ್ರ ರೂಪುಗೊಂಡಿದೆ.

ನೀನಾರೆ?, ನಾಟ್ಯಾನುಕರಣ, ನಿನಗಾಗಿ, ಸೆಳೆ, ಇವಳು, ಕಣ್ಣು, ಆ ನೋಟ, ಬೇಡ—ಈ ಕವನಗಳಲ್ಲಿ ಬೇರೊಂದು ರೀತಿಯ ಪ್ರಣಯಪ್ರಪಂಚ ವ್ಯಕ್ತವಾಗಿದೆ ಎನ್ನಬಹುದು. ಹೊಳೆಹೊಳೆಯುವ ತಿಳಿಯ ಕಣ್ಣು, ಬೆದರನರಿಯದ ಸುಂದರ ಮೋಹ, ನುಡಿವ ಚದುರಿನ ಸೆಳೆಯ ತುಟಿ, ನಡೆಗೆ ಬಳುಕುವ ನುಣುಪು ಕದಪು—ಮುಂತಾದವುಗಳಿಂದ ನೋಡಿದವರ ಚಿತ್ತವನ್ನು ಚಂಚಲಗೊಳಿಸುವ ಬಿಂಕಿಯೊಬ್ಬಳ ಚಿತ್ರ 'ನೀನಾರೆ' ಎಂಬ ಕವನದಲ್ಲಿ ರೂಪುಗೊಂಡಿದೆ. 'ಮಿನುಗು ಮೂಗುತಿ ಬೆಡಗಿ', 'ಚಿಗರಿ ನಡಗೆಯ ಹೆಣ್ಣೆ', 'ದಾರಿ ಕಣ್ಗಳ ಬಲೆ' ಎಂದು ಮುಂತಾಗಿ ಆಕೆಯನ್ನು ಸಂಬೋಧಿಸಿರುವ ರೀತಿ ತೀರ ಮೋಹಕವಾಗಿದೆ. 'ನಾಟ್ಯಾನುಕರಣ' ಇಂತಹ ಇನ್ನೊಬ್ಬ ಬಿಂಕಿ ನರ್ತಕಿಯನ್ನು ಕುರಿತು ಬರೆದದ್ದು, ರಾಗಪ್ರಚೋದಕವಾಗಿದೆ. ಉಂಗುರ-ಕಾಲ್ಗೆಜ್ಜೆ ಥಳಥಳ-ಝಣಝಣ ತಕತೈತ ಕುಣಿಯುತ—ಬರುತಾಳೆ! ಪನ್ನೀರಿನಲಿ ಮಿಂದು ಅತ್ತರು ಮೈಗಿಟ್ಟು ಕತ್ತುರಿ ಮೊಗಕಿಟ್ಟು—ಬರುತಾಳೆ! ಸಿಂಗಾರಿ ಬರುತಾಳೆ, ಬಂಗಾರಿ ಬರುತಾಳೆ, ಚೆಂಗಾವಿ ಜರತಾರಿ ಉಡುತಾಳೆ! ಈ ನರ್ತಕಿ ತನ್ನ ಬಗೆಬಗೆಯ ಭಂಗಿಗಳಿಂದ ಭಾವುಕರನ್ನು ಸೂರೆಗೊಳ್ಳುತ್ತಾಳೆ. 'ಧಿತ್ತೋಂಗ ಝಣತೋಂಗ ಧಿತ್ತೈತ-ತಕತೈತ ತದ್ಧಿಮಿ-ಧಿಮಿಕಿಟ್ಟ-ಕಿಟತೋಂತ' ಎಂದು ನರ್ತಿಸುವ ಈ ಕಠಾರಿ, ಈ ಮಿಠಾರಿ, ಈ ಚಿನ್ನಾರಿ, ಈ ರನ್ನಾರಿ ರಸಿಕರ ವಿಲಾಸಿಗಳ ಕಣ್ಮನಗಳಿಗೆ ಹಬ್ಬವನ್ನೆಸಗುತ್ತಾಳೆ.

'ನಿನಗಾಗಿ' ಎನ್ನುವುದರಲ್ಲಿ ಗಂಡಿನ ಸಹವಾಸಕ್ಕಾಗಿ ಆರ್ತಳಾದ ಹೆಣ್ಣಿನ ಸರ್ವಾರ್ಪಣದ ಮನೋಧರ್ಮದ ಚಿತ್ರವೊಂದು ಮಾತಿನ ಆಕಾರವನ್ನು

ತಳೆದುಬಂದಿದೆ. ತನ್ನ ಒಡಲು, ಮನ, ಎದೆಕಾಮನೆಗಳೂ ಸುರಗಿ, ಸುರಹೊನ್ನೆ, ಜಾಜಿ, ಮೊಸೆಮಲ್ಲೆ, ಗುಲಾಬಿ, ಇರುವಂತಿ, ಪಾದರಿ ಮುಂತಾದ ಸುಮರಾಜಿಗಳೂ ಉಡಿಗೆತೊಡಿಗೆ ಗೆಜ್ಜೆ ಪರಮಾನ್ನ ಪಾಯಸ ಮಿರುಗು ನಲುಗು ಮುದ್ದು ನೆಲಮನೆಗಳೂ ನಿನಗಾಗಿವೆ ಎಂದು ನೀರನನ್ನು ಕರೆದು ಆತನಿಗೆ ಎರೆದು ಆತನ ಪ್ರಣಯವನ್ನು ಹೆಣ್ಣು ಯಾಚಿಸುತ್ತಾಳೆ. 'ನೂರು ಹಸಿವು ಬೇನೆಯನ್ನು ನಾವು ಇಲ್ಲಿ ತುಂಬೇವು, ನೂರು ಜನ್ಮದ ನೋವನ್ನು ಮಾಯಿಸಿ ಮರೆಸೇವು. ಎರಡು ಹುಟ್ಟಿನ ಕಥೆಯು ಸವಿಕಳೆ ಕಂಡೀತು, ಒಂದು ತಾನಕೆ ತೂಗಿ ತೊನೆದೀತು ನಲಿದೀತು'. ಎನ್ನುವ ಆಕೆಯ ಮಾತಿನಲ್ಲಿ ಪ್ರೇಮದ ನಿಶ್ಚಲತೆಯ ಸತ್ವ ಎಷ್ಟು ಮಹತ್ವಪೂರ್ಣವಾದದ್ದು ಎನ್ನುವುದನ್ನು ಕವಿ ಕಾಣಿಸಿದ್ದಾರೆ. ಸೆಳೆ ಎನ್ನುವ ಇನ್ನೊಂದು ಕವನದಲ್ಲಿ ಇಂತಹದೇ ಹೆಣ್ಣಿನ ಮತ್ತೊಂದು ಪ್ರಬಲವಾದ ಬೇಡಿಕೆ ಪ್ರಕಟವಾಗಿದೆ. ಚಿತ್ತವನ್ನು ನಾನಾ ವಿಧವಾದ ಪ್ರಲೋಭನೆಗಳಿಗೆ ಕುದಿಸುವಂತಹ ಪ್ರಕೃತಿಯ ಸನ್ನಿವೇಶದಲ್ಲಿ ಹೆಣ್ಣು ಗಂಡಿನ ಪ್ರೇಮವನ್ನು ಯಾಚಿಸಿದ್ದಾಳೆ :

'ನೀರ ನಿನ್ನಯ ತೆಕ್ಕೆಯೆಳಸುತೆ
ಬಯಕೆ ಬಾಯಬಾಯ್ಬಿಡುವುದು
ನಿನ್ನ ಕಾಣದ ಒಡಲ ಬೇಗೆಯು ನಿಟ್ಟಸಲುವಿಗು ಸುಡುವುದು
ನಿನ್ನೆ ನಾಳೆಯ ಚಿಂತೆ ನಿಲ್ಲಲಿ
ಒಲ್ಲೆ ಹಿತಗಳ ತಡೆಯನು
ಬಂಡು ತುಂಬಿದ ಇಂದಿನೊಡಲನು ಹಿಂಡಿ ಕೆಳೆಯನು ಕಡೆವ ಬಾ.
ಹಿಂದು ಮುಂದಕೆ ತಿರುಗಿ ನೋಡದೆ
ಇಂದನಪ್ಪುತೆ ಬೆರೆವ ಬಾ
ನಾಳೆಯೇನೊ ನಾವ್ಗಳಾರೊ ಯಾರು ಕಂಡರು ಬೇಗ ಬಾ.
ಮಡದಿ ಮಕ್ಕಳ ಸಂಗ ದಿನವೂ
ಇದ್ದೆ ಇರುವುದು ಕೂಡು ಬಾ.
ಹತ್ತು ವರುಷದ ತಂಗಳೂಟವನೊಂದು ಹಬ್ಬದಿ ಮರೆವ ಬಾ'

ಎಂಬಂತಹ ಸಾಲುಗಳಲ್ಲಿ ಪ್ರಕಟವಾಗಿರುವ 'ಸೆಳೆ'ಯ ಆಕರ್ಷಕ ಶಕ್ತಿಯನ್ನೂ ಅದರ ಹಿಂದಿರುವ ಸ್ತ್ರೀಹೃದಯದ ಆರ್ತಸ್ವರವನ್ನೂ ಮೆಚ್ಚಬೇಕು.

ವೃದ್ಧ ಪಣ್ಯಾಂಗನೆಯೊಬ್ಬಳನ್ನು ಕುರಿತು ಹಾಡಿದ ಗೀತ 'ಇವಳು'. ಇವಳು ಎಷ್ಟೋ ಜನ ಅಣ್ಮರನ್ನು ಆಳಿದವಳು, ಆಡಿಸಿದವಳು, ಕಿರುಬೆರಳ ಸುತ್ತಿನಲ್ಲಿಯೇ ತಿರುಗಿಸಿದವಳು; ನೂರರ ಆಯುಷ್ಯವನ್ನು ಆರರಲ್ಲಿ ಕಳೆದವಳು. ಯಾರು ಇವಳನ್ನು ಇಂದು ಕೇಳುತ್ತಾರೆ, ಎಂಬ ಭಾವದಲ್ಲಿ ಪದ್ಯ ಆರಂಭವಾಗುತ್ತದೆ. ಭೋಗಜೀವನಕ್ಕಾಗಿಯೇ ಬಾಳುವೆ ಬಾಳಿ, ಬಳಿಗೆ ಬಂದವರ ಮನೆಮಾರುಗಳನ್ನೆಲ್ಲ ಸೂರೆಮಾಡಿ ತಾನೂ ದೈಹಿಕವಾಗಿಯೂ ಮಾನಸಿಕವಾಗಿಯೂ ನರಳಿ ಈಗ ಕೇಳುವವರಿಲ್ಲದೆ, 'ಕೇರಿಗಳ ಕಂಗಾಳಿ ಜನವೆ ಮೇಲೆನಿಸಿ' ಬೀದಿಯಲ್ಲಿ ಹೋಗುತ್ತಿದ್ದಾಳೆ ಈಕೆ ಎಂದು ಇಂತಹ ಹೆಣ್ಣಿನ ವಿಷಯಕ್ಕೆ ಲೋಕದ ಅನುಕಂಪೆ ತಿರುಗುವಂತೆ ಇರುವ ಅವಳ ಅಧೋಗತಿಯನ್ನು ಚಿತ್ರಿಸಿದ್ದಾರೆ.

'ಕಣ್ಣು' ಎನ್ನುವುದರಲ್ಲಿ ವಿಫಲಪ್ರೇಮದ ಮತ್ತೊಂದು ಚಿತ್ರ ಇದೆ. ಗಂಡು-ಹೆಣ್ಣು ಪರಸ್ಪರ ಪ್ರಥಮ ಸಂದರ್ಶನದಲ್ಲಿಯೇ ಒಲಿದರೂ ಹೆಣ್ಣಿನ ಕಡೆಯವರು ಆ ಹೆಣ್ಣನ್ನು ಬೇರೊಬ್ಬನಿಗೆ ಕೊಡಲೆಂದು ನಿಶ್ಚಯಿಸುತ್ತಾರೆ. ಇದು ಒಲಿದ ಹೆಣ್ಣುಗಂಡುಗಳಿಬ್ಬರಿಗೂ ಸಮಾಧಾನವನ್ನುಂಟುಮಾಡುವುದಿಲ್ಲ. ಗಂಡು ಆ ಹೆಣ್ಣಿನ ಆ ಒಲುಮೆ ತುಂಬಿದ ಕಣ್ಣನ್ನೇ ಆ ಕಣ್ಣಿನ ಆ ಇನಿಯ ನೋಟವನ್ನೇ ನೆನೆನೆನೆದು ಕೊರಗುತ್ತಾನೆ :

'ಇಂದು ನೀನೆಂತಿಹೆಯೊ ಏನ ಗೈಯುತಲಿಹೆಯೊ
ಆವಾವುದನ್ನೆಂತು ನೆನೆಯುತಿಹೆಯೊ
ಎನಗಿಲ್ಲಿ ದಿನದಿನವು ಮನದ ಏಕಾಂತದಲಿ
ಕೊರೆಯಿಕ್ಕಿ ನೆನಪುಕ್ಕಿ ನೆರೆಯಪ್ಪುದು'

ಎಂದು ಹತ್ತು ವರುಷದ ಮೇಲೂ ಆ ಹೆಣ್ಣನ್ನು ಕುರಿತು ಹಾಡುವ ಗಂಡಿನ ನಿಶ್ಚಲಪ್ರೇಮದ ಚಿತ್ರ ಕವಿ ಕೊಟ್ಟಿದ್ದಾರೆ.

'ಆ ನೋಟ' ಎನ್ನುವುದು ಬೇರೊಬ್ಬ ಗಂಡಿನ ಇನ್ನೊಂದು ಚಿತ್ತವೃತ್ತಿಯ ತಾಕಲಾಟವನ್ನು ತೋರುತ್ತದೆ. ತನ್ನ ನಚ್ಚುಮೆಚ್ಚಿನ ಮೊದಲನೆಯ ಹೆಂಡತಿ ಕಷ್ಟದ ದಿನಗಳಲ್ಲಿ ಬಾಳುವೆ ಮಾಡಿ ತೀರಿಕೊಂಡಾಗ ಎರಡನೆಯ ಹೆಂಡತಿ ಭಾಗ್ಯದ ದಿನಗಳಲ್ಲಿ ಮನೆಗೆ ಬರುತ್ತಾಳೆ. 'ಕೊರಲನ್ನು ಮೊಗವನ್ನು ಕೈಯತ್ತ ಬಾಗಿಸುತೆ ಮುಂಗೈಯ ಬಳೆಗಳನು ತಿರುವುತ್ತ' ನಿಲ್ಲುತ್ತಾಳೆ. ಗಂಡು

ಹಾಗೆ ನಿಲ್ಲಬೇಡ ಎನ್ನುತ್ತಾನೆ. 'ಅಸುಖವನ್ನಡಗಿಸುತೆ ಮರೆಮಾಡಿ' ಬಳಲುವ ಆಕೆಯನ್ನು ಹಾಗೆ ಬಳಲಬೇಡ ಎನ್ನುತ್ತಾನೆ. ತನ್ನನ್ನೇ ಕೊಲುವ ಕಣ್ಣುಗಳಿಂದ ನೋಡುವ ಎರಡನೆಯ ಮಡದಿಯನ್ನು 'ನೋಡಿ ಎನ್ನೆದೆಯಿರಿವ ನೆನವುಗಳ ತಾರದಿರು ತುಳಿದು ಮರಸಿಹ ಬಯಕೆ ಕೆರಳುವೊಲು ಮಾಡದಿರು' ಎಂದು ಬೇಡುತ್ತಾನೆ. ಸೌಖ್ಯದ ದಿನಗಳಲ್ಲಿ ಎರಡನೆ ಹೆಂಡತಿ ಬಳಿಯಿದ್ದೂ ಮೊದಲ ಹೆಂಡತಿಯನ್ನೇ ನೆನೆಯುವ ಈತನ ಪ್ರೇಮ ಅನನ್ಯಸಾಧಾರಣ ವಾದದ್ದು.

'ಬೇಡ' ಎನ್ನುವ ಕವಿತೆಯಲ್ಲಿ ಹೆಣ್ಣು ಗಂಡಿಗೆ ಹೇಳುವ ಮಾತು ಇದೆ. ಈ ಹೆಣ್ಣು ಈ ಗಂಡನ್ನು ಸೇರುವ ಮೊದಲೆ ಇವಳ ಪ್ರೇಮವೂ ಸುಖವೂ ಸಂತೋಷವೂ ಬೇರೊಬ್ಬ ಗಂಡಿನಲ್ಲಿ ಮುಗಿದಾಗಿಹೋಗಿತ್ತು. ಅವನ ಪ್ರೇಮವನ್ನು ಕೊನೆಯವರೆಗೂ ಸವಿಯುವ ಭಾಗ್ಯ ಇವಳಿಗೆ ಇರಲಿಲ್ಲ. ಅವನು ಅಗಲಿಹೋದ. ಈಗ ಈತ ಬಳಿ ಬಂದಿದ್ದಾನೆ. ಬೇಕುಬೇಕಾದ ಭೋಗಗಳನ್ನು ಪ್ರೇಮಸುಖಗಳನ್ನು ನೀಡುತ್ತಿದ್ದಾನೆ. ಆದರೂ ಆಕೆಗೆ ಸುಖವಿಲ್ಲ.

'ಆದರೇಂ ನಾ ನಿನ್ನ ಬಿಸಿತೆಕ್ಕೆಯಲ್ಲಿರಲು
ನಡುವೆ ನಿಲುವುದು ಬಂದು ಅವನ ರೂಪು;
ಅವನ ಕುರುಲುಗಳೊಲೆದು ನಗುವು ತೆರೆದು
ಅವನ ಕದಪಿನ ಕಾವು ಕದಪಿಗಿಳಿದು.

ಎಷ್ಟು ತಡೆದರು ಬಗೆಯು ಆ ಅವನನರಸುವುದು
ನಿನ್ನೆಯಲೇನ್ನೈಯಲೆನ್ನ ಸಖನೆ!
ನಿನ್ನ ಕಣ್ಣಲಿ ಅವನ ಹಣೆ ಮುದ್ದು ಕಾಣುವುದು
ನಿನ್ನ ದನಿಯಲಿ ಅವನ ದನಿ ಕೇಳ್ವುದು.

* * *

ಅವನ ಮೋಹವು ಮುರಿದು ಮರೆದಾಗುವರೆಗೆನಗೆ
ನಿನ್ನ ಪ್ರೇಮದ ಋಣವು ಹೊರೆಯಪ್ಪುದು.'

ಹೀಗೆ ಈಕೆ ಮೊದಲ ಒಲುಮೆಯ ಇನಿಯನನ್ನು ಸ್ಮರಿಸಿ ತನ್ನ ಕಟ್ಟಿರಕವನ್ನು ಬಿಚ್ಚುಮನಸ್ಸಿನಿಂದ ನುಡಿಯುತ್ತಾಳೆ.

ಈ ಮೇಲೆ ಹೇಳಿದ ಕೆಲವು ಕವಿತೆಗಳಲ್ಲಿ ಪ್ರೇಮಜೀವನದ ನಾನಾ ಮುಖಗಳನ್ನು ಕವಿ ಚಿತ್ರಿಸಿದ್ದಾರೆ. ಹೆಣ್ಣಿನ ಮತ್ತು ಗಂಡಿನ ಪ್ರೇಮದ

ನಿಶ್ಚಲ ರೂಪವನ್ನು ವರ್ಣಿಸಿದ್ದಾರೆ. ಪ್ರೇಮಾರಾಧನದ ಮೂಲತತ್ವ ಸ್ಥಿರತೆ, ನಿಶ್ಚಲತೆ, ಅದರ ಅಡಿಪಾಯದ ಮೇಲೆ ಪ್ರೇಮಮಂದಿರ ಕಟ್ಟಬೇಕು ಎನ್ನು ವುದು ಇಲ್ಲಿ ಅಡಕವಾಗಿರುವ ತತ್ವ. ಯಾವುದು ಪ್ರೇಮ ಯಾವುದು ಕಾಮ, ಯಾವುದು ಕಾತರ ಯಾವುದು ಆತುರ, ಯಾವುದು ಪೂರ್ಣ ಯಾವುದು ಅಪೂರ್ಣ, ಯಾವುದು ನಿಶ್ಚಲ ಯಾವುದು ಚಂಚಲ, ಎಂಬ ವಿವೇಕಜ್ಞಾನ ಶುಚಿಜೀವನ ದರ್ಶನಕ್ಕೆ ಒಂದು ಕೈಗಂಬ. ಪ್ರೇಮದ ದಾರಿಯಲ್ಲಿ ನಡೆವ ಜನಗಳಿಗೆ ಬೆಳಕು ತೋರುವ ಒಂದು ಕಾವ್ಯದ ಮಣಿದೀಪವನ್ನು ಈ ಕವಿ ಇಲ್ಲಿ ಹೊತ್ತಿಸಿದ್ದಾರೆ.

೪

ಶುಚಿಜೀವನ ದರ್ಶನವನ್ನು ಕುರಿತು ಕವಿ ವ್ಯಕ್ತಪಡಿಸಿರುವ ರಾಷ್ಟ್ರಾಭಿ ಮಾನವನ್ನು ಕಡೆಯದಾಗಿ ಇಲ್ಲಿ ವಿವೇಚಿಸಿದೆ.

ಪರದಷ್ಟೇ ಇಹವೂ ಮುಖ್ಯವಾದದ್ದು; ಈ ಬಾಳು ಬಾಳುವುದಕ್ಕಾ ಗಿಯೇ ಇದೆ; ಇದನ್ನು ಆದಷ್ಟು ಒಳ್ಳೆಯ ರೀತಿಯಲ್ಲಿಯೇ ಬಾಳಬೇಕು. ಹೀಗೆ ಬಾಳಿ ತಾನೂ ದೇಶವೂ ಉದ್ಧಾರವಾಗುವ ಮಾರ್ಗವನ್ನು ಅನುಸರಿಸ ಬೇಕು. ಪ್ರತಿಯೊಬ್ಬನೂ ಧೈರ್ಯದಿಂದಲೂ, ವಿಶ್ವಾಸದಿಂದಲೂ ಬಾಳಿನ ದುರ್ಭರವಾದ ಕಷ್ಟಗಳನ್ನು ಸಹಿಸಿ, ಸುಖಸಂತೋಷಗಳನ್ನು ಕಲ್ಪಿಸಿಕೊಳ್ಳ ಬೇಕು. ಈ ಕಾರ್ಯದಲ್ಲಿ ತನಗೆ ತಾನೇ ಊರುಗೋಲಾಗಿ ತನ್ನ ಧೀಶಕ್ತಿ, ಆತ್ಮಶಕ್ತಿಗಳನ್ನೇ ನೆಚ್ಚಿಕೊಂಡು ಮುಂದುವರೆಯಬೇಕು. ಶತಮಾನ ಶತಮಾನ ಗಳಿಂದಲೂ ಬಂದಿರುವ ಚಿತ್ತದ ದಾಸ್ಯವನ್ನು ಕಿತ್ತೊಗೆದು ರಾಜಕೀಯವಾಗಿ ಪರರ ಆಳ್ವಿಕೆಗೆ ಒಳಪಟ್ಟಿರುವ ನಾವು ಆದಷ್ಟು ಬೇಗ ಸ್ವಾತಂತ್ರ್ಯವನ್ನು ಗಳಿಸಬೇಕು. ಈ ಸ್ವಾತಂತ್ರ್ಯದ ಉದ್ಯಮದಲ್ಲಿ ಆ ಮತದವರು ಈ ಮತ ದವರು ಎನ್ನದೆ ಎಲ್ಲ ಮತದವರೂ ತಾವು ಭಾರತೀಯರೆಂಬ ಕಟ್ಟಭಿಮಾನದಿಂದ ದುಡಿಯಬೇಕು—ಈ ಮುಂತಾದ ಬಗೆಬಗೆಯ ತತ್ವಗಳನ್ನು ಕುರಿತು ಕಟ್ಟಿದ ಕವನಗಳನ್ನು ಇಲ್ಲಿ ಒಂದು ಗುಂಪಾಗಿ ನೋಡಬಹುದು.

'ಏಳಿ', 'ದುಂದುಭಿ', 'ಅಭೀಃ', 'ಪರೀಕ್ಷೆಯ ಸಮಯ', 'ಹೆಮ್ಮರ', 'ಬದುಕು', 'ಗಡಿದಾಟು', 'ಶತಂ ಜೀವೇಮ ಶರದಃ',

'ಹಿನ್ನೋಟ'--ಈ ಮೊದಲಾದ ಕವಿತೆಗಳಲ್ಲಿ ಜನತೆಯನ್ನು ಬಡಿದೆಬ್ಬಿಸುವ ಒಂದು ಘೋಷ ಮೊಳಗುತ್ತದೆ. ಇನ್ನು ರೋದನ ಸಾಕು; ನಮ್ಮ ಸರ್ವ ಶಕ್ತಿಯೂ ಇನ್ನು ಕಾರ್ಯಮುಖೇನ ಅಭಿವ್ಯಕ್ತಿಯನ್ನು ಕಂಡುಕೊಳ್ಳಬೇಕು. ನಾವು ಹೋರಾಡದೆ ಇದ್ದರೆ, ನಾವು ದೇಶವನ್ನು ಕಾಯದೆ ಇದ್ದರೆ ಇನ್ನು ಯಾರು ಹೋರುತ್ತಾರೆ? ಉಧ್ವವೈರಾಗ್ಯ, ಅಭಾವವೈರಾಗ್ಯ, ಶ್ಮಶಾನ ವೈರಾಗ್ಯಗಳನ್ನು ದೂರಮಾಡಿ ಅಜ್ಞಾನ ತಿಮಿರವನ್ನು ದೂರಮಾಡಿ ಸುಜ್ಞಾನ ದೀಪವನ್ನು ಬೆಳಗಿ ಏಳಿರಿ ಎಂದು ಕವಿ ಹಾಡಿದ್ದಾರೆ. ಇದೇ ಭಾವ 'ದುಂದುಭಿ' ಎಂಬ ಕವನದಲ್ಲಿಯೂ ಮೊಳಗುತ್ತದೆ. ಅಲಸತನ, ಮದ, ಮತ್ಸರ, ವಿಪರೀತಮತಿ, ಕುಹಕ ಮುಂತಾದುವುಗಳಿಗೆ ಈಗ ಸಮಯವಿಲ್ಲ. ಇದು ಯುದ್ಧದ ಕಾಲ; ಕಾಳಿಗಕ್ಕೆ ನಾವು ಸಿದ್ಧರಾಗಬೇಕು. ನಮ್ಮ ನಾಡಿನ ಚರಿತ್ರೆ ದ್ರೋಹಗಳ ಕತೆಯಾಯ್ತು; ಬಲುಕಾಲ ಬೀಳಾಯ್ತು; ಹೇಡಿತನವಾಯ್ತು; ಹೊಲೆದಾಸ್ಯ ಪರತಂತ್ರ ತಿರುಕುತನವಾಯ್ತು; ಹಲಕಾಲ ಮಣ್ಮುಕ್ಕಿ ಕೂಲಿದ್ದು ದಾಯ್ತು—ಇನ್ನುಮುಂದೆ ನಾವು ಹೋರಾಡಿ ನಮ್ಮ ದೇಶದ ಕೀರ್ತಿ ಬೆಳಗುವಂತೆ ಮಾಡಬೇಕು. ಎನ್ನುವ ಭಾವ ಇಲ್ಲಿ ಪ್ರಚೋದಿತವಾಗಿದೆ. 'ಅಭೀಃ' ಎನ್ನುವುದು ಎಂತಹ ಹೇಡಿಯ ನರನರಗಳಲ್ಲಿಯೂ ರಕ್ತದ ಕಣಕಣಗಳನ್ನು ಕುದಿಸುವಂಥ ಒಂದು ವೀರ ಉದ್ಘೋಷ. ಯಜ್ಞಶಾಲೆಗಳಿಂದಲೂ, ಬಲಿಯಿಂದಲೂ, ಸೆರೆಯಿಂದಲೂ, ಕಲ್ಲುಗಾಣಗಳಿಂದಲೂ, ಸಿಲುಬೆಗಳ ನೋವಿಂದಲೂ, ವಿಷಪಾತ್ರೆಯ ಒಡಲಿನಿಂದಲೂ, ಸುಡುವ ಉರಿಯ ಮಡಲಿನಿಂದಲೂ, ಅಭೀಃ ಅಭೀಃ ಅಭೀಃ ಎಂಬ ನುಡಿ ಏಳುತ್ತಿದೆ. ಬಲಹೀನರಾದವರು ಎಂದು ಆತ್ಮವನ್ನು ಗಳಿಸಿದ್ದಾರೆ; ಬಲಕ್ಕಾಗಿ ಕಾಯತಕ್ಕವರು ಏನು ಮಾಡಿದ್ದಾರೆ? ಅಧಿಕಾರಕ್ಕೆ ಹೆದರುವವರು ಎಂದು ಏನು ಸಾಧಿಸಿದ್ದಾರೆ ಎಂದು ಈ ಅಭೀಃ ಮಂತ್ರ ನಮ್ಮನ್ನು ಕೇಳುತ್ತದೆ:

'ಯುಗದಗಲ, ಜಗದಗಲ ಎಡೆದೆದ್ದು ನಿಂತಾವು!
ಸಂರಾಜರಬ್ಬರವು ನಡುಗಿಸೀತು!
ಕುಲವೆಂಬ ಮತವೆಂಬ ಕೆಳೆಯೆಂಬ ನಾಡೆಂಬ
ಮಮತೆಗಳ ದಾರಿಯಲಿ ಕತ್ತಲಿಟ್ಟಾವು!
—ಅಭೀಃ! ಅಭೀಃ! ಅಭೀಃ ಎಂಬ ಧ್ರುವತಾರಗೆಯು

ಕತ್ತಲಲಿ ತವಿಲಲ್ಲಿ ದಿಕ್ಕನ್ನು ಕಾಣಿಪುದು
ನಿಜಕಿಟ್ಟ ಮುಸುಕೆತ್ತಿ ಮರೆತೆರೆವುದು.
ಮಣಿಯದಿಪ ಮನವೊಂದು ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು—
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರತೆರದ ಎದೆಯೊಂದು
—ಅಭೀಃ! ಅಭೀಃ! ಅಭೀಃ! ಎಂಬ ತಾರಕವಾಕ್ಯ
ನಾಡಿಯನು ನಡೆಸುತಿರೆ, ಬಾಳನ್ನು ತಿದ್ದುತಿರೆ
ನಡೆ ಮುಂಪಕೆನ್ನುತ್ತೆ ಕೂಗುತಿದೆ ಸುಗ್ಗುತಿವೆ'

ಇದೇ ಉಪದೇಶ 'ಹೆಮ್ಮರ' ಎಂಬ ಕವಿತೆಯ ಕೊನೆಯ ಪಂಕ್ತಿಗಳಲ್ಲಿ ಪ್ರಕಟವಾಗಿದೆ:

'ಅವರವರ ಆತ್ಮವನು ಅವರೆ ಬಲಿಸಲು ಬೇಕು
ಅವರ ಆಕೃತಿ ಮೂರ್ತಿ ತಿದ್ದಿಕೊಳಬೇಕು
ಅವರವರ ದರ್ಶನಕೆ ಸಲ್ಲುವಾದರ್ಶಗಳ
ನೇಮಗಳ ಹೊತ್ತವರೆ ಸಾಧಿಸಲು ಬೇಕು.
ಕಲೆಯಲ್ಲಿ ಕುಲವಿಲ್ಲ ಕೆಳೆಯಲ್ಲಿ ಪದವಿಲ್ಲ
ಇಹಪರದಹಂಕಾರವೊಂದಿಲ್ಲ ಸಾಧನಗಳೆದುರು.
ತನ್ನ ಧರ್ಮವ ತಾನು ಅಪ್ಪಿಕೊಂಡೆತ್ತುತ್ತೆ
ಅಳುಕದೆಯೆ ಬಳುಕದೆಯೆ ಅಡಿಯಿಡಲುಬೇಕು.
ಸೋಲು ನೋವನು ನುಂಗಿ ಕಲ್ಲೆದೆಯ ಮಿಮುಗೈದು
ಸಹನೆ ಕರುಣೆಗಳಮೃತ ಜೆರೆಯುತಿರಬೇಕು
ಬೆಳಕು ನೆಳಲುಗಳಂತೆ ಏಳ್ಗೆ ಬೀಳೆನ್ನುತ್ತೆ
ಮನವ ಸಮತೆಗೆ ಹೂಡಿ ನಲಿಯುತಿರಬೇಕು—
ತಾಳಿಕೊಳ್ಳಲುಬೇಕು ಏನೆಲ್ಲವನು, ಮಗುವೆ,
ತಿರುಳ ಬಲಿಸಲು ಬೇಕು ಹಿರಿಬಾಳನೆಳಸುವವರು.'

ಈ ಸ್ವಾವಲಂಬನ, ಈ ಸ್ವಪ್ರಯತ್ನ, ಈ ಆತ್ಮವಿಶ್ವಾಸ, ಈ ಆತ್ಮಪ್ರತ್ಯಯ ಇವು ಬೆಳೆದಷ್ಟೂ ಬಾಳಿಗೆ ಒಳ್ಳೆಯದು. ಇವುಗಳನ್ನು ತುಂಬಿಕೊಂಡ ಜನರೇ ಸ್ವಾತಂತ್ರ್ಯವನ್ನು ಪಡೆಯಲು ಅರ್ಹರಾಗುತ್ತಾರೆ. ಅವರೇ ಇಹಲೋಕದ ಸರ್ವ ಸುಖಗಳನ್ನೂ ಪಡೆಯಲು ಶಕ್ತರಾಗುತ್ತಾರೆ. ಇಂತಹ

ಬಾಳೇ ಸೌಖ್ಯಪ್ರದವಾದದ್ದು; ಸೌಭಾಗ್ಯದಾಯಿಯಾದದ್ದು. ಕವಿ ಇಂತಹ ತುಂಬುಬಾಳಿನ ಕಡಲಿನಲ್ಲಿ ಮುಳುಗಬೇಕೆಂದು ಕೂಗಿ ಕರೆದು ಹೇಳುತ್ತಾರೆ. 'ಓ! ಮಗುವೆ; ಓ! ಪ್ರಿಯಳೆ; ಓ! ಎನ್ನ ಸಖರೆ; ಬನ್ನಿ ಬಾಳ್ಗಡಲಲ್ಲಿ ಮಿಂದು ಮುಳುಗಿ.'

ಹರಹರ ಮಹಾದೇವ, ಪ್ರಾರ್ಥನೆ, ವಿರೂಪಾಕ್ಷ ಎಂಬ ಕವನಗಳಲ್ಲಿ ದೇಶವನ್ನು ಸ್ವಾತಂತ್ರ್ಯಕ್ಕೆ ನಡೆಸು ಎಂದು ಮಹೇಶ್ವರನನ್ನು ಕುರಿತು ಪ್ರಾರ್ಥಿಸಿದ ಒಂದು ಭಾವ ಪ್ರಬಲವಾಗಿ ಪ್ರಕಟವಾಗಿದೆ. ಪರಹಿತವನ್ನು ಚಿಂತಿಸುವುದಕ್ಕೆ ವಿಶಾಲವಾದ ಬುದ್ಧಿಯನ್ನು ಕೊಡು ಎಂದೂ ಯಾವ ಸಮಯದಲ್ಲಿ ಯಾರು ಸಹಾಯ ಬೇಡಿದರೂ ಸಿದ್ಧರಾಗಿರುವ ವೃತ್ತಿಯನ್ನು ಕೊಡು ಎಂದೂ ಬಲಮದಾಂಧರ ಮುಂದೆ ಬಾಗದಂತೆ ಮಾಡು ಎಂದೂ ಬಲದಲ್ಲಿ ಸಂಪತ್ತಿನಲ್ಲಿ ವಿನಯವನ್ನು ನೀಡು ಎಂದೂ ಕವಿ ಪ್ರಾರ್ಥಿಸಿದ್ದಾರೆ. ಶಿವನನ್ನು ಸ್ತೋತ್ರಮಾಡಿದ ಇನ್ನೊಂದು ಕವಿತೆಯಲ್ಲಿ, ಈ ನಾಡು ನಿನ್ನದು; ಈ ನಾವು ನಿನ್ನ ಮಕ್ಕಳು ನಮ್ಮನ್ನು ನೀನು ದಿಗ್ವಿಜಯಕ್ಕೆ ನಡೆಸು ಎಂದು ಕವಿ ಕೋರಿದ್ದಾರೆ. ಶಿವನು ಇನ್ನೊಮ್ಮೆ ಇಲ್ಲಿಯ ವಿಷವನ್ನು ಕುಡಿಯಬೇಕು. ಇನ್ನೊಮ್ಮೆ ಹಣೆಗಣ್ಣನ್ನು ತೆರೆದು ಇಲ್ಲಿಯ ಅನೈಕ್ಯತೆಯನ್ನು ಸುಡಬೇಕು; ಇನ್ನೊಮ್ಮೆ ತನ್ನ ಜಡೆಯ ಗಂಗೆಯಿಂದ ನಮ್ಮ ಕರಣವನ್ನು ಶುಚಿಗೊಳಿಸ ಬೇಕು ಎಂದು ಮುಂತಾಗಿ ಪ್ರಾರ್ಥಿಸಿದ್ದಾರೆ. ನಾಳೆ ಹುಟ್ಟುವ ಮಕ್ಕಳಿ ಗಾದರೂ ಈ ನಾಡು ಸ್ವಾತಂತ್ರ್ಯಸ್ವರ್ಗದಂತಾಗುವಂತೆ ಕರುಣಿಸಬೇಕೆಂದು ಮೊರೆಯಿತ್ತಿದ್ದಾರೆ. 'ವಿರೂಪಾಕ್ಷ' ಎಂಬ ಕವಿತೆಯಲ್ಲಿಯೂ ಇದೇ ಭಾವ ಬೇರೆ ರೀತಿಯಲ್ಲಿ ವ್ಯಕ್ತವಾಗಿದೆ. ವೈಭವದ ಶಿಖರಕ್ಕೆ ಏರಿದ್ದ ವಿಜಯನಗರ ಅಧೋಗತಿಗೆ ಬಿದ್ದು ಸರ್ವನಾಶವಾಯ್ತು. ಈಗ ಮತ್ತೆ ಅದು ಎದ್ದು ಮೆರೆವುದು ಎಂದು? ಇದನ್ನೆಲ್ಲ ನೋಡುತ್ತಾ ಇನ್ನೂ ಸುಮ್ಮನೆ ಸುಯ್ಯದೆ, ಬೇಯದೆ ಈ ವಿರೂಪಾಕ್ಷ ಪೂಜೆಗೊಳ್ಳುತ್ತಿದ್ದಾನಲ್ಲ ಎಂದು ಕವಿ ಕೊಂಕುನುಡಿ ನುಡಿದಿದ್ದಾರೆ. 'ಹಾರೈಕೆ' ಎನ್ನುವ ಕವನದಲ್ಲಿಯೂ ನಮ್ಮ ದೇಶಕ್ಕೆ ಒಳ್ಳೆಯ ದಾಗಲಿ; ಈಗಿನ ಜಡತೆ, ಮಾಲಿನ್ಯ, ಪಾಪ, ದ್ರೋಹ ಮುರಿದೋಡಲಿ; ಒಳಕೋಟಲೆ ನಿಲ್ಲಲಿ; ನುಡಿಗೆ ಒಂದು ಸಿಂಗರದ ಇಳೆಯೆದ್ದು ನಿಲ್ಲಲಿ ಎಂದು ಮುಂತಾಗಿ ಹಾರೈಸಿದ್ದಾರೆ.

'ಮೃಗಶಾಲೆಯ ಸಿಂಹಗಳು' ಸ್ವಾತಂತ್ರ್ಯದ ಅಪೇಕ್ಷೆಯನ್ನು ಬಹಳ ಮಾರ್ಮಿಕವಾಗಿ ಚಿತ್ರಿಸುವ ಒಂದು ಸೊಗಸಾದ ಕವಿತೆ. ಸ್ವತಂತ್ರರಾಗಿ ಬದುಕಿ ಬಾಳಿದ ಜನಾಂಗ ಪರಕೀಯರ ದಾಸ್ಯಕ್ಕೆ ಒಳಗಾದರೆ ಅವರ ಬಾಳ್ವೆ ಹೇಗಿರುತ್ತದೆ? ಅವರ ಮನಸ್ಸಿನ ಒಳತೋಟಿ ಎಂಥದು? ಎನ್ನುವುದಕ್ಕೆ ಪ್ರತಿಮೆಯಂತೆ ಮೃಗಶಾಲೆಯ ವೃದ್ಧ ಸಿಂಹ ಸಿಂಹಿಣಿಯರನ್ನು ಕವಿ ಚಿತ್ರಿಸಿದ್ದಾರೆ. ದಾಸ್ಯದಲ್ಲಿಯೇ ಹುಟ್ಟಿಬೆಳೆದ ಮಕ್ಕಳು ಸ್ವಾತಂತ್ರ್ಯದ ಸವಿಯನ್ನೇ ಅರಿಯದೆ ಹಿರಿಯರ ಮಹಿಮೆಗಳನ್ನು ಊಹಿಸಲೂ ಆರದೆ ದಾಸ್ಯವೇ ಸ್ವರ್ಗ ಸುಖತುಲ್ಯವೆಂದು ಗಣಿಸುವುದು ಸಹಜ; ಅಂತಹ ಮುಗ್ಧಜನರ ಪ್ರತೀಕಗಳಾಗಿ ಈ ಸಿಂಹ ಸಿಂಹಿಣಿಯರ ಮರಿಗಳನ್ನು ಕವಿ ಚಿತ್ರಿಸಿದ್ದಾರೆ. ಈ ಮರಿಗಳ ಮೌಢ್ಯವನ್ನು ನೋಡಿ ಹಸಿಗಣ್ಣಾಗುವ ಸಿಂಹ ಸಿಂಹಿಣಿಯರ ಮನಸ್ಸಿನ ಉಮ್ಮಳ ಯಾರ ಕರುಳನ್ನಾದರೂ ಹಿಂಡುತ್ತದೆ. ಹೀಗೆ ಇಲ್ಲಿ ಸ್ವಾತಂತ್ರ್ಯದ ಸಹಜ ತೃಷೆಯ ತಹತಹವನ್ನು ಹೃದಯಸ್ಪರ್ಶಿಯಾಗಿ ಕವಿ ಚಿತ್ರಿಸಿದ್ದಾರೆ.

ಭಾರತಜಗದಂಬ, ತಾಯಿದೇವಿ, ಹರಸು ತಾಯಿ, ನಾಡತಾಯಿ, ಕನ್ನಡ ನಾಡು, ಭಾಗ್ಯತಾರೆ ಮುಂತಾದ ಕವನಗಳಲ್ಲಿ ಕವಿ ದೇಶಮಾತೆಯ ಪೂರ್ವ ವೈಭವವನ್ನೂ ಇಂದಿನ ಅವನತಿಯನ್ನೂ ಮುಂದಿನ ಸ್ವಾತಂತ್ರ್ಯದ ಶುಭೋದಯವನ್ನೂ ಪರಿಪರಿಯಾಗಿ, ಬಿಡಿಬಿಡಿಯಾಗಿ ಬಣ್ಣಿಸಿದ್ದಾರೆ. ಬಗೆಬಗೆಯ ವಾದನಸಾಮಗ್ರಿಗಳೊಡನೆ ಸಾಮೂಹಿಕವಾಗಿ ತಾರಸ್ವರದಲ್ಲಿ ಈ ದೇಶಭಕ್ತಿಗೀತೆಗಳನ್ನು ಹಾಡುತ್ತಿದ್ದರೆ ಎಂತಹ ಹಂದೆಯೂ ಕಲಿಯಾಗುತ್ತಾನೆ; ಎಂತಹ ನಾಲಗೆಹೆಳವನೂ ಸತತವಾಗಿ ಜಯಘೋಷಗಳ ಸುರಿಮಳೆಯನ್ನು ಕರೆಯುತ್ತಾನೆ.

ಭರತವರ್ಷ ಪರಕೀಯರ ದಾಸ್ಯದಿಂದ ಸಂಪೂರ್ಣವಾಗಿ ಬಿಡುಗಡೆಯನ್ನು ಪಡೆಯುವುದಕ್ಕಾಗಿ ಹೂಡಿದ ಸತ್ಯಾಗ್ರಹಸಮರದ ಸಂದರ್ಭವನ್ನು ನೆನೆದು ಹೊಂಪುಳಿವೋಗಿ ರಕ್ತ ಕುದಿದ ವೇಳೆಯಲ್ಲಿ ರಚಿತವಾದ ಕವನ 'ಗಡಿಪಾಟು' ಎನ್ನುವುದು. ಹೊಸ ಸತ್ವ, ಹೊಸ ಧಾತು, ಹೊಸ ಪೌರುಷ ಪರಾಕ್ರಮಗಳಿಂದ ದೇಶದ ಎಲ್ಲ ವರ್ಗದ ಎಲ್ಲ ವೃತ್ತಿಯ ಜನರೂ ಈ ಸತ್ಯಾಗ್ರಹದಲ್ಲಿ ಭಾಗವಹಿಸಿದರು, ಕೋವಿ, ಬಡಿಗೋಲುಗಳಿಗೆ ಬಾಗದೆ ಹಿಂಸೆಗೆ ಹೆದರದೆ ಬಿಡುಗಡೆಗಾಗಿ ಕಳಕ್ಕೆ ನುಗ್ಗಿದರು; ಹೊಸ ಬಾವುಟವನ್ನು ನಿಲ್ಲಿಸಿ

ದರು; ಆಳರಸರ ಆಟೋಪವನ್ನು ಇಳಿಸಿದರು; ಹೊಸ ಚೇತನ, ಹೊಸ ಕಾಂತಿ, ಹೊಸ ಉತ್ಸಾಹಗಳನ್ನು ಮೆರೆದರು. ಈ ವೀರಪಡೆಯು ಆ ಕಾಲದ ಆಶಾದಾಯಕವಾದ ಮನೋಧರ್ಮದ ಸುಂದರ ಚಿತ್ರವನ್ನು ನಾವು ಈ 'ಗಡಿದಾಟು' ಕವಿತೆಯಲ್ಲಿ ಕಾಣುತ್ತೇವೆ.

'ವಿದ್ಯಾರ್ಥಿ' ಎನ್ನುವ ಕವನ ಸ್ವಾತಂತ್ರ್ಯನಂತರದಲ್ಲಿ ದೇಶ ಇಬ್ಭಾಗ ವಾಗಬೇಕೆಂಬ ಸೂಚನೆ ಹುಟ್ಟಿದ ವೇಳೆಯಲ್ಲಿ ಉಂಟಾದ ಮತೀಯ ಕಾಳಗದಲ್ಲಿ ಪರಸ್ಪರ ವೈರವನ್ನು ಬಿಟ್ಟು ಆ ಮತ ಈ ಮತ ಎನ್ನದೆ ಎಲ್ಲರೂ ಒಟ್ಟಾಗಿ ಬಾಳಬೇಕು ಎಂಬ ತತ್ವವನ್ನು ಬೋಧಿಸಹೋಗಿ ಆ ಮತಾಂಧರಿಂದ ಹತನಾದ ವಿದ್ಯಾರ್ಥಿಯೊಬ್ಬನ ವೀರವ್ಯಕ್ತಿಯನ್ನು ನೆನೆದು ಬರೆದದ್ದು:

'ಬದುಕಿ ಸತ್ತರು ಹಲರು
ಸತ್ತು ಬದುಕಿದನಿವನು
ಅಮರ ನಡೆ ಬಿತ್ತಿದನು
ಬಳಸಿ ಕಾಣುವುದವನ ಪೇರೊಲುಮೆ ಮೂರ್ತಿ
ಇಂಥ ಗಣಗಳು ಈಶರೆದ್ದು ಬರಲಿ
ಇಂಥ ವಿದ್ಯಾರ್ಥಿಗಳ ಕುಲ ಬೆಳೆಯಲಿ.'

ಹೀಗೆಯೇ 'ಕ್ರೋಧಕೇತನ' ಎಂಬ ಇನ್ನೊಂದು ಪದ್ಯ ಬಂಡವಾಳ ಶಾಹಿಯ ಮೇಲೆ ದೇಶದ ಸಹಸ್ರ ಸಹಸ್ರ ದೀನದಲಿತ ವರ್ಗದವರು ಕೈಯೆತ್ತಿ ಸಮಾಜದಲ್ಲಿ ಒಂದು ಆರ್ಥಿಕ ಕ್ರಾಂತಿಯನ್ನು ನಡಸಿ ಸಮತೆಯನ್ನು ಬಿತ್ತುವ ರೆಂಬ ತತ್ವವನ್ನು ಪ್ರತಿಪಾದಿಸುತ್ತದೆ:

'ಬಂಡವಾಳದ ಭಂಡ ಬಾಳನು
ಮುಗಿಸಿ ನೆತ್ತರ ಸುರಿವೆವು
ದುಡಿದು ಕೊರಗುವ ದಣಿದು ಸೊರಗುವ
ಶ್ರಮದ ಶ್ರಮವನು ಹರಿಸೆವು'

ಎಂದು ಶ್ರಮಜೀವಿಗಳ ತಂಡ ಕ್ರೋಧಕೇತನ ಹಿಡಿದು ನುಗ್ಗುತ್ತದೆ. ಅವರನ್ನು ಕೋಟಿದೇವರ ಕುರುಡು ಕಣ್ಗಳೂ, ಷಂಢ ತೋಳ್ಗಳೂ ಕಾಯವು; ಕೋಟಿ ಮೂವತ್ತೈದು ಮನುಜನ ನೋವು ಅಳಿಸದು ಸಿಗ್ಗನು; ಅವರು ಕೇಳುತ್ತಾರೆ:

'ಧರ್ಮದೇವರು, ಕಟ್ಟಕಟ್ಟಳೆ ಯಾರಿಗೀ ಯಮಪಾಶವು. ಕರುಣೆಯಿಲ್ಲದ ಧಣಿಕರಾಯರ ಮನೆಯ ಕಾಪಿನ ತಂತ್ರವು.'

'ಇಂದ್ರ' ಎನ್ನುವ ಇನ್ನೊಂದು ಅಷ್ಟಪಟ್ಪದಿ ಬಂಡವಾಳಶಾಹಿಗೆ ಹಾಕಿದ ಮತ್ತೊಂದು ಸವಾಲು. 'ಸಿಡಿಲ ಕೈಯಲಿ ಹಿಡಿದು ಸೊಕ್ಕಿರುವೆ ಎಲೆ ಇಂದ್ರ; ನಿನ್ನ ಪದವಿಯು ದರ್ಪಕದು ಕುರುಹು ಎನುತೆ' ಎಂದು ಆರಂಭವಾಗುವ ಈ ಪದ್ಯದಲ್ಲಿ 'ಜಗವೆಲ್ಲ ಐಶ್ವರ್ಯ ಪದವಿ ಹಿರಿಹೆಮ್ಮೆಗಳು ಉಂಟಾದರೆಂಬಂತೆ ದಿವ್ಯತೆಯು ಸೊಬಗು. ಇಚ್ಛೆಬಂದಂತೆಲ್ಲ ತುಳಿಯುತಿರೆ ಎತ್ತುತಿರೆ ಮೆರೆದೀತೆ ದೇವತನ?' ಎಂಬ ಪ್ರಶ್ನೆಯಲ್ಲಿ ಕೊನೆಗೊಳ್ಳುತ್ತದೆ. ದುರ್ಮದೋದ್ಧತರಾದ ನಮ್ಮ ಸಮಾಜದ ಅಹಮಿಂದ್ರರಿಗೆ ಇಲ್ಲಿ ಕಲಿಯಬೇಕಾದ್ದು ಹೇರಳವಾಗಿದೆ.

'ಶತಂ ಜೀವೇಮ ಶರದಃ' ಎನ್ನುವ ಪದ್ಯ ತುಂಬ ಸೊಗಸಾದದ್ದು. ನಮ್ಮ ದೇಶದಲ್ಲಿ, ಉಪನಿಷತ್ತಿನ ಕಾಲದಲ್ಲಿ ಭಾರತೀಯರು ಜೀವನವನ್ನು ಹೇಗೆ ನಂಬಿದ್ದರು. ಜೀವನದಲ್ಲಿ ಸುಖ ಶಾಂತಿ ಹೇಗೆ ನೆಲಸಿದ್ದವು. ಸರ್ವತೋಮುಖವಾದ ಶಾಂತಿಸೌಖ್ಯಗಳನ್ನು ಅವರು ಹೇಗೆ ಕಂಡುಕೊಂಡಿದ್ದರು. ಜನ ಎಲ್ಲ ಕರಣಗಳನ್ನೂ ತೆರೆದು ಜೀವನದ ಒಂದೊಂದು ಸುಖವನ್ನೂ ಹೇಗೆ ಬಿಡಿಬಿಡಿಯಾಗಿ ಅನುಭವಿಸಿ ಸಂತೋಷಪಡುತ್ತಿದ್ದರು, ಇಹವನ್ನು ತೊರೆಯದೆ ಪರವನ್ನು ಮರೆಯದೆ ಚೇತನದ ವೀರಮೂರ್ತಿಗಳಾಗಿ, ನೂರು ಶರತ್ಕಾಲಗಳನ್ನು ಹೇಗೆ ಸುಖಸಂತೋಷಗಳಿಂದ ಕಳೆಯುತ್ತಿದ್ದರು ಎಂಬುದನ್ನೆಲ್ಲ ಕವಿ ಚಿತ್ರಿಸಿದ್ದಾರೆ. ಆದರೆ ಮುಂದೆ ಯಾವುದೋ ಕಾಲದಲ್ಲಿ ಯಾರೋ ಪಾತಕರು 'ಹುಟ್ಟು ವ್ಯಥೆ, ಬೆಳೆಮಾಯೆ, ಹಿರಿಬದುಕು ಅಸತ್ಯ, ಕರ್ಮ ನೂರಾರು ಜನಗಳನ್ನು ಅಟ್ಟಿಕೊಂಡು ಬರುತ್ತದೆ. ಎಲ್ಲವೂ ಹಣೆಬರಹ' ಎಂದು ಮುಂತಾಗಿ ಸಾರಿದರು. ನೆಲ, ನೀರು, ಗಿಡ, ಬೆಟ್ಟ, ಬಾಂಬಟ್ಟೆ, ಕಣ್ಣುಗಳು, ಎದೆ, ಮನವು, ಚೆಲುವೊಲವು, ನಯ, ನೇಹ, ಬಲ ಎಲ್ಲ ಸಾವಿಗೆ ಊಡುವ ಊಟ— ಬಂಜೆಯ ಬಸಿರಂತೆ. ವೀರ ಉತ್ಸಾಹಗಳ ಸೊಲ್ಲನ್ನು ನಿಲ್ಲಿಸಿ ಬರುವ, ಕೊಂಮ ಕೂಗುವ ಮಸಣ ನುಡಿ ಇದೊಂದೇ ಸತ್ಯವಂತೆ ಎಂದು ಕವಿ ನೊಂದು ನುಡಿದಿದ್ದಾರೆ. ಮುಂದೆ ಭಾರತ ಇನ್ನೆಂದು ಎಚ್ಚರಗೊಳ್ಳುತ್ತದೆಯೋ, ದಾಸ್ಯ, ದಾರಿದ್ರ್ಯ, ಅಜ್ಞಾನಾದಿಗಳು ಎಂದು ತೊಲಗುತ್ತವೆಯೋ ಎಂದು ನಮ್ಮ ದೇಶ

ಜಗತ್ತಿಗೆ ಭವ್ಯವಾಗುತ್ತದೆಯೋ ಎಂದು ಆಶಿಸಿದ್ದಾರೆ. ನಮ್ಮ ಬಾಳು ಅನಂತವಾದ ವೀರ್ಯದಿಂದಲೂ, ಅನಂತವಾದ ವರ್ಚಸ್ಸಿನಿಂದಲೂ, ಅನಂತವಾದ ವೈಭವ ಮಹಿಮೆ ಮುಂತಾದುವುಗಳಿಂದಲೂ ಶ್ರೇಯಕ್ಕೆ ನುಗ್ಗಿ ದೇಶಕಲ್ಯಾಣವನ್ನು ಪಡೆಯುತ್ತದೆಯೋ ಎಂದು ಕೇಳಿದ್ದಾರೆ.

ಚೀನಾ-ಭಾರತಗಳ ಜನತೆ ಜಗತ್ತಿನ ಜನಸಂಖ್ಯೆಯಲ್ಲಿ ಅರ್ಧದಷ್ಟು. ಆದರೆ ಜಗತ್ತಿನ ಎಲ್ಲ ಜಡತೆಗೂ ಇವು ತವರಾಗಿವೆ. ಒಂದು ಕಾಲದಲ್ಲಿ ಕಲೆ, ಧರ್ಮ, ನಯಗಳ ಹಬ್ಬವನ್ನು ಹಬ್ಬಿಸಿದ ಈ ನಾಡು ಬಡವಾಗಿದೆ; ಸೊರಗಿದೆ. ಉಸಿರು ಹೊತ್ತರೆ ಭಾಗ್ಯ ಬರಲಿಲ್ಲ. ಕೋಟಿ ಕೋಟಿ ಸಂಖ್ಯೆಗೆ ಮರಿಯಿತ್ತರೆ ಆಗಲಿಲ್ಲ.

'ನಾಡ ನಲಿಸುವ ಜೀವ ಬಾಳ ನಗಿಸುವ ಜನವು
ಹುಟ್ಟಿ ಮೆರೆಯುವ ವರೆಗು ಬದುಕು-ಬದುಕೆ?'

ಎಂದು ಕವಿ ಕೇಳಿದ್ದಾರೆ. ಈ ಪ್ರಶ್ನೆಯಲ್ಲಿಯೆ ಅದರ ಉತ್ತರ ಇದೆ.

ಹೀಗೆ ವಿ.ಸೀ. ಅವರು ತಮ್ಮ ಕವಿತೆಗಳಲ್ಲಿ ದೈವಪ್ರೇಮ, ಆತ್ಮಪ್ರೇಮ, ಮಾನವಪ್ರೇಮ, ರಾಷ್ಟ್ರಪ್ರೇಮಗಳ ಹಾಡು ಹಾಡಿ ಈ ಪ್ರೇಮದ ಚತುಷ್ಕೋಣದಲ್ಲಿ ಶುಚಿಜೀವನದ ಬಿಂಬವೊಂದನ್ನು ಮೂಡಿಸಿದ್ದಾರೆ. ಆ ಬಿಂಬದ ಆದರ್ಶ ಎಲ್ಲರಿಗೂ ಅನುಸರಣಯೋಗ್ಯವಾದದ್ದು. ದ್ರೋಣಪ್ರತೀಕದ ಮುಂದಿನ ಏಕಲವ್ಯನಂತೆ ನಾವೂ ವಿ.ಸೀ. ಅವರ ಕಂಡರಣೆಯ ಈ ಶುಚಿಜೀವನದ ಆದರ್ಶದಿಂದ ಪಾಠ ಕಲಿತು ಇಹದಲ್ಲಿಯೇ ಪರವನ್ನು ಅರಳಿಸಿ ಸಾರ್ಥಕವನ್ನು ಪಡೆಯಬೇಕಾದ್ದು ನಮ್ಮನ್ನೇ ಸೇರಿದೆ. ಈ ಕಾವ್ಯರ್ಷಿಯ ಜೀವನದರ್ಶನದ ಅವಲೋಕವನ್ನು ಉಪನಿಷತ್ತಿನ ಋಷಿಯ ಈ ಕೆಳಗಣ ಮಂತ್ರದ ಉದ್ಧರಣದಿಂದ ಮುಗಿಸಬಹುದು :

'ಯಸ್ತು ವಿಜ್ಞಾನವಾನ್ಭವ
ತ್ಯಮನಸ್ಕಸ್ಸದಾ ಶುಚಿಃ
ನ ಸ ತತ್ಪದಮಾಪ್ನೋತಿ
ಸಂಸಾರಂ ಚಾಧಿಗಚ್ಛತಿ

ಯಸ್ತು ವಿಜ್ಞಾನವಾನ್ಭವತಿ
ಸಮನಸ್ಕಸ್ಸದಾ ಶುಚಿಃ
ಸ ತು ತತ್ಪದಮಾಪ್ನೋತಿ
ಯಸ್ಮಾದ್ಭೂಯೋ ನ ಜಾಯತೇ.'

'ಯಾವನು ವಿಜ್ಞಾನರಹಿತನೋ ಚಂಚಲಚಿತ್ತವುಳ್ಳವನೊ ಸದಾ ಅಶುಚಿಯೊ ಅವನಿಗೆ ಆ ಪದವು ದೊರೆಯಲಾರದು. ಅವನಿಗೆ ಪುನಃ ಸಂಸಾರವು ಪ್ರಾಪ್ತವಾಗುವುದು.

ವಿಜ್ಞಾನವಂತನೂ ಸ್ಥಿರಚಿತ್ತವುಳ್ಳವನೂ ಸರ್ವದಾ ಶುಚಿಯೂ ಆ ಪದವನ್ನು ಪಡೆಯುವನು. ಅಲ್ಲಿಂದ ಅವನಿಗೆ ಪುನಃ ಹುಟ್ಟು ಎಂಬುದೆ ಇಲ್ಲ.'

ಎಸ್. ವಿ. ಪರಮೇಶ್ವರ ಭಟ್ಟ

ಗದ್ಯಶಿಲ್ಪಿ

'ಗದ್ಯಂ ಕವೀನಾಂ ನಿಕಷಂ ವದಂತಿ' ಎಂದ ಕಾದಂಬರೀ ಕರ್ತೃ ಬಾಣ ಕವಿಯ ಮಾತಿನಲ್ಲಿ, ಮೊಟ್ಟಮೊದಲು ಸಮಗ್ರ ಗದ್ಯಕೃತಿಯನ್ನು ಬರೆದ ತನ್ನ ಶ್ರೇಷ್ಠತೆಯನ್ನು ಹೊಗಳಿಕೊಳ್ಳುವ ಅಹಂಕಾರದ ಛಾಯೆ ಕಾಣಬಹುದಾದರೂ ಆ ಮಾತು ಸಂಪೂರ್ಣವಾಗಿ ಸತ್ಯದೂರವಾಗಿಲ್ಲ. ಗದ್ಯವೇ ಕವಿಗಳ ಪ್ರತಿಭೆಗೆ ಒರೆಗಲ್ಲು ಎಂಬ ಮಾತನ್ನು ನಾವೂ ಹದಿನಾರಾಣೆ ಸತ್ಯವೆಂದು ಒಪ್ಪದೆ ಹೋದರೂ, ಉತ್ತಮ ಗದ್ಯವನ್ನು ಬರೆಯುವುದು, ಉತ್ತಮ ಕವಿತೆಯನ್ನು ಸೃಷ್ಟಿಸುವಷ್ಟೆ ಮಟ್ಟಿಗೆ, ಮೇಲ್ಮಟ್ಟದ ಪ್ರತಿಭೆಗೆ ಮಾತ್ರ ಸಾಧ್ಯವಾಗುವ ವಿಷಯ ವೆಂಬುದು, ಕನ್ನಡಸಾಹಿತ್ಯವನ್ನಷ್ಟೇ ಅಲ್ಲ, ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯವನ್ನು ತೆಗೆದುಕೊಂಡು ನೋಡಿದರೂ ಕಂಡುಬರುತ್ತದೆ; ಉತ್ತಮ ಕವಿತಾಸೃಷ್ಟಿ, ನಾಟಕರಚನೆ ಕೆಲವು ಜನ ಮೇಧಾವಿಗಳ ಮೀಸಲು ಸ್ವತ್ತು ಆಗಿರುವಂತೆ, ಉತ್ತಮ ಗದ್ಯರಚನೆಯೂ ಕೆಲವೇ ಜನಕ್ಕೆ ದಕ್ಕಿದೆ. ಇಂಗ್ಲಿಷ್ ಕವಿತೆ ಷೆಲ್ಲಿ, ಕೀಟ್ಸ್, ಮಿಲ್ಟನ್, ವರ್ಡ್ಸ್‌ವರ್ತ್ ಪಾಲಿಗೆ ಬಂದರೆ, ಇಂಗ್ಲಿಷ್ ಗದ್ಯ ಲ್ಯಾಂಬ್, ಹ್ಯಾಜ್ಲಿಟ್, ರಾಬರ್ಟ್‌ಲಿಂಡ್, ಗಾರ್ಡಿನರ್ ಮೊದಲಾದವರ ಪಾಲಿನದಾಗಿದೆ; ಸಂಸ್ಕೃತ ನಾಟಕರಂಗದಲ್ಲಿ ಭಾಸ, ಕಾಳಿದಾಸರು ಅಧಿಪತಿ ಗಳಾಗಿದ್ದರೆ, ಸಂಸ್ಕೃತ ಗದ್ಯಕ್ಕೆ ಬಾಣನೇ ಸಾರ್ವಭೌಮ. ಬೇರೆ ಭಾಷೆಯ ಸಾಹಿತ್ಯಕ್ಕೆ ಅನ್ವಯವಾಗುವ ಈ ಮಾತು, ಇಷ್ಟೇಮಟ್ಟಿಗೆ, ಕನ್ನಡಸಾಹಿತ್ಯಕ್ಕೂ ಅನ್ವಯವಾಗುತ್ತದೆ. ಪಂಪ ರನ್ನರು ಸರಸ್ವತಿಯ ಭಂಡಾರವನ್ನು ಸೂರೆ ಮಾಡಿದ ಕವಿಗಳು; ತಮ್ಮ ಕವಿತೆಯನ್ನು ಪರೀಕ್ಷಿಸುವವರಿಗೇನು ಎಂಟೆದೆಯೋ ಎಂದು ಕೇಳುವಷ್ಟು ಪ್ರತಿಭೆಯ ತೋಳಬಲವೂ ಅವರಿಗಿರಬಹುದು, ಆದರೆ ಶಿವಕೋಟಿಯ 'ವಡ್ಡಾರಾಧನೆ'ಯಲ್ಲಿ ಬರುವ ಆ ಮನೋಹರ ಗದ್ಯ ಆತನಿಗೆ ವಶವಾದಂತೆ, ಈ ಕವಿಚಕ್ರವರ್ತಿಗಳಿಗಾರಿಗೂ ವಶವಾಗಿಲ್ಲ. ಗದ್ಯದ ಈ ವಿಶಿಷ್ಟತೆಯೇ 'ಪದ್ಯಂ ವಧ್ಯಂ ಗದ್ಯಂ ಹೃದ್ಯಂ' ಎಂದು ಮುದ್ದಣ ಮಹಾ ಕವಿಗಳತ್ತ ಹುಬ್ಬುಹಾರಿಸಲು ಬಲ ನೀಡಿದೆ. ಆಧುನಿಕ ಕನ್ನಡಸಾಹಿತ್ಯದಲ್ಲೂ ನಮಗೆ, ಈ ಮಾತಿಗೆ ಹಲವಾರು ಉದಾಹರಣೆಗಳು ಸಿಕ್ಕುತ್ತವೆ.

ಆಧುನಿಕ ಕನ್ನಡದಲ್ಲಿ ಕುವೆಂಪು, ಬೇಂದ್ರೆ, ಪು.ತಿ.ನ. ಮೊದಲಾದ ಆಚಾರ್ಯಕವಿಗಳಿದ್ದಾರೆ; ಇವರು ಪದ್ಯದೊಂದಿಗೆ ಗದ್ಯವನ್ನೂ ಬರೆದಿದ್ದಾರೆ. ಆದರೆ ಇವರ ಗದ್ಯ ಇವರ ಕವಿತೆಯ ಮಟ್ಟಕ್ಕೆ ಏರುವುದಿಲ್ಲ; ಅಷ್ಟೇ ಅಲ್ಲ— ಗದ್ಯವೆಂದು ಬರೆದುದೂ, ಬಹು ಸಂದರ್ಭಗಳಲ್ಲಿ ಗದ್ಯರೂಪದಲ್ಲಿ ಬರೆದ ಪದ್ಯದಂತೆಯೇ ಕಾಣಿಸುತ್ತದೆ. ಶಬ್ದದ ಬಿಗಿ, ಭಾವಕ್ಲಿಷ್ಟತೆ, ಓಟ, ನಾದ ಗದ್ಯದ ನಾಡಿನಾಡಿಯಲ್ಲೂ ಹರಿಯುತ್ತಿರುವುದು ನಮಗೆ ಕಂಡುಬರುತ್ತದೆ. ಅವರ ಕವಿತೆಯನ್ನು ಓದುವಾಗ, ಓದುಗ ಹೇಗೆ ಮೈಯೆಲ್ಲ ಕಣ್ಣಾಗಿ ಓದಬೇಕೋ ಹಾಗೇ ಗದ್ಯವನ್ನು ಓದುವಾಗಲೂ ಎಚ್ಚರವಾಗಿರಬೇಕು. ಇಲ್ಲವಾದರೆ, ಶಬ್ದದಿಂದ ಶಬ್ದಕ್ಕೆ ಚಿಮ್ಮುತ್ತಿರುವ ಭಾವದ ಚಿಟ್ಟೆ, ಕೈಗೆ ಸಿಗುವಷ್ಟು ಹತ್ತಿರ ಬಂದೂ ಸಿಗದಂತೆ ಹಾರಿಹೋಗುತ್ತದೆ; ಕವಿತೆಯ ನೀರು ಜಿನುಗುತ್ತಿರುವ ಗದ್ಯದ ಬಂಡೆಗಲ್ಲುಗಳ ಮೇಲೆ ನಡೆಯುತ್ತಿರುವಾಗ, ಕೊಂಚ ಎಚ್ಚರಿಕೆ ತಪ್ಪಿದರೂ, ಯಾವುದೋ ಕೊರಕಲಿಗೆ ಬಿದ್ದು ಹಲ್ಲು ಮುರಿದುಕೊಳ್ಳುವುದು ಖಂಡಿತ. ಎಂತಲೇ ನಾವು ಆಧುನಿಕ ಕನ್ನಡಸಾಹಿತ್ಯದಲ್ಲಿ ಉತ್ತಮ ಗದ್ಯ ಬೇಕೆಂದರೆ, ಈ ಕವಿಗಳ ಮನೆಬಾಗಿಲಿನಲ್ಲಿ ಕೈಜೋಡಿಸದೆ, ಟಿ. ಎಸ್. ವೆಂಕಣಯ್ಯ, ಎ. ಆರ್. ಕೃಷ್ಣಶಾಸ್ತ್ರೀ, ಡಿ. ವಿ. ಗುಂಡಪ್ಪ, ಟಿ. ಎನ್. ಶ್ರೀಕಂಠಯ್ಯ, ಎ. ಎನ್. ಮೂರ್ತಿರಾವ್, ವಿ. ಸೀತಾರಾಮಯ್ಯನವರ ಸಾಹಿತ್ಯಮಂದಿರಕ್ಕೇ ಬರಬೇಕು.

ಆಧುನಿಕ ಕನ್ನಡಸಾಹಿತ್ಯದಲ್ಲಿ ಗದ್ಯರಚನೆಗೊಂದು ಪರಂಪರೆ, ಸಂಪ್ರದಾಯ, ಕಟ್ಟು, ರೀತಿಗಳನ್ನು ನಿರ್ಮಿಸಿಕೊಟ್ಟವರಲ್ಲಿ, ನಾನು ಮೊದಲೆ ಹೆಸರಿಸಿದವರೇ ಹಿರಿಯರು. ಈ ಹಿರಿಯರ ಸಾಲಿನಲ್ಲಿ ವಿ. ಸೀತಾರಾಮಯ್ಯನವರದೂ, ಬರೀ ಸಾಲಿನಲ್ಲಿ ನಿಂತ ಹೆಸರೇ ಅಲ್ಲ, ವಿಶಿಷ್ಟ ಕಾಂತಿಯಿಂದ ಹೊಳೆಯುವ ಹೆಸರು. ಗದ್ಯಸೃಷ್ಟಿಗೆಂದು ಅಗ್ರಪೂಜೆ ನಡೆದರೆ, ಅದರಲ್ಲಿ ಸೀತಾರಾಮಯ್ಯನವರಿಗೂ ಪಾಲಿದೆ; ಅಧಿಕಾರಬಲದಿಂದ ಅವರು ಪಾಲು ಪಡೆಯುತ್ತಾರೆ.

ವಿ. ಸೀತಾರಾಮಯ್ಯನವರು ಬರೀ ಗದ್ಯಕಾರರೇ ಅಲ್ಲ; ಅವರ ಪ್ರತಿಭೆಯು ಬಹುಮುಖವಾಗಿದೆ. ಅವರಿಂದ ಪದ್ಯರಚನೆಯಾಗಿದೆ, ನಾಟಕಗಳನ್ನು ಬರೆದಿದ್ದಾರೆ; ಶಾಸ್ತ್ರೀಯಗ್ರಂಥ ರಚನೆಯನ್ನು ಮಾಡಿದ್ದಾರೆ.

ಅವರಿಂದ ರಚಿತವಾದ ಪದ್ಯಗಳಲ್ಲಿ ಕೆಲವು ವಿಶ್ವಸಾಹಿತ್ಯದ ಮಟ್ಟಕ್ಕೆ ನಿಲ್ಲಬಲ್ಲ ಶಕ್ತಿಯನ್ನು ಪಡೆದಿವೆ; ಚಿರಂಜೀವಿತ್ವದ ಅದೃಷ್ಟ ಅವಕ್ಕಿವೆ. ಇಲ್ಲವೆನ್ನುವುದಿಲ್ಲ. ಆದರೂ ನನ್ನ ಮಟ್ಟಿಗೆ ಹೇಳಬೇಕೆಂದರೆ, ಪ್ರಾಯಶಃ ಅವರಿಗೆ ಗದ್ಯ ರಚನೆಯಲ್ಲಿ ಸಾಧ್ಯವಾದ ಯಶಸ್ಸು ಉಳಿದ ಕಡೆ ಸಿಗಲಾರದೆಂದೇ ತೋರುತ್ತದೆ. ವೀಣೆ ಶೇಷಣ್ಣನವರ ಕಲ್ಯಾಣಿಯಂತೆ, ಗದ್ಯ ಸೀತಾರಾಮಯ್ಯನವರ ಖಾಸಾ ರಾಗ. ಅದನ್ನು ಅವರು ನಡೆಸುವ, ನುಡಿಸುವ, ಹೆಣೆಯುವ ರೀತಿ ಅವರದೇ ಸರಿ.

ಬರಹದ ಶೈಲಿ ಬರಹಗಾರನ ಅಂತರಂಗವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. 'ಶೀಲದಂತೆ ಶೈಲಿ' ಎನ್ನುವುದು ಸಾಹಿತ್ಯರಂಗದಲ್ಲಿ ಬಹುದಿನಗಳಿಂದ ಬಳಕೆಯಲ್ಲಿರುವ ಮಾತು. ಬಹುದಿನದ, ಅತಿಬಳಕೆಯಿಂದ ಅರ್ಥಗೆಟ್ಟ ಎಷ್ಟೋ ಮಾತುಗಳಂತೆ, ಮೊದಲಿನ ಮಾತೂ ಎಷ್ಟೋ ಸಂದರ್ಭಗಳಲ್ಲಿ ಸತ್ಯವಾಗದೆ ಹೋಗಬಹುದಾದರೂ, ವಿ. ಸೀತಾರಾಮಯ್ಯನವರ ಮಟ್ಟಿಗಂತೂ ಆ ಮಾತು ಹದಿನಾರಾಣೆ ಸತ್ಯ.

ವಿ.ಸೀ.ಯವರನ್ನು ಮೊಟ್ಟಮೊದಲು ಕಂಡಾಗ ನಮ್ಮ ಕಣ್ಣನ್ನು ಸೆಳೆಯುವುದು, ಮನದ ಮೇಲೆ ಅಚ್ಚುಮೂಡಿಸುವುದು ಅವರ ಸರಳತೆ. ಬಿಳಿಯ ಪೇಟಾ, ಮುಚ್ಚಿದೆಯ ಕೋಟು, ಉಟ್ಟ ಪಂಚೆ, ಕಾಲಿಗಿಟ್ಟ ಚಪ್ಪಲಿ—ಎಲ್ಲೂ ಆಡಂಬರದ ಎಳೆಯು ಕಾಣುವುದಿಲ್ಲ; ಕಣ್ಣನ್ನು ಕೋರೈಸುವ ಬಣ್ಣವಿಲ್ಲ; ನವನವೀನತೆಯ ಮೆರೆತವಿಲ್ಲ, ಶುದ್ಧ ಸರಳತೆ. ಆದರೆ ಆ ಸರಳತೆ ಒಡತನದ ಸರಳತೆಯಲ್ಲ, ಶ್ರೀಮಂತತನದ ಸರಳತೆ. ಅವರು ತೊಟ್ಟಿರುವುದು ಮೂರು ತಲೆಮಾರು ಕೆಳಗಿನ ರೀತಿಯ ಮುಚ್ಚಿದೆಯ ಕೋಟೇ ನಿಜ—ಆದರೆ ಅದು ರೇಶಿಮೆಯ ಬಟ್ಟೆಯದು. ಆ ಬಳಿಕ ನಮಗೆ ಗೋಚರವಾಗುವುದು, ಸರಳವಾದ ರೀತಿಯಲ್ಲಿ ಧರಿಸಿದ ಉಡುಪನ್ನು ಧರಿಸಿರುವುದರಲ್ಲಿರುವ ಅಚ್ಚುಗಟ್ಟು, ಓರಣ. ಇದನ್ನು ಮೆಚ್ಚಿಕೊಳ್ಳುತ್ತಿರುವಾಗಲೆ ಅವರ ಮಿದುವಾದ ಧ್ವನಿಯ, ನಯವಾದ ಮಾತು ಕಿವಿಯನ್ನು ತುಂಬುತ್ತದೆ. ಆ ಮಾತನ್ನು ಒಂದು ಗಳಿಗೆ ಹಾಗೇ ಆಲಿಸುತ್ತಾ ಕುಳಿತುಕೊಳ್ಳಿ—ಹಳೆಯ ತಲೆಮಾರಿನ, ಕಾಲೇಜಿನ ಕನ್ನಡ ಅಧ್ಯಾಪಕರಿಂದ ಏನು ಬಗೆಯ ಮಾತು ಬರಬಹುದೆಂದು ಊಹಿಸುತ್ತೀರೊ ಊಹಿಸಿಕೊಳ್ಳಿ. ಮರುಗಳಿಗೆಯೆ ನಿಮ್ಮ ಲೆಕ್ಕಾಚಾರವೆಲ್ಲಾ ತಲೆಕೆಳಗಾಗುತ್ತದೆ. ಪಂಪ ರನ್ನರ ಮಾತು ಬರಬಹುವೆಂದು ಊಹಿಸುತ್ತೀರಾ?

ಬರಬಹುದು. ಆದರೆ ಅದರೊಂದಿಗೇ ಅತ್ಯಾಧುನಿಕವಾದ ಕ್ರಿಸ್ಟೋಫರ್, ಇಷರ್‌ವುಡ್, ಆಕೆನ್, ಡೇ ಲೂಯಿಯವರ ಕೃತಿಗಳ ವಿಚಾರವಾಗಿಯೂ ಮಾತು ಬರುತ್ತದೆ. ಹಾಗೇ ಆ ಮಾತು ಸಾಹಿತ್ಯರಂಗದಿಂದ ಸರಿದು, ಚಿತ್ರ, ಸಂಗೀತಪ್ರಪಂಚದಲ್ಲೂ ಕಾಲಿಡಬಹುದು; ವಿಜ್ಞಾನ, ಅರ್ಥಶಾಸ್ತ್ರ, ಮನೋವಿಜ್ಞಾನಗಳ ಮಾತೂ ಬರಬಹುದು. ಎಷ್ಟು ವಿಷಯಸಂಪತ್ತಿ ಎಂದು ಬೆರಗಾಗಬಹುದು ಕೇಳಿದವರು. ಆದರೆ ಅವರ ಉದ್ದೇಶ, ಕೇಳುವವನನ್ನು ಬೆರಗುಗೊಳಿಸುವುದಲ್ಲ. ಆ ಉದ್ದೇಶವಾಗಲಿ, ವೈಖರಿಯಾಗಲಿ ಅವರ ಮಾತಿನ ರೀತಿಯಲ್ಲಿರುವುದಿಲ್ಲ. ಸಂಪಗೆಗೆ ಪರಿಮಳವನ್ನು ಬೀರುವುದು ಎಷ್ಟು ಸ್ವಾಭಾವಿಕವೋ, ಅಷ್ಟೇ ಸ್ವಾಭಾವಿಕವಾಗಿ ಅವರ ಮಾತಿನಲ್ಲಿ ಪಾಂಡಿತ್ಯದ ಪರಿಮಳ ಹೊರಸೂಸುತ್ತದೆ. ಆಗಲೂ ಇನ್ನೊಂದು ಗಮನಾರ್ಹ ಅಂಶ ತಿಳಿಯುತ್ತದೆ. —ಬೇರೆ ಬೇರೆ ದೇಶದ, ಭಾಷೆಯ, ಸಿದ್ಧಾಂತದ ಸಾಹಿತಿಗಳು, ಚಿತ್ರಕಾರನ ವಿಷಯವನ್ನು ಚರ್ಚಿಸುವಾಗಲೂ, ವಿಮರ್ಶಿಸುವಾಗಲೂ, ಅದರಲ್ಲಿ ಈ ಸ್ವಸಿದ್ಧಾಂತಸ್ಥಾಪನೆಯ ಕಾವಾಗಲಿ, ಪರವಾದ ಖಂಡನೆಯ ಕವಿತೆಯಾಗಲಿ ಕಂಡುಬರುವುದಿಲ್ಲ. ಹಾಗೆಂದು ಸಂಕೋಚಕ್ಕೆ ಸಿಲುಕಿ ಸತ್ಯವನ್ನು ಮರೆಮಾಚುವ ಪ್ರಯತ್ನವೂ ಅವರ ಮಾತಿನಲ್ಲಿರುವುದಿಲ್ಲ.

ಇದೇ ಮಾತನ್ನು ನಾವು ವಿ.ಸೀ.ಯವರು ಬರೆದ ಗದ್ಯಕ್ಕೂ ಧಾರಾಳವಾಗಿ ಅನ್ವಯಿಸಬಹುದು. ಅವರ ಅಂತಃಕರಣದ ಗುಣಗಳೆಲ್ಲವೂ ಅವರ ಗದ್ಯದಲ್ಲಿ ಕಂಡುಬರುತ್ತದೆ.

ವಿ.ಸೀ.ಯವರ ಬರವಣಿಗೆ ಸಂಖ್ಯೆಯಲ್ಲಿ ಹೆಚ್ಚಾಗಲಿಲ್ಲ, ಬರೆದುದು ಅಲ್ಪ; ಆದರೆ ಆ ಅಲ್ಪ ಬಹುಮಟ್ಟಿಗೆ ಚೊಕ್ಕ ಚಿನ್ನ. ವಿಮರ್ಶೆಯೆಂದು ಅವರದು ಪ್ರಕಟವಾಗಿರುವುದು ಮೂರು ಗ್ರಂಥ: 'ಕರ್ನಾಟಕ ಕಾದಂಬರಿ', 'ಅಭಿಜ್ಞಾನ ಶಾಕುಂತಲ', 'ಅಶ್ವತ್ಥಾಮನ್'. ಇವರು ಬರೆದಿರುವ ಲಲಿತ ಪ್ರಬಂಧಗಳೂ ಅಷ್ಟೆ—ಮೂರೋ ನಾಲ್ಕೋ: 'ಮಳೆ', 'ಮೈಸೂರು ರುಮಾಲು', 'ಉಪಚಾರ'. ಆದರೆ ಇವು ಇನ್ನೂ ಸಂಕಲನರೂಪದಲ್ಲಿ ಬರಬೇಕಾಗಿವೆ. ಇವೇ ಅಲ್ಲದೆ 'ಕುಮಾರವ್ಯಾಸಪ್ರಶಸ್ತಿ', 'ಸಂಭಾವನೆ', 'ಸಮರ್ಪಣೆ' ಮೊದಲಾದ ಗ್ರಂಥಗಳಲ್ಲಿ ಕೆಲವು ಬಿಡಿ ಲೇಖನಗಳು ಅಚ್ಚಾಗಿವೆ. ಈ ಲೇಖನಗಳೂ ಸಂಕಲನರೂಪವನ್ನು ಕಂಡಿಲ್ಲ. ಹಾಗೇ ಆಗಾಗ

'ಪ್ರಬುದ್ಧ ಕರ್ಣಾಟಕ'ದಲ್ಲಿ ಅಚ್ಚಾದ ವಿಮರ್ಶೆಗಳೂ ನಾನು ಮೇಲೆ ಹೇಳಿದವೇ ಅಲ್ಲದೆ, ಅರ್ಥಶಾಸ್ತ್ರದ ಪರಿಚಯವಾದ 'ಹಣಪ್ರಪಂಚ', ತಮ್ಮ ಹಂಪೆಯ ಯಾತ್ರೆಯ ಅನುಭವಗಳನ್ನು ಬಣ್ಣಿಸುವ 'ಪಂಪಾಯಾತ್ರೆ' ಮತ್ತು 'ಭಾರತದ ಐವರು ಮಹನೀಯರು' ಎಂಬ ಗ್ರಂಥಗಳು ಪ್ರಕಟವಾಗಿವೆ.

ನಾನು ಮೊದಲು ಹೆಸರಿದ 'ಕರ್ನಾಟಕ ಕಾದಂಬರಿ', 'ಅಭಿಜ್ಞಾನ ಶಾಕುಂತಲ', 'ಅಶ್ವತ್ಥಾಮನ್' ಗ್ರಂಥಗಳನ್ನು ವಿ.ಸೀ.ಯವರು ವಿಮರ್ಶೆ ಎಂದು ಕರೆದಿಲ್ಲ, 'ಪರಿಚಯ' ಎಂದು ಕರೆದಿದಾರೆ. ಆ ಒಂದು ಮಾತು ಅವರಲ್ಲಿ ರಕ್ತಗತವಾಗಿರುವ ವಿನಯಕ್ಕೆ ಸಾಕ್ಷಿ. ಅಲ್ಲಿ ಅವರು ತೊಡಗಿರುವುದು ಅಗ್ಗದ ಬೇಟೆಯಲ್ಲ; ನಾಗವರ್ಮ, ಕಾಳಿದಾಸ, 'ಶ್ರೀ'—ಮೂವರೂ ಕಾವ್ಯ ಪ್ರಪಂಚದಲ್ಲಿ ಸಿಂಹಗಳೇ. ಈ ಸಿಂಹಗಳನ್ನು ತಮ್ಮ ಪ್ರತಿಭೆಯ ಬಲೆಯಲ್ಲಿ ಹಿಡಿದು, ಅದರ ಶಕ್ತಿ, ಜಾಣ್ಮೆ, ವಿಶೇಷ ಗುಣಗಳನ್ನು ತೋರಿಸಬಲ್ಲ ಶಕ್ತಿ, ಅದಕ್ಕೆ ಬೇಕಾದ ಸಾಧನಸಂಪತ್ತು ವಿ.ಸೀ.ಯವರಲ್ಲಿ ಧಾರಾಳವಾಗಿ ಇದೆ ಎಂಬುದು ಈ ಹೊತ್ತಗೆಗಳನ್ನು ಓದುವವರಿಗೆ ಪುಟಪುಟದಲ್ಲೂ ವ್ಯಕ್ತವಾಗುತ್ತದೆ. ಆದರೂ ವಿ.ಸೀ.ಯವರ ಪ್ರತಿಭೆಯ ಸಂಪೂರ್ಣ ಕಲ್ಪನೆಯಿರುವ ಜನಕ್ಕೆ ಈ ಮೂರರಿಂದಲೂ ತೃಪ್ತಿ ದೊರೆಯುತ್ತದೆ ಎಂದು ನನಗೆ ತೋರುವುದಿಲ್ಲ. ಈ 'ಪರಿಚಯ'ಗಳು ಬರೀ ಆ ಕಾವ್ಯಗಳ ಪರಿಚಯವಷ್ಟೇ ಅಲ್ಲ, ವಿ.ಸೀ.ಯವರಲ್ಲಿರುವ ಅಗಾಧಶಕ್ತಿಯ ಸ್ಥೂಲ ಪರಿಚಯ. ಅವರ ಪಾಂಡಿತ್ಯ, ರಸಿಕತೆ, ಪ್ರತಿಭೆಗಳ ಮುಪ್ಪುರಿ ಬಲದಿಂದ ಸ್ಪಷ್ಟವಾಗಿ, ಸಾಹಿತ್ಯರಂಗದಲ್ಲಿ ತೋರುಬೆರಳಾಗಿ ನಿಲ್ಲಬಲ್ಲ ಉತ್ತುಂಗ ಕೃತಿ ಇನ್ನೂ ಬರಬೇಕಾಗಿದೆ. ಇಷ್ಟು ದಿನಗಳವರೆಗೆ ಬರಲಿಲ್ಲವಲ್ಲ ಎಂಬ ಕೊರಗನ್ನು ಈ ಗ್ರಂಥಗಳು ಕೇಳಿಸುವಂತೆಯೇ, ಬರಲಿದೆ ಎಂಬ ಆಶೋತ್ತರವನ್ನೂ ಮೂಡಿಸುತ್ತವೆ.

ವಿ.ಸೀ.ಯವರ ಗದ್ಯಕೃತಿಗಳಲ್ಲಿ, ಏಕೆ, ಕನ್ನಡಸಾಹಿತ್ಯದ ಗದ್ಯಕೃತಿಗಳಲ್ಲೇ ಮೇಲುಮಟ್ಟ ಮುಟ್ಟಿದ ಕೃತಿ 'ಪಂಪಾಯಾತ್ರೆ'. ಕನ್ನಡದಲ್ಲಿ ಅಂಥ ಗ್ರಂಥ ಮತ್ತೊಂದಿಲ್ಲ. ಅದನ್ನು ಓದದ, ಓದಿ ಮೆಚ್ಚದ ಕನ್ನಡಿಗನೇ ಇಲ್ಲವೆಂದರೂ ಅತಿಶಯೋಕ್ತಿಯಾಗಲಾರದು. ಆ ಗ್ರಂಥ ಕನ್ನಡಸಾಹಿತ್ಯದಲ್ಲಿ ಅಪರೂಪವಾದ 'ಪ್ರವಾಸ ಸಾಹಿತ್ಯ'ದ ಕೊರಗನ್ನು ತುಂಬಿಕೊಟ್ಟದ್ದೊಂದೇ ಅಲ್ಲ, ಆ ಬಗೆಯ ಬರವಣಿಗೆಗೇ ಮಾದರಿಯಾಗಿ ನಿಂತಿದೆ. ಈಚೆಗೆ ಆ ಬಗೆಯ

ಸಾಹಿತ್ಯವನ್ನು ಹಲವರು ಬರೆದಿರುವರಾದರೂ, ಆ ಮಟ್ಟಕ್ಕೆ ಮುಟ್ಟಬಲ್ಲ ಕೃತಿ ಇನ್ನೂ ಬರಬೇಕು. ಆ ಬಗೆಯ ಕೃತಿಯಲ್ಲಿ ಏನೇನು ಗುಣವಿರಬೇಕೋ ಇವೆ. ಅಂಥ ವಾಚಕರ ಮನೋರಂಗದಲ್ಲಿ ಎಂಥೆಂಥ ಭಾವತರಂಗಗಳನ್ನು ಅರಳಿಸಬೇಕೊ ಅಂಥ ಭಾವಗಳನ್ನು ಅರಳಿಸುತ್ತವೆ. ಕುಶಲ ಬೇಟೆಗಾರನು ಗುರಿ ಇಟ್ಟು ಬಿಟ್ಟ ಬಾಣದಂತೆ, ಆ ಕೃತಿ ನೇರವಾಗಿ, ನಿಸ್ಸಂಶಯವಾಗಿ ಲಕ್ಷ್ಯಭೇದನ ಮಾಡುತ್ತದೆ. ಆ ಕೃತಿಯನ್ನು ಓದುವುದು ಬರೀ ಓದುವಿಕೆ ಯಷ್ಟೇ ಅಲ್ಲ, ಅದೊಂದು ಜೀವಂತ ರಸಾನುಭವ; ಮನಸ್ಸು ಗ್ರಹಿಸಿದ್ದು, ಕಣ್ಣೆದುರು ಚಿತ್ರವಾಗಿ ನಿಲ್ಲುತ್ತದೆ. ಸೀತಾಮಾತೆಯ ನಿಟ್ಟುಸಿರಿನಂತೆ ಸುಯ್ಯುವ ಗಾಳಿ ಸುಳಿಯುವ ಪಂಪಾ ಸರೋವರದ ತೀರ, ಮುಗಿಯದ ವಿಟ್ಠಲನ ಗುಡಿ, ಬೀಳಾದ ರಾಣಿಯರ ಸ್ನಾನಗೃಹಗಳು, ಆ ವಿಜಯದಶಮಿಯ ದಿಬ್ಬ—ಇವುಗಳ ಪ್ರತಿಭಾಪೂರ್ಣವಾದ ಬಣ್ಣನೆ ನಮ್ಮಿಂದ ನಿರ್ದಾಕ್ಷಿಣ್ಯವಾಗಿ ಕಂಬನಿಯ ಕಾಣಿಕೆಯನ್ನು ವಸೂಲುಮಾಡಿದರೆ, ಅಡಿಗೆಪ್ರಸಂಗ, ಚಪ್ಪಲಿಯ ಪ್ರಸಂಗಗಳು ನಗೆಬುಗ್ಗೆಯನ್ನುಕ್ಕಿಸುತ್ತವೆ. ಆದರೆ ಅದನ್ನು ಓದಿ ಮುಗಿಸಿದ ಮೇಲೆ, ನಮ್ಮ ಮನದಲ್ಲಿ ಸ್ಥಿರವಾಗಿ ನಿಲ್ಲುವುದು ಆ ಭವ್ಯಭಗ್ನಾವಶೇಷಗಳ ದರ್ಶನದಿಂದ ಮೂಡುವ ಕೊನೆಗಾಣದ ಕೊರಗು. ಆ ಪುಸ್ತಕವನ್ನು ಓದಿದಾಗ ಹಂಪೆಯ ಬಗ್ಗೆ ಓದಿದಂತಾಗುವುದಿಲ್ಲ, ಹಂಪೆಯನ್ನು ನೋಡಿಬಂದಂತಾಗು ವುದು. ಈ ಅನುಭವ, ವಿ.ಸೀ.ಯವರ ಲಲಿತಮಧುರ ಗದ್ಯಶೈಲಿ ಗಳಿಸಿದ ಅಮೋಘ ಗೆಲವು, ವಾಚಕನ ನಗೆಮುತ್ತು, ಕಂಬನಿಯ ಮಣಿಗಳು ಪವಣಿಸಿದ ಮೆಚ್ಚುಗೆಯ ಮಾಲೆ ವಿ.ಸೀ.ಯವರ ಕಾವ್ಯದ ಕಂಠವನ್ನು ಅಲಂಕರಿಸುತ್ತದೆ.

ವಿ.ಸೀ.ಯವರ ಲಲಿತಪ್ರಬಂಧಗಳ ಬಗ್ಗೆ ಹೇಳಬೇಕಾದ ಮಾತನ್ನು ಮುಗಿಸುವ ಮುನ್ನ ಮತ್ತೊಂದು ಮಾತನ್ನು ಹೇಳಬೇಕು. ಅದು ಈ ಲೇಖನಗಳಲ್ಲಿ ಕಂಡುಬರುವ ನಗೆಗಾರಿಕೆಯ ಬಗ್ಗೆ. ಈ ದಾರಿಯಲ್ಲೂ ವಿ.ಸೀ.ಯವರು ತಮ್ಮ ವಿಶಿಷ್ಟತೆಯನ್ನು ಉಳಿಸಿಕೊಂಡಿದ್ದಾರೆ. 'ಪಂಪಾಯಾತ್ರೆ'ಯಲ್ಲಿ ಬರುವ ಚಪ್ಪಲಿಯ ಪ್ರಸಂಗವೇ ಆಗಲಿ, ಅಥವಾ 'ಮಳೆ'ಯಲ್ಲಿ ಬರುವ, ನಡುರಾತ್ರಿಯಲ್ಲಿ ಸುಳಿವ ಕೊಡದ ಬಂದು ಬೆರಗುಗೊಳಿಸುವ ಅಭ್ಯಾಗತನಂತೆ, ಛಾವಣಿಯಿಂದ ಪತ್ತೆ ಕೊಡದೆ ಇಳಿದುಬಂದು ಹಾಸಿಗೆಯನ್ನು ತೋಯಿಸಿ ಎಚ್ಚರಿಸುವ ಮಳೆನೀರಿನ ವರ್ಣನೆಯಾಗಲಿ ಅವು ನಮ್ಮಲ್ಲಿ ನಿಶ್ಚಯವಾಗಿಯೂ

ನಗುವನ್ನುಕ್ಕಿಸುತ್ತವೆ; ಆದರೆ ತುಟಿವಿಾರಿದ ಅಸಭ್ಯ ನಗುವನ್ನಲ್ಲ: ತುಟಿಯ ಅಂಚಿನಲ್ಲೇ ನಿಂತು, ಕಂಡೂ ಕಾಣದಷ್ಟು ತುಳುಕಿ, ಬರೀ ಕಣ್ಣ ಹೊಳಪಿನಲ್ಲೇ ವ್ಯಕ್ತವಾಗುವ ಗರತಿನಗುವನ್ನು. ಈ ನಗುವನ್ನು ನಮ್ಮಲ್ಲಿ ಮೂಡಿಸುವುದಕ್ಕಾಗಿ, ವಿ.ಸೀ.ಯವರು ಪ್ರಾಸಕ್ಕೆ ಪರದಾಡುವುದಿಲ್ಲ, ವ್ಯಂಗ್ಯಕ್ಕೆ ಹಾರುವುದಿಲ್ಲ—ಅಣಕಕ್ಕೂ ಅವರಿಗೂ ಹರದಾರಿ ದೂರ. ರಾತ್ರಿ ಮಲಗುವಾಗ ನೋಡಿದಾಗಲೂ ಮೊಗ್ಗಾಗಿಯೇ ಇದ್ದು, ಯಾವಾಗಲೋ ಏನೊ ಪತ್ತೆಯೇ ಕೊಡದೆ, ಹಗಲು ಏಳುತ್ತಿದ್ದ ಹಾಗೆಯೇ ಅರಳಿ ತನ್ನ ವಿಲಾಸದಿಂದ ಬೆರಗುಗೊಳಿಸುವ ಪುಷ್ಪಪವಾಡದಂತೆ, ನಯವಾದ, ಮೃದುವಾದ ಮಾತುಗಳ ಅಡಿಯಲ್ಲಿ ಎಲ್ಲಿಯೋ ಮೂಡಿಸಿ, ಪಟಕ್ಕನೆ ನಗೆಯುಕ್ಕಿಸಿ ಬೆರಗುಗೊಳಿಸುತ್ತಾರೆ. ಈ ಕೌಶಲ, ವಿ.ಸೀ.ಯವರ ಲಲಿತಪ್ರಬಂಧಗಳ ಅಪೂರ್ವ ಸಿದ್ಧಿ, ಇವರಿಂದಾಗಿಯೇ ಅವು, ಇನ್ನೂ ಸಂಕಲನರೂಪದಲ್ಲಿ ಪ್ರಕಟವಾಗದೆ ಹೋದರೂ, ಎಲ್ಲೋ, ಎಂದೋ ಪತ್ರಿಕೆಗಳಲ್ಲಿ ಪ್ರಕಟವಾದರೂ ಚಿರವಾಗಿ ವಾಚಕರ ಸ್ಮೃತಿಯಲ್ಲುಳಿದಿರುವುದು; ಕನ್ನಡ ಲಲಿತಪ್ರಬಂಧ ರಚನೆಗೆ ಮಾದರಿಯಾಗಿರುವುದು.

ಈ ಪ್ರಬಂಧಗಳಂತೆಯೇ ಅವರು ಅರ್ಥಶಾಸ್ತ್ರದ ಮೇಲೆ ಬರೆದ 'ಹಣ ಪ್ರಪಂಚ'ವೂ ಮಾದರಿಯ ಕೃತಿ. ಅರ್ಥಶಾಸ್ತ್ರದಂಥ ಕ್ಲಿಷ್ಟವಾದ ನೀರಸವಾದ ಜಡವಾದ ವಿಷಯವೂ ವಿ.ಸೀ.ಯವರ ಕುಶಲ ಕಲೆಗಾರಿಕೆಯ ಕಡೆತಕ್ಕೆ ಸಿಕ್ಕು ರಸಭರಿತವಾಗಿದೆ, ಸಾಮಾನ್ಯ ವಾಚಕನಿಗೂ ಆಕರ್ಷಣೀಯವಾಗಿದೆ. ಲಲಿತಪ್ರಬಂಧಗಳಲ್ಲಿ, ಮುಂಜಾವಿನ ಹೊಂಬಿಸಿಲಲ್ಲಿ, ಹಸಿರು ಹುಲ್ಲಿನ ಮೇಲೆ ಕುಣಿಯುವ ಹರಿಣಿಯಂತೆ ನಡೆವ ಅವರ ಗದ್ಯ, ಈ ಶಾಸ್ತ್ರೀಯ ಗ್ರಂಥದಲ್ಲಿ, ತನ್ನ ಹೆಗಲ ಮೇಲೆ ಕುಳಿತಿರುವವರ ಹಿರಿಮೆ, ಆ ಸಂದರ್ಭದ ಗೌರವಗಳನ್ನು ಅರಿತು ನಡೆಯುವ ಮೆರವಣಿಗೆಯ ಜಾತಿಕುದುರೆಯ ಗತಿಯನ್ನು ಪಡೆಯುತ್ತದೆ. ಹೊತ್ತು ಬಂದಂತೆ ಗದ್ಯವನ್ನು ನಡೆಯಿಸಿ, ಗುರಿಯನ್ನು ಗೆಲ್ಲಬಲ್ಲ ಕುಶಲ ಸಾರಥಿತನ ವಿ.ಸೀ.ಯವರಿಗೆ ಹಸ್ತಗತವಾಗಿದೆ. 'ಗದ್ಯಂ ಕವೀನಾಂ ನಿಕಷಂ ವದಂತಿ' ಎಂದ ಬಾಣನ ಮಾತು ಸತ್ಯವಾಗುವುದು, ವಿ.ಸೀ.ಯವರ ಗದ್ಯವನ್ನು ಓದಿ, ಮೆಚ್ಚಿಕೊಂಡು, ಅದರಂತೆಯೇ ಬರೆಯಬೇಕೆಂದು ಯತ್ನಿಸಿದಾಗ. ಆಗ ಸರ್ವಜ್ಞನ ಮಾತನ್ನು ಕೊಂಚ ಬದಲಾಯಿಸಿ 'ಗದ್ಯ ಎಲ್ಲರಿಗು

ಅಲ್ಲ ಸರ್ವಜ್ಞ ' ಎಂದು ಹೇಳಲೇಬೇಕಾಗುವುದು.

ಕನ್ನಡದ ಮೇಲೆ ಇರುವಷ್ಟೇ ಹಿಡಿತ, ಪ್ರಭುತ್ವ ವಿ.ಸೀ.ಯವರಿಗೆ ಇಂಗ್ಲೀಷಿನ ಮೇಲೂ ಇದೆಯೆಂಬುದು 'ಹಿಂದೂ', 'ಆರ್ಯನ್ ಪಾತ್' 'ಪಿ.ಇ.ಎನ್.' ಪತ್ರಿಕೆಗಳಲ್ಲಿ ಆಗಾಗ ಪ್ರಕಟವಾದ ಇವರ ಗ್ರಂಥವಿಮರ್ಶೆಗಳನ್ನು ನೋಡಿದವರಿಗೆ ಗೊತ್ತಾಗುತ್ತದೆ. ಕನ್ನಡಗದ್ಯದಲ್ಲಿರುವ ನಯಗಾರಿಕೆ, ಸೊಬಗು, ವಿಷಯಸಂಪತ್ತಿ, ನಿರೂಪಣಾಕೌಶಲ ಅಲ್ಲಿಯೂ ಕಂಡುಬರುತ್ತದೆ. ಆದರೆ ಅಲ್ಲಿಯೂ ಅರಕೆಯೇ ನಮ್ಮ ಎದೆಯನ್ನು ಕೊರೆಯುತ್ತದೆ. ಇಂಗ್ಲಿಷಿನಲ್ಲಾಗಲಿ, ಕನ್ನಡದಲ್ಲಾಗಲಿ ಇನ್ನೂ ವಿ.ಸೀ.ಯವರ ಪೂರ್ಣ ಪ್ರತಿಭೆಗೆ ಕನ್ನಡಿಯಾಗಬಲ್ಲಂಥ ಉದ್ಗ್ರಂಥ ಇನ್ನೂ ಹೊರಬಂದಿಲ್ಲ. ಅವರ ಪ್ರತಿಭೆಯ ಬತ್ತಳಿಕೆಯಲ್ಲಿ ಯಾವ ಕಾರಣಕ್ಕಾಗಿಯೊ ಏನೊ ಇನ್ನೂ ಹುದುಗಿಯೇ ಇರುವ ಅಸ್ತ್ರಸಂಪತ್ತು ಇನ್ನೂ ಪೂರ್ಣ ಪ್ರಕಟವಾಗಿಲ್ಲ.

ಇನ್ನೂ ಹೊತ್ತು ಮೀರಿಲ್ಲ. ಆ ಕಾಲ ಬೇಗ ಬರಲಿ ಎಂದು ನಾನು ಬಯಸುತ್ತೇನೆ. ಅದಕ್ಕೆ ಮೊದಲು, ಇನ್ನೂ ಬಿಡಿ ಲೇಖನಗಳಿಗಾಗಿಯೇ ಇರುವ ಅವರ ಲಲಿತಪ್ರಬಂಧಗಳು, ವಿಮರ್ಶಾತ್ಮಕ ಲೇಖನಗಳು ಸಂಕಲನ ರೂಪವಾಗಿ ಪ್ರಕಟವಾಗಬೇಕು. ಅವು ಕನ್ನಡಿಗರು ಎಂದೆಂದೂ ಕಳೆದುಕೊಳ್ಳಲಾಗದ ಅಮೂಲ್ಯ ಆಸ್ತಿ.

ತ. ರಾ. ಸು.

ನಾನು ಕಂಡ ವಿ.ಸೀ.

ಮುದ್ದು ಮುಖದ ಮಾತಾದ ವ್ಯಕ್ತಿ ವಿ.ಸೀ.ಯವರನ್ನು ನಾನು ಮೊದಲ ಬಾರಿಗೆ ಕಂಡಾಗ, 'ಇವರೇನೆ ವಿ.ಸೀ.!' ಎಂದುಕೊಂಡೆ. ಆನವಟ್ಟಿಯಲ್ಲಿ ಪ್ರಥಮವಾಗಿ ವಸಂತಸಾಹಿತ್ಯೋತ್ಸವ ನಡೆಯಿತು. ಕನ್ನಡನಾಡಿನ ಹೆಸರಾಂತ ಸಾಹಿತಿಗಳೆಲ್ಲ ಬಂದಿದ್ದರು. ಅವರಲ್ಲಿ ವಿ.ಸೀ.ಯವರೂ ಒಬ್ಬರಿದ್ದರು. ಹೈಸ್ಕೂಲಿನಲ್ಲಿ ಓದುತ್ತಿರುವಾಗ 'ಪಂಪಾಯಾತ್ರೆ'ಯನ್ನು ಓದಿದಾಗ ನಮ್ಮ ಕಣ್ಣೆದುರಿಗೆ ಬಂದ ಅದರ ಗ್ರಂಥಕರ್ತರಾದ ವಿ. ಸೀತಾರಾಮಯ್ಯನವರಿಗೂ ಎದುರಿಗೆ ಪ್ರತ್ಯಕ್ಷವಾಗಿ ಕಂಡ ಸುಂದರ ವ್ಯಕ್ತಿ ವಿ.ಸೀ.ಯವರಿಗೂ ಇದ್ದ ವ್ಯತ್ಯಾಸ, ಸಾಮಾನ್ಯವಾಗಿ ಎಲ್ಲರಿಗೂ ಆಗುವಂತಹುದೆ. ಅಂತಹ ವ್ಯತ್ಯಾಸ ನನಗೂ ಕಂಡುಬಂದಿತು. 'ಅವರಿನ್ನೂ ಕೇವಲ ೨೫ ವರ್ಷದ ತರುಣರು. ಒಳ್ಳೆಯ ಆಜಾನುಬಾಹುದೇಹಿ, ಅಷ್ಟೇನು ಕುರೂಪಿಯಲ್ಲದಿದ್ದರೂ ಸುಂದರ ವಲ್ಲದ ಮುಖ, ಗಡಸು ಧ್ವನಿ; ನವೀನ ತರುಣರಂತೆ, ವಿದೇಶಿ ಪೋಷಾಕು ಧರಿಸುವ ವ್ಯಕ್ತಿ.'—ಹೀಗೆ ಅವರ ಬಗ್ಗೆ ನಾನಾ ರೀತಿಯ ಭಾನನೆಗಳು ನನ್ನ ಮನಸ್ಸಿನಲ್ಲಿ ಬಂದಿದ್ದವು. ಅವರನ್ನು ಮುಖತಃ ನೋಡಿದಾಗ, ತುಂಬಾ ಆನಂದವಾಯಿತು. ನನ್ನ ಭಾವನೆಗಳೆಲ್ಲ ಸಡಿಲವಾದವು. ಒಮ್ಮೆಲೆ ನನಗೆ ಗೌರವವುಂಟಾಯಿತು. ಕಲ್ಲು ಕಟೆದು ಸುಂದರ ಮೂರ್ತಿಯಾದಂತೆ, ಅವರ ಆಕೃತಿಯ ಬಗ್ಗೆ ನನಗೆ ಅನುಭವವಾಯಿತು. ೨೫ ವರ್ಷದ ತರುಣರಂತೆ ಕಾಣುತ್ತಿದ್ದರೂ, ೭೫ ವರ್ಷದ ಸಾಧನೆಯಿಂದಾಗಿ, ತುಂಬಿದ ಕೊಡದಂತೆ ನನಗೆ ಕಂಡರು. ಸರಳವಾದ ಅವರ ಉಡುಪು, ಮೃದುವಾದ ಅವರ ಮಾತು ನನ್ನನ್ನು ಮುಗ್ಧನನ್ನಾಗಿ ಮಾಡಿತು. 'ಇವರೇನೇ ವಿ.ಸೀ.!' ಎಂದುಕೊಂಡ ನಾನು 'ಇವರೇ ವಿ.ಸೀ.' ಎಂದು ಹೆಮ್ಮೆಯಿಂದ ಎಲ್ಲರಿಗೂ ತೋರಿಸ ತೊಡಗಿದೆ. ಆಗ ನಾನು ಪ್ರಥಮ ಬಾರಿ ವಿ.ಸೀ.ಯವರನ್ನು ಕಂಡೆ.

ವಸಂತ ಸಾಹಿತ್ಯೋತ್ಸವದ ಅಂಗವಾಗಿ ವಿ.ಸೀ.ಯವರು ಎರಡು ಭಾಷಣಗಳನ್ನು ಮಾಡಿದರು. ಅವರ ಭಾಷಣ ಕೇಳಿ ಜನರು ತಲೆತೂಗಿದರು. ಅವರ ವಾಣಿಯನ್ನು ಕೇಳಿದ ನಾನು ಅವರಿಗೆ ಮಾರುಹೋದೆ. ಸಾಹಿತ್ಯೋತ್ಸವ

ಮೂರು ದಿನ ವಿಜೃಂಭಣೆಯಿಂದ ನಡೆಯಿತು. ಕೊನೆಯ ದಿನ ಸಂಜೆ ಸಾಹಿತ್ಯಾಚಾರ್ಯರಾದ ಶ್ರೀ ಬಿ. ಎಂ. ಶ್ರೀಕಂಠಯ್ಯನವರು, ಶ್ರೀ ವಿ.ಸೀ.ಯವರು ಆರಾಮವಾಗಿ ಮಾತನಾಡುತ್ತ ಕುಳಿತಿದ್ದರು.

ನಾನಾಗ ವಿ.ಸೀ.ಯವರನ್ನು ಕಂಡೆ.

"ನಾನು ಬೆಂಗಳೂರಿಗೆ ಇಂಟರ್ ಓದಲು ಬರಬೇಕೆಂದು ಮಾಡಿದ್ದೇನೆ. ತಾವು ನನಗೆಲ್ಲ ಸಹಾಯ ನೀಡಬೇಕು."

"ಅಗತ್ಯವಾಗಿ ಬನ್ನಿ. ಕೈಲಾದ ಸಹಾಯ ಮಾಡುತ್ತೇವೆ. ನೀವು ಕಾಲೇಜಿನಲ್ಲಿ ಓದುತ್ತಿರುವ ತರುಣರೆಂದು ತಿಳಿದಿದ್ದೆ."

"ನಾನು ಎಸ್.ಎಸ್.ಎಲ್.ಸಿ. ಪಾಸುಮಾಡಿ ಒಂದು ವರ್ಷವಾಯಿತು. ಹಣದ ಅಭಾವದಿಂದ ಕಾಲೇಜು ಸೇರಲು ಆಗಲಿಲ್ಲ. ಈಗ ಸ್ವಲ್ಪ ಹಣ ಮಾಡಿಕೊಂಡಿದ್ದೇನೆ. ನಿಮ್ಮ ನೆರವೂ ಕೂಡಿಬಂದರೆ ನಾನು ಮುಂದೆ ಓದು ಸಾಗಿಸಬಲ್ಲೆ."

"ನಾನು ನಿಮಗೆ ಏನು ಸಹಾಯ ಮಾಡುವೆನೋ ಈಗಲೇ ಹೇಳಲಾರೆ. ಬೆಂಗಳೂರಿಗೆ ಬನ್ನಿ. ದೇವರಿದ್ದಾನೆ. ಆದರೆ ಖಂಡಿತವಾಗಿಯೂ ನೀವು ಮುಂದೆ ಓದುವುದನ್ನು ಮಾತ್ರ ಬಿಡಬೇಡಿ. ಕನ್ನಡಕ್ಕೆ ನಿಮ್ಮಿಂದ ಬಹಳ ಸೇವೆಯಾಗಬೇಕಾಗಿದೆ."

"ಹೌದು, ನೀವು ಬೆಂಗಳೂರಿಗೆ ಬನ್ನಿ. ಬಂದು ನಮ್ಮನ್ನು ನೋಡಿ. ಏನಾದರೂ ಮಾಡೋಣ. ಉತ್ಸಾಹವಿರುವ ನಿಮಗೆ ಯಾರೂ ಸಹಾಯ ಮಾಡದೆ ಇರಲಾರರು" ಎಂದು ಶ್ರೀಯವರೂ ದನಿಗೂಡಿಸಿದರು.

"ನಿಮ್ಮ ಭರವಸೆಯಿಂದಾಗಿ ನಾನು ಧೈರ್ಯ ತಂದುಕೊಂಡಿದ್ದೇನೆ. ಖಂಡಿತ ಜೂನ್ ತಿಂಗಳಲ್ಲಿ ಬೆಂಗಳೂರಿಗೆ ಬರುತ್ತೇನೆ" ಎಂದು ನಮಸ್ಕರಿಸಿ ಅವರನ್ನು ಬೀಳ್ಕೊಟ್ಟೆ.

ವಸಂತ ಸಾಹಿತ್ಯೋತ್ಸವಕ್ಕಾಗಿ ನೆರೆದಿದ್ದ ಹಿರಿಯ ಸಾಹಿತಿಗಳೆಲ್ಲರೂ ಮರುದಿನ ಬೆಳಗ್ಗೆ ಹಾನಗಲ್ಲ ಮಾರ್ಗವಾಗಿ ಹುಬ್ಬಳ್ಳಿಗೆ ತೆರಳಿದರು. ಸುಪ್ರೀತನಾದ ನಾನು ಮುಂದಿನ ಯೋಚನೆ ಮಾಡತೊಡಗಿದೆ. ಆಗ ನಾನು ಪ್ರಥಮ ಬಾರಿಗೆ ವಿ.ಸೀ.ಯವರನ್ನು ಕಂಡೆ.

* * * *

ನಾನು ಬೆಂಗಳೂರಿಗೆ ಬಂದೆ. ಕಾಲೇಜಿಗೂ ಸೇರಿದೆ. ವಿ.ಸೀ.ಯವರನ್ನು ಕಂಡು ನಮಸ್ಕರಿಸಿದೆ. ಶ್ರೀಯವರನ್ನು ನೋಡಿ ಆಶೀರ್ವಾದ ಪಡೆದು ಬಂದೆ. ಶ್ರೀಯವರು ಮತ್ತು ವಿ.ಸೀ.ಯವರು ಭರವಸೆಯಿತ್ತಂತೆ, ನನಗೆ ಅನೇಕ ಜನ ಸಹಾಯ ಮಾಡಿದರು. ಕಾಲೇಜಿನಲ್ಲಿ ನನಗೆ ಫೀ ಮಾಫಿಯಾಯಿತು. ಊಟಕ್ಕೆ ಅನುಕೂಲವಾಯಿತು. ಕಾಲೇಜಿನಲ್ಲಿ ಕ್ಯಾಂಟೀನ್ ದೊರೆಯಿತು. ಆ ಉಪಕಾರಗಳನ್ನು ಇಲ್ಲಿ ಕೃತಜ್ಞತಾಪೂರ್ವಕವಾಗಿ ಸ್ಮರಿಸುತ್ತೇನೆ. ಇರಲಿ.

ಜೂನಿಯರ್ ಇಂಟರ್ ತರಗತಿಯ 'ಜೆ' ಸೆಕ್ಷನ್ ವಿದ್ಯಾರ್ಥಿ ನಾನು. 'ಕಾದಂಬರಿ' ಪಠ್ಯಪುಸ್ತಕ. ವಿ.ಸೀ.ಯವರೇ ನಮ್ಮ ಮೇಷ್ಟ್ರು. ಇದಕ್ಕಿಂತ ಹೆಚ್ಚಿನ ಆನಂದ ಬೇಕೇ!

ಕನ್ನಡದಲ್ಲಿ ಕಾದಂಬರೀ ಪಾಠ: ಮಹಾಶ್ವೇತೆಯ ವಿರಹತಾಪ; ಪುಂಡರೀಕನ ತಹತಹ! ಇವುಗಳ ವಿವರಣೆಯನ್ನು ವಿ.ಸೀ.ಯವರ ಬಾಯಿಂದ ಕೇಳಬೇಕು.

ಒಂದು ದಿವಸ ಕಾದಂಬರಿ ಪಾಠ ಮಾಡುತ್ತಿದ್ದಾರೆ. ಮಹಾಶ್ವೇತೆಯ ವಿರಹವನ್ನು ವರ್ಣಿಸುತ್ತಿದ್ದಾಗ ಒಂದು ಮಾತು ಬರುತ್ತದೆ. ಮಹಾಶ್ವೇತೆ ಪುಂಡರೀಕನು ಸಿಗದೆ ಪರಿತಪಿಸುತ್ತಿದ್ದಾಗ, ಬೆಳುದಿಂಗಳಲ್ಲಿ ಚಂದ್ರನನ್ನು ನೋಡುತ್ತಾ, ವಿಹ್ವಲಳಾಗಿ ತನ್ನ ಮನಸ್ಸನ್ನು ತೋಡಿಕೊಂಡು ವಿರಹವ್ಯಥೆ ಯಿಂದ ಚಂದ್ರನನ್ನು ನೋಡಿ, 'ಎಲೆ ಚಂದ್ರಹತಕ, ಕೆಟ್ಟಿನ್ ಓವೋ' ಎಂದು ಕೊರಗುತ್ತಾಳೆ. ಈ ಭಾಗವನ್ನು ಪಾಠಹೇಳಿಕೊಡುವಾಗ ನಾನು ಕಂಡ ವಿ.ಸಿ. ಆಗ ನಿಜವಾಗಿಯೂ ಮಹಾಶ್ವೇತೆಯ ಪಾತ್ರವನ್ನು ಒಳಹೊಕ್ಕು ನುಡಿದವರಂತೆ ಕಂಡರೆಂದರೆ, ನಾನು ಅತಿಶಯೋಕ್ತಿಯನ್ನಾಡುತ್ತಿಲ್ಲ. ಆ ಭಾವೋದ್ರೇಕ, ತಿಳಿಯಾದ ಆ ವಿವರಣೆ, ಹೃದಯ ತುಂಬಿ ಬಂದ ಆ ಮಾತುಗಳು—ಇನ್ನೂ ಕಣ್ಣಿಗೆ ಕಟ್ಟಿದಂತಿವೆ. ಕಾದಂಬರಿ ಪಾಠಮಾಡುತ್ತ, ನಮಗೆ 'ನೋಡಿ' ಹಾಕಿದರು. ವಿ.ಸೀ.ಯವರ ಆ ನೋಡಿ ನಮಗೆ ಇಷ್ಟವಾಗಿತ್ತು.

ವಿ.ಸೀ. ಪಾಠಮಾಡುತ್ತಿದ್ದಾಗ ಕೆಲವು ಸ್ವಾರಸ್ಯವಾದ ವಿಷಯಗಳನ್ನು ತಿಳಿಸುತ್ತಿದ್ದರು. ರುಚಿ ಪಾಠದಲ್ಲಿದ್ದಂತೆ, ಇತರ ವಿಷಯಗಳಲ್ಲಿಯೂ ಇರು ತ್ತಿತ್ತು. ಪಾಠಮಾಡುತ್ತಿರುವಾಗ 'ಸವಿ'ಯ ವಿಚಾರ ಬಂತು. ಆಗ ಹೇಳು ತ್ತಿದ್ದರು: "ರೀ, ತಿನಬೇಕ್ರಿ—ತಿಂದರೆ ಸವಣೂರ ವೀಳೆಯದೆಲೆ ತಿನಬೇಕ್ರಿ.

ಒಂದೆಲೆಗೆ ಒಂದಾಣೆ ಕೊಡಬೇಕ್ರಿ. ಒಂದಾಣೆ ಕೊಟ್ಟು ಒಂದೇ ಎಲೆ ತಿಂದರೂ ಪರವಾಯಿಲ್ಲ. ಆ ಸವಣೂರ ಒಂದಾಣೆಗೆ ಒಂದೇ ಎಲೆ ತಿನಬೇಕ್ರಿ." ಹೃದಯ ತುಂಬಿ ಮಾತನಾಡುವ ಮುಕ್ತಕಂಠದ ವಿ.ಸೀ. ಜೀವನದ ಸವಿಗಳನ್ನೂ ತೃಪ್ತಿಯಾಗುವಂತೆ ಸವಿಯಬೇಕೆಂಬ ಆಸೆ ಅವರದು.

ಒಂದು ದಿನ ಪಾಠಮಾಡುತ್ತಿದ್ದಾಗ ಒಂದು ಉದಾಹರಣೆ ಹೇಳಿದರು: "ರೀ, ನಮ್ಮ ಹತ್ತಿರ ಯಾವುದಾದರೂ ಒಂದು ಒಳ್ಳೆಯ ವಸ್ತುವಿದ್ದರೆ, ಬೇರೆಯವರು, ಅದು ತುಂಬಾ ಚೆನ್ನಾಗಿದೆ ಎಂದರೆ, ಅದು ನಿಮಗೆ ಬೇಕೆ? ಎಂದು ಕೇಳಿ, ಅದನ್ನು ಕೊಡುವ ಅಭಿಲಾಷೆ ತೋರಿಸಬೇಕು." ಕೆಲವು ದಿನಗಳಾದಮೇಲೆ ತರಗತಿಯಲ್ಲಿ ಒಬ್ಬ ಹುಡುಗ ಅವರ ಉದಾಹರಣೆಯನ್ನು ಅವರಿಗೇ ತಿರುಗಿಸಿದ. ವಿ.ಸೀ. ಸೀಟಾದ ಉಡುಪು ಧರಿಸಿ ಬರುತ್ತಿದ್ದರು. ಇಸ್ತ್ರಿಯಾಗಿ ಬಂದ ದಿನವಂತೂ ಆ ಕೋಟು ಬಹಳ ಚೆನ್ನಾಗಿ ಕಾಣುತ್ತಿತ್ತು. ಕಾದಂಬರಿ ಪಾಠಮಾಡುತ್ತಾ ಇದ್ದಾಗ ಮಧ್ಯೆ ನನ್ನ ಸ್ನೇಹಿತನೊಬ್ಬ ಮೆಲ್ಲಗೆ ವಿ.ಸೀ. ಹೇಳಿದ ಉದಾಹರಣೆಯನ್ನು ನೆನಸಿಕೊಂಡು, "ಸಾರ್, ನಿಮ್ಮ ಕೋಟು ಎಷ್ಟು ಚೆನ್ನಾಗಿದೆ, ಸಾರ್" ಎಂದ. ವಿ.ಸೀ.ಗೆ ಈ ಮಾತು ಕೇಳಿಸಿತು. ಕೋಪ ಬಂದು ವಿದ್ಯಾರ್ಥಿಯನ್ನು ತರಗತಿಯಿಂದ ಹೊರಗಟ್ಟಿದರು. ಕಾದಂಬರಿಯಲ್ಲಿ ರಸವತ್ತಾದ ಸನ್ನಿವೇಶವನ್ನು ಹೇಳುತ್ತಿರುವಾಗ, ಮಧ್ಯೆ ಪ್ರವೇಶಿಸಿದ್ದುದನ್ನು ಅವರು ತಡೆಯಲಿಲ್ಲ. ಉಳಿದ ವಿದ್ಯಾರ್ಥಿಗಳಿಗಂತೂ ಈ ವಿಷಯದ ಮರ್ಮವೇ ತಿಳಿಯಲಿಲ್ಲ. ಹತ್ತು ನಿಮಿಷ ಪಾಠವಾದಮೇಲೆ ವಿ.ಸೀ.ಯವರೇ ಗಹಿಗಹಿಸಿ ನಗಲಾರಂಭಿಸಿದರು. ಹೊರಗಟ್ಟಿದ ವಿದ್ಯಾರ್ಥಿ ಮನ್ನಿಸಲ್ಪಟ್ಟು ತರಗತಿಯೊಳಗೆ ಬಂದ. ಗುರುದಕ್ಷಿಣೆಯನ್ನು ಸ್ವೀಕರಿಸಿದ ವಿ.ಸೀ. ಈ ಪ್ರಕರಣವನ್ನು ನೆನಪು ಮಾಡಿಕೊಂಡು ಅಂದು ಅನೇಕ ಸಲ ನಕ್ಕರು. ಅವರೊಂದಿಗೆ ನಾವೂ ನಕ್ಕೆವು. ಹಾಗೆ ಅವರು ನಕ್ಕಾಗ ನಾನು ವಿ.ಸೀ.ಯವರನ್ನು ಕಂಡೆ.

* * * *

ಜೂನಿಯರ್ ಇಂಟರ್‌ನಿಂದ ನಾವು ಸೀನಿಯರ್ ಇಂಟರ್‌ಗೆ ಬಂದಾಗ ಕಾದಂಬರಿ ಪಾಠ ಹೇಳಿಕೊಡಲು ವಿ.ಸೀ.ಯವರನ್ನು ಬದಲಾಯಿಸಿ ಇನ್ನೊಬ್ಬರನ್ನು ಹಾಕಿದರು. ನಾವು ಕೇಳಬೇಕೆ? ಚಳುವಳಿ ಹೂಡಿದೆವು. ಅವರೇ

ನಮಗೆ ಬರಬೇಕೆಂದು ಬೊಬ್ಬೆ ಹಾಕಿದೆವು. ಅಧಿಕಾರಿಗಳು ಕೇಳಲಿಲ್ಲ. ಸರಿ. ಇನ್ನೊಂದು ಸೆಕ್ಷನ್‌ನಲ್ಲಿ ಅದೇ ಪಾಠ ಹೇಳಿಕೊಡುತ್ತಿದ್ದ ಕಾಲಕ್ಕೆ ನಮ್ಮ ತರಗತಿಯ ಮುಕ್ಕಾಲು ಭಾಗ ವಿದ್ಯಾರ್ಥಿಗಳು ಅಲ್ಲಿ ಹೋಗಿ ಕುಳಿತು ಅವರ ಪಾಠ ಕೇಳುತ್ತಿದ್ದೆವು. ಇದೊಂದೇ ನಿದರ್ಶನ ಅವರಲ್ಲಿ ನಮಗಿದ್ದ ಭಕ್ತಿ, ಗೌರವಕ್ಕೆ ಸಾಕ್ಷಿ.

* * * *

ವಿ.ಸೀ. ಮಹಾರಾಜಾ ಕಾಲೇಜಿಗೆ ಬಂದರು. ನಾನು ಬಿ.ಎ. ಓದಲು ಮೈಸೂರಿಗೆ ಬಂದೆ. ವಿ.ಸೀ.ಯವರನ್ನು ಹತ್ತಿರದಲ್ಲಿ ಕಂಡುಕೊಳ್ಳಲು ನನಗೆ ಅವಕಾಶ ದೊರೆಯಿತು. ಅವರ ಭಾಷಣಗಳನ್ನು ನಾವು ಚಾಚೂ ತಪ್ಪದೆ ಕೇಳುತ್ತಿದ್ದೆವು. ಅವರ ಚರ್ಚೆಗಳಲ್ಲಿ ಭಾಗವಹಿಸುತ್ತಿದ್ದೆವು. ವಿ.ಸೀ. ಆಗ ನಮಗೆ ಯಾವ ಪಾಠವನ್ನೂ ತೆಗೆದುಕೊಳ್ಳುತ್ತಿರಲಿಲ್ಲ. ಆದರೂ ಅವರು ನಮ್ಮಲ್ಲಿ ಮಿಳಿತನಾಗಿ ಹಿತವಚನಗಳನ್ನಾಡುತ್ತಿದ್ದರು. ನನ್ನ ಬಗ್ಗೆ ಯಾವಾಗಲೂ ಆತ್ಮೀಯತೆಯಿಂದಿದ್ದ ಅವರು, ಆಗಾಗ್ಗೆ ನನಗೆ ಬುದ್ಧಿವಾದವನ್ನಿತ್ತು, ಸಲಹೆ ಕೊಡುತ್ತಿದ್ದರು. ಮಹಾರಾಜಾ ಕಾಲೇಜಿನ ಕನ್ನಡವಿಭಾಗದ ಮುಖ್ಯಸ್ಥರಲ್ಲೊಬ್ಬರಾದ ಹಿರಿಯ ಸಾಹಿತಿ ವಿ.ಸೀ.ಯವರನ್ನು ನಾನು ಮೈಸೂರಿನಲ್ಲಿ ಕಂಡೆ. ಬಿ.ಎ. ಓದಿ ಮುಗಿಸಿ ನಾನು ಮೈಸೂರನ್ನು ಬಿಟ್ಟೆ. ಅವರೂ ಬೆಂಗಳೂರಿಗೆ ಕನ್ನಡದ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ವರ್ಗವಾದರು.

* * * *

ಮೈಸೂರನ್ನು ಬಿಟ್ಟು ನಾನು ಪ್ರಪಂಚವನ್ನೆಲ್ಲಾ ಸುತ್ತಿಕೊಂಡು ಬಂದೆ! ವಿ.ಸೀ. ಬೆಂಗಳೂರಲ್ಲಿಯೇ ಇದ್ದರು. ಹಾಗೆಯೇ ಇದ್ದರು. ನಮಸ್ಕರಿಸಿದೆ. ಆಶೀರ್ವದಿಸಿದರು. ಅದೇ ನಯ, ಅದೇ ಮೃದುತ್ವ, ಅದೇ ಆತ್ಮೀಯತೆ. ಆಗ ನಾನು ಪುನಃ ವಿ.ಸೀ.ಯವರನ್ನು ಕಂಡೆ.

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ನಾನು 'ಪತ್ರಿಕೋದ್ಯಮ'ದ ಸಹಪ್ರಾಧ್ಯಾಪಕನಾದೆ. ಕೆಲಸಕ್ಕೆ ಸೇರುವ ಮುನ್ನ ವಿ.ಸೀ.ಯವರ ಆಶೀರ್ವಾದ ಪಡೆಯಲು ಸೆಂಟ್ರಲ್ ಕಾಲೇಜಿನ ಅವರ ಕೊಠಡಿಗೆ ಹೋಗಿದ್ದೆ. "ಕೃಷ್ಣಮೂರ್ತಿ, ನೀವಿನ್ನೂ ವಿಶಾಲವಾದ ಪ್ರಪಂಚದಲ್ಲಿ ಸೇವೆಸಲ್ಲಿಸಬೇಕಾದವರು. ಮೈಸೂರ ಮೇಲಿರುವ ಮಮತೆಯಿಂದ ನೀವೀ ಕೆಲಸವನ್ನು ಒಪ್ಪಿಕೊಂಡಂತಿದೆ.

ನಾವೇನೋ ನಿಮಗೆ ಸ್ವಾಗತವೀಯುವೆವು. ಆದರೆ ನಿಮ್ಮ ಸ್ಥಾನ ಇಲ್ಲಿಲ್ಲ. ನೀವಿನ್ನೂ ವಿಶಾಲ ಜಗತ್ತಿನಲ್ಲಿ ಕೆಲಸ ಮಾಡಬೇಕು" ಎಂದು ಹೇಳಿ ಹಿತ ವಚನವಿತ್ತ ಆವರ ಮಾತುಗಳು ನನಗೊಂದು ಶಕ್ತಿಯನ್ನೇ ಕೊಟ್ಟವು. ಅವರು ನನ್ನ ಮೇಲಿಟ್ಟ ವಿಶ್ವಾಸಕ್ಕೆ ನನ್ನ ಕೃತಜ್ಞತೆಯನ್ನು ಸೂಚಿಸಿ, ಆವರ ಹರಕೆ ಯನ್ನು ಹೊತ್ತು ಮೈಸೂರಿಗೆ ಬಂದೆ.

* * * *

ನಾನು ಕಂಡಂತೆ ವಿ.ಸೀ.ಯವರನ್ನು ಅನೇಕ ಜನರು ಅನೇಕ ವಿಧದಲ್ಲಿ ಕಂಡಿದ್ದಾರೆ. ಆದರೆ ವಿ.ಸೀ.ಯವರನ್ನು ೩೬ನೇ ಕನ್ನಡ ಸಾಹಿತ್ಯಸಮ್ಮೇಲನದ ಅಧ್ಯಕ್ಷರನ್ನಾಗಿ ಆರಿಸಿ ಅವರನ್ನು ಇಡೀ ಕನ್ನಡನಾಡೇ ಕಂಡುಕೊಂಡಿತು. ನಾವು ಕಣ್ಣುಬಿಟ್ಟು ವಿ.ಸೀ.ಯವರನ್ನು ಈಗ ನೋಡಿದೆವು. ಈಗಲಾದರೂ ನೋಡಿದೆವಲ್ಲಾ, ನಮಗೆ ಕಾಣಿಸಿಕೊಂಡರಲ್ಲಾ, ಎಂದು ನಾವೇ ಹರ್ಷಪಡ ಬೇಕಾಗಿದೆ.

ನಾವೀಗ ವಿ.ಸೀ.ಯವರನ್ನು ಕಂಡಿದ್ದೇವೆ. ವಿ.ಸೀ.ಯವರೀಗ ಕನ್ನಡ ನಾಡಿನ ಕಣ್ಣು ತೆರೆಯಿಸಿ, ಭುವನೇಶ್ವರೀದೇವಿಗೆ ಕನ್ನಡದ ನಂದಾದೀಪವನ್ನು ಹಚ್ಚಲೆಂದೂ, ಅವರ ಅಧ್ಯಕ್ಷಪದದ ಅವಧಿಯಲ್ಲೇ, ಕನ್ನಡನಾಡು ತನ್ನತನ ಪಡೆಯಲೆಂದೂ ದೇವರನ್ನು ನಾನು ಪ್ರಾರ್ಥಿಸುತ್ತೇನೆ.

ನಾಡಿಗ ಕೃಷ್ಣಮೂರ್ತಿ

ಉಷಾ ಪ್ರೆಸ್, ಮೈಸೂರು

ವಿ.ಸೀ. ಅವರ ಕೃತಿಗಳು

೧. ದೀಪಗಳು
೨. ಗೀತಗಳು
೩. ನೆಳಲು-ಬೆಳಕು
೪. ದ್ರಾಕ್ಷಿ-ದಾಳಿಂಬೆ
೫. ಪಂಪಾಯಾತ್ರೆ
೬. ಹಣಪ್ರಪಂಚ
೭. ಅಶ್ವತ್ಥಾಮನ್
೮. ಆಗ್ರಹ
೯. ಸೋಹ್ರಾಬ್ ರುಸ್ತುಂ
೧೦. ಭಾರತದ ಐವರು ಮಹನೀಯರು
೧೧. ಅಭಿಜ್ಞಾನ ಶಾಕುಂತಲ
೧೨. ಕರ್ನಾಟಕ ಕಾದಂಬರಿ
೧೩. ಭಾರತದ ರಾಜ್ಯಾಂಗ ರಚನೆ
೧೪. ಈಗಿನ ಕವಿ-ಕಾವ್ಯ ದೃಷ್ಟಿ
೧೫. ನಳ-ದಮಯಂತಿ
೧೬. ಶಾಕುಂತಲ
೧೭. ನ್ಯಾಯ
೧೮. ಕಾನೂನು
೧೯. ಧರ್ಮಶಾಸ್ತ್ರ
೨೦. ವ್ಯವಹಾರಧರ್ಮ

ರೂಪಾರಾಧಕ

....ತುಂಬಿದ ಪ್ರೀತಿ, ವಿಶ್ವಾಸಗಳಿಂದ ವಿ.ಸೀ. ಚಹಾ ಕುಡಿಯದವರಿಗೂ ಒಂದೆರಡು ಕಪ್ ಚಹಾ ಕುಡಿಸಬಲ್ಲರು. ಈ ಮಧ್ಯೆ ಗಂಗಾಪ್ರವಾಹದಂತೆ ವಿದ್ವತ್‌ವಿರಾಜಿತವಾದ ಸರಸ ಮಾತುಗಾರಿಕೆ. ಕುಡಿದ ಚಹಾ ನೆನಪಿನಿಂದ ಮರೆಯಾಗಬಹುದು; ಆದರೆ ವಿ.ಸೀ. ಅವರ ಆತಿಥ್ಯ, ಅಂತಃಕರಣ ಮರೆಯಲು ಶಕ್ಯವಿಲ್ಲ....

* * * *

....ಅಚ್ಚುಕಟ್ಟೇ ಕಲೆ ಎಂದು ನಂಬಿದವರು ಅವರು. ಅವರ ವೇಷಭೂಷಣಗಳು, ಅವುಗಳ ಸರಳತೆ ಶುಭ್ರತೆಗಳು ಅವರ ಕಲಾದೃಷ್ಟಿಯ ಸಂಕೇತ. ವಿ.ಸೀ. ಚೆಲುವಿನ ಆರಾಧಕರು. ನಿರ್ಮಲಾಂತಃಕರಣದ ಸೌಮ್ಯ ಮೂರ್ತಿ. ವಿ.ಸೀ. ಬರೆಯುವುದು ಮಾತ್ರ ಕಲೆಯಲ್ಲ; ಅವರು ಬಾಳುವುದೂ ಕಲೆಯೆ !....

* * * *

....ವೀಣೆ ಶೇಷಣ್ಣನವರ ಕಲ್ಯಾಣಿಯಂತೆ, ಗದ್ಯ ಸೀತಾರಾಮಯ್ಯನವರ ಖಾಸಾ ರಾಗ. ಅದನ್ನು ಅವರು ನಡೆಸುವ, ನುಡಿಸುವ, ಹೆಣೆಯುವ ರೀತಿ ಅವರದೇ ಸರಿ....

* * * *

....ವಿ.ಸೀ. ಅವರು ತಮ್ಮ ಕವಿತೆಗಳಲ್ಲಿ ದೈವಪ್ರೇಮ, ಆತ್ಮಪ್ರೇಮ, ಮಾನವಪ್ರೇಮ, ರಾಷ್ಟ್ರಪ್ರೇಮಗಳ ಹಾಡು ಹಾಡಿ ಈ ಪ್ರೇಮದ ಚತುಷ್ಕೋಣದಲ್ಲಿ ಶುಚಿಜೀವನದ ಬಿಂಬವೊಂದನ್ನು ಮೂಡಿಸಿದ್ದಾರೆ. ಆ ಬಿಂಬದ ಆದರ್ಶ ಎಲ್ಲರಿಗೂ ಅನುಸರಣಯೋಗ್ಯವಾದದ್ದು....

* * * *

....ಅವರ ಸ್ವಾತಂತ್ರ್ಯಾಭಿಮಾನ ಬರೀ ರಾಜಕೀಯವಾದುದಲ್ಲ; ಬಹುಮುಖವಾದುದು; ವಿಶ್ವಮುಖವಾದುದು. ಹೀಗೆ ಹೇಳಿದ ಮಾತ್ರಕ್ಕೆ ಆರ್ಷೇಯವಾಗಿ ಬಂದ ಹಿಂದೂ ಸಂಸ್ಕೃತಿಯನ್ನು ಅವರು ಮೂಲೆಗೊತ್ತಿದರೆಂದು ಯಾರೂ ಭಾವಿಸಬಾರದು. ವಿ.ಸೀ. ಎನ್ನುವ ಎರಡಕ್ಷರಗಳಲ್ಲಿಯೇ ಅಡಕವಾಗಿದೆ, ಅವರಲ್ಲಿಯೆ ಪೂರ್ವ ಪಶ್ಚಿಮ ಜೀವನ ಧರ್ಮಗಳ ಸಂಯೋಜನೆ....

* * * *

....ವಿ.ಸೀ.ಯವರು ಆದರ್ಶ ವ್ಯಕ್ತಿಗಳು. ಸತ್ಯಕ್ಕಾಗಿ, ನಿಯಮಕ್ಕಾಗಿ, ಶಿಸ್ತಿಗಾಗಿ ಹೋರಾಡಲು ವಿ.ಸೀ.ಯವರು ಹಿಂಜರಿಯುತ್ತಿರಲಿಲ್ಲ. ಅವರು ತರಗತಿಯಲ್ಲಿಡುತ್ತಿದ್ದ ಶಿಸ್ತು ಅವರ ವ್ಯಕ್ತಿತ್ವದಿಂದಲೇ ಹೊರತು ಪ್ರತಿದಿನವೂ ಅವರು ಶಿಸ್ತಿನ ವಿಷಯವಾಗಿ ಬೋಧಿಸುತ್ತಿರಲಿಲ್ಲ. ತರಗತಿಯಲ್ಲಿ ವಿ.ಸೀ. ಅವರು ತೋರುತ್ತಿದ್ದ ಬಿಗಿ, ಅವರ ಮನೆಗೆ ಹೋದಾಗ ಕರಗಿಹೋಗುತ್ತಿತ್ತು....